# ಕಮಲ ಪಥ

RNI No.:KARKAN/2023/84034 | ಸಂಪುಟ : 01 | ಸಂಚಿಕೆ : 03 | ಜೂನ್ 2023 | ಬೆಂಗಳೂರು | ₹ 10/-

ಸ್ವಾತಂತ್ರ್ಯದ ಅಮೃತ ಮಹೋತ್ಸವ



## 9 ವರ್ಷ

## ಸೇವೆ, ಸುಶಾಸನ, ಬಡವರ ಕಲ್ಯಾಣ

- ನಾರಿ ಶಕ್ತಿ - ರಾಷ್ಟ್ರದ ಪ್ರಗತಿ
- ಬಡವರ ಸೇವೆ - ಅಂತ್ಯೋದಯದ ಅನುಷ್ಠಾನ
- ಯುವ ಶಕ್ತಿ ಆಕಾಂಕ್ಷೆಗಳ ಈಡೇರಿಕೆ
- ರೈತರ ಕಲ್ಯಾಣದ ಖಾತ್ರಿ
- ವಿರಾಸತ್ - ವಿಕಾಸ್
- ಸರ್ವರಿಗೂ ಆರೋಗ್ಯ ರಕ್ಷಣೆ
- ಮೂಲ ಸೌಕರ್ಯದ ಮೂಲಕ ನವ ಭಾರತ ನಿರ್ಮಾಣ
- ರಾಷ್ಟ್ರೀಯ ಸುರಕ್ಷೆ ಮತ್ತು ವಿದೇಶಿ ನೀತಿ
- ವಿಶ್ವಗುರುವಾಗುವತ್ತ ಭಾರತ









ಬಾಲಸೋರ್‌ನಲ್ಲಿ ಜರುಗಿದ ರೈಲ್ವೆ ಅಪಘಾತ ಕುರಿತು ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ – ಅಪಘಾತ ಸ್ಥಳಕ್ಕೆ ಭೇಟಿ ಹಾಗೂ ಗಾಯಾಳುಗಳಿಗೆ ಸಾಂತ್ವನ



ವೀರ ಸಾವರ್ಕರ್ ಜನ್ಮದಿನದಂದು ಪ್ರಧಾನಿ ಶ್ರೀ ಮೋದಿಯವರಿಂದ ಪುಷ್ಪ ನಮನ



'ವಿಶ್ವ ಪರಿಸರ ದಿನ'ದಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ಅವರಿಂದ ಕೇಂದ್ರ ಕಚೇರಿ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ






ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ಅವರಿಂದ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವ ಸರ್ಕಾರದ ಸಾಧನೆಗಳ 'ಅಮೃತ ಕಾಲದೆಡೆಗೆ' ಪುಸ್ತಕ ಲೋಕಾರ್ಪಣೆ

# ದ್ವೇಷದ ರಾಜಕಾರಣ, ಕಲಹಕ್ಕೆ ಕಾರಣ

ಸಾರ್ವಕಾಲಿಕವಾಗಿ ಸರ್ವರಿಗೂ ಅನ್ವಯವಾಗುವ ಉಪದೇಶವೊಂದಿದೆ. Frist THINK, Next DECIED, Then PROCEED. ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಮುನ್ನ ಅದರ ಬಗ್ಗೆ ಚಿಂತನೆ ನಡೆಸಬೇಕು. ಅದರ ಸಾಧಕ ಬಾಧಕಗಳನ್ನು ಪರಾಮರ್ಶಿಸಬೇಕು. ಆಮೇಲೆ ಅದರ ಕಾರ್ಯಾನುಷ್ಠಾನದ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು. ನಂತರ ಮುಂದುವರೆಯಬೇಕು. ಆದರೆ ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಸ್ತುತ ತಳೆಯುತ್ತಿರುವ ನಿಲುವುಗಳು ಈ ಸೂತ್ರಕ್ಕೆ ವ್ಯತಿರಿಕ್ತವಾಗಿರುವುದು ಸ್ಪಷ್ಟವಾಗುತ್ತಿದೆ. ಅದರಲ್ಲೂ 13 ಸಾರಿ ಬಜೆಟ್ ಮಂಡಿಸಿದ, ಸ್ವಯಂಘೋಷಿತ ಆರ್ಥಿಕ ತಜ್ಞರಾದ ಸಿದ್ದರಾಮಯ್ಯನವರೇ ಈ ಗ್ಯಾರಂಟಿಗಳ ಪೂರ್ವಾಪರಗಳ ಯೋಚನೆ ಮಾಡದೆ ಅನುಷ್ಠಾನ ಮಾಡುತ್ತಿರುವುದು ರಾಜ್ಯದ ಪಾಲಿಗೆ ದುರ್ದೈವದ ಸಂಗತಿ ಎನ್ನಲೇ ಬೇಕು. ಆದರೆ ಈ ಗ್ಯಾರಂಟಿಗಳ ಅನುಷ್ಠಾನಗಳು ಭವಿಷ್ಯದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಬೀರುವ ಗಂಭೀರ ಪರಿಣಾಮಗಳ ಬಗ್ಗೆ ನಾಡಿನ ಹಿತ ಬಯಸುವ ಪ್ರತೀ ಪ್ರಜೆಯೂ ಚಿಂತಿತನಾಗಿದ್ದಾನೆ. ಅಧಿಕಾರ, ಸ್ವಾರ್ಥ, ಸ್ವಂತ ಹಿತಕ್ಕೋಸ್ಕರ ರಾಜ್ಯದ ಹಿತವನ್ನೇ ಕಡೆಗಣಿಸುತ್ತಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ನೀತಿಗಳು ಜನತೆ ಮತ್ತು ಬಿಜೆಪಿಗೆ ಉಗುಳಲಾರದ ತುತ್ತಾಗಿದೆ.

ಇದೆಲ್ಲಕ್ಕಿಂತ ಮಿಗಿಲಾಗಿ ರಾಜ್ಯ ಸರಕಾರದ ದ್ವೇಷದ ರಾಜಕಾರಣ ನಿಜಕ್ಕೂ ನಾಡಿನ ಜನತೆಯ ನಡುವಿನ ಸಾಮರಸ್ಯಕ್ಕೆ ಧಕ್ಕೆ ತರುತ್ತಿದೆ. ವಿನಾಕಾರಣ ಸಾಮಾಜಿಕ ಕಾರ್ಯಕರ್ತರ ಮೇಲೆ ದೂರು ದಾಖಲಿಸುತ್ತಿರುವುದು, ಕೆಲವು ಸಾಮಾಜಿಕ ಸೇವಾ ಸಂಘಟನೆಗಳಿಗೆ ನೀಡಿದ ಭೂಮಿಯನ್ನು ವಾಪಸ್ ತೆಗೆದುಕೊಳ್ಳುವ ನಿರ್ಧಾರ ಮಾಡುತ್ತಿರುವುದು ಕಾಂಗ್ರೆಸ್ ಸರಕಾರದ ದುರುದ್ದೇಶದ ರಾಜಕಾರಣಕ್ಕೆ ಒಂದು ಸ್ಪಷ್ಟ ಉದಾಹರಣೆ. ಇಂತಹ ದ್ವೇಷದ ರಾಜಕಾರಣಕ್ಕೆ ರಾಜ್ಯದ ಜನತೆ ತಕ್ಕ ಉತ್ತರ ನೀಡಿಯೇ ತೀರುತ್ತಾರೆ. ಕಾರ್ಯಕರ್ತರ ಪ್ರಚೋದನೆಗೆ ಕಾರಣವಾಗಿರುವ ರಾಜ್ಯ ಸರಕಾರದ ಈ ಕ್ರಮಗಳ ವಿರುದ್ಧ ಬಿಜೆಪಿಯೂ ಬೀದಿಗಿಳಿಯಲೇ ಬೇಕಾಗುತ್ತದೆ. ಬಿಜೆಪಿಯ ಈ ಎಚ್ಚರಿಕೆಯನ್ನು ಕಾಂಗ್ರೆಸ್ ನಾಯಕರು ಗಂಭೀರವಾಗಿ ಪರಿಗಣಿಸದಿದ್ದಲ್ಲಿ ಸಾಮರಸ್ಯದ ಧಕ್ಕೆಯ ಹೊಣೆಯನ್ನು ಅವರೇ ನೇರವಾಗಿ ಹೊರಬೇಕಾಗುತ್ತದೆ.

## ಸಂಪಾದಕೀಯ

ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ತನ್ನ 9 ವರ್ಷಗಳ ಆಡಳಿತಾವಧಿಯನ್ನು ಪೂರೈಸಿದೆ. ಅತ್ಯಂತ ಯಶಸ್ವಿಯಾಗಿ ದೇಶದ ಜನತೆಯ ಅಪೇಕ್ಷೆಗೆ ತಕ್ಕಂತೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಗೌರವವನ್ನು ಇಮ್ಮಡಿಯಾಗಿಸುವಂತಹ ಆಡಳಿತವನ್ನು ನೀಡಿದ ಹಾಗೂ ತಮ್ಮ ವ್ಯಕ್ತಿತ್ವ ಮತ್ತು ಚಾರಿತ್ರ್ಯದಿಂದ ದೇಶದೊಳಗೆ ಹಾಗೂ ಹೊರಗೆ ಮನ ಮನಗಳನ್ನು ಗೆದ್ದ ಮೋದಿ ನಿಜಕ್ಕೂ ಅಭಿನಂದನೆಗೆ ಅರ್ಹರು. ಇಂತಹ ಮೇರು ವ್ಯಕ್ತಿತ್ವಕ್ಕೆ, ನೇತೃತ್ವಕ್ಕೆ ಸರ್ವ ರೀತಿಯ ಶಕ್ತಿ ತುಂಬುವುದು ಪ್ರತೀ ಭಾರತೀಯನ ಕರ್ತವ್ಯ.

ವಿಧಾನಸಭೆಯ ಚುನಾವಣೆಯ ಸೋಲಿನಿಂದ ಸಂಘಟನೆ ಚೇತರಿಸಿಕೊಳ್ಳುತ್ತಿದೆ. ಸಂಘಟನಾತ್ಮಕ ಚಟುವಟಿಕೆಗಳು ಪ್ರಾರಂಭವಾಗಿವೆ. ಜಿಲ್ಲಾ ಸ್ತರದಲ್ಲಿನ ಕಾರ್ಯಕಾರಿಣಿಗಳಲ್ಲಿ ಸೋಲಿನ ಆತ್ಮಾವಲೋಕನವೂ ನಡೆಯುತ್ತಿದೆ. ಸೋಲುಗಳೆಂದೂ ಯಾವುದೇ ಕಾರ್ಯಕರ್ತನನ್ನು ಅಧೀರರನ್ನಾಗಿಸಬಾರದು. ಆತ್ಮವಿಶ್ವಾಸ ತುಂಬುವಂತಹ ಕಾರ್ಯ ನೇತೃತ್ವದಿಂದ ಆಗಬೇಕು. ಸೋಲು ಗೆಲುವಿನ ಮೆಟ್ಟಿಲುಗಳು ಎಂಬ ಸಂಗತಿ ಬಿಜೆಪಿಗೆ ಹೊಸದೇನಲ್ಲ. ಆದರೆ ಗೆಲುವಿನ ತೀವ್ರ ನಿರೀಕ್ಷೆಯಲ್ಲಿದ್ದ ನಮಗೆ ಈ ಸೋಲು ನಮ್ಮದೊಂದಿಷ್ಟು ಆತ್ಮ ವಿಶ್ವಾಸ ಕುಸಿಯಲು ಕಾರಣವಾಗಿರಬಹುದು. ಆದರೆ ಬಿಜೆಪಿಯ ಇತಿಹಾಸದಲ್ಲಿ ಸೋಲನ್ನು ಮೆಟ್ಟಿ ನಿಂತು ಗೆಲುವಿನ ದಡ ಸೇರಿದ ಸಾಕಷ್ಟು ಉದಾಹರಣೆಗಳು ನಮ್ಮ ಮುಂದಿದೆ.

ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನಡೆಗಳ ವಿರುದ್ಧ ಜನತೆಯ ಪರವಾಗಿ ನಿಲ್ಲಬೇಕಾದ ಹೊಣೆಗಾರಿಕೆಯು ನಮ್ಮ ಮೇಲಿದೆ. ಅಧಿಕಾರ ನೀಡದ ನಾಡಿನ ಜನತೆ ಪ್ರಮುಖ ಪ್ರತಿಪಕ್ಷದ ಜವಾಬ್ದಾರಿಯನ್ನು ನೀಡಿದ್ದಾರೆ. ಜನತೆ ನೀಡಿದ ಈ ಜವಾಬ್ದಾರಿಯಿಂದ ವಿಮುಖವಾಗಬಾರದು. ಈ ನಿಟ್ಟಿನಲ್ಲಿ ಬಿಜೆಪಿಯಲ್ಲಿ ನಿರಂತರ ಸಭೆಗಳು ಆರಂಭವಾಗಿದೆ. ಲೋಕಸಭಾ ಚುನಾವಣೆಗಳೂ ಸನ್ನಿಹಿತವಾಗುತ್ತಿವೆ. ಸಕ್ರಿಯರಾಗೋಣ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್

## ಸುಭಾಷಿತ



ಯಾವ ವ್ಯಕ್ತಿಗೆ ಇನ್ನೊಬ್ಬರನ್ನ
ಬೆಳೆಸುವ ದೊಡ್ಡ ಗುಣವಿರುತ್ತೋ
ಆ ವ್ಯಕ್ತಿ ತನಗರಿವಿಲ್ಲದಂತೆಯೇ
ಬಹು ಎತ್ತರಕ್ಕೆ ಬೆಳೆಯುತ್ತಾನೆ...

**– ಗೌತಮ ಬುದ್ಧ**



**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**

ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ




16 ವಿರೋಧ ಮತ್ತು ವಿರೋಧಿಗಳ ಮಧ್ಯೆ ವಿಶ್ವ ವಿಜೇತ ಮೋದಿ



ಪ್ರಧಾನಿ ಶ್ರೀ ಮೋದಿ ಅವರಿಂದ ನೂತನ ಸಂಸದ್ ಭವನ ಲೋಕಾರ್ಪಣೆ 08



ಮೋದಿಯವರ ಗೆಲುವಿನ ನಾಗಲೋಟದಲ್ಲಿನ ಮಗ್ಗಲು ಮುಳ್ಳುಗಳು 20



ನೈತಿಕ ಹೊಣೆಗೆ ಹೊಸ ಅರ್ಥ ಕೊಟ್ಟ ಅಶ್ವಿನಿ ವೈಷ್ಣವ್ 23



ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನೆ 25



ಹೊತ್ತಿ ಉರಿದ ಮಣಿಪುರ 29

- **ದೀವಟಿಗೆ :** ಭಗವಾನ್ ಬಿರ್ಸಾ ಮುಂಡಾ ........................................05
- ಇದೇ ನನ್ನ ಪ್ರಶ್ನೆ ಕೂಡ ........................................................ 06
- **ಮೆಲುಕು:** ಜಾರ್ಜ್ ಫರ್ನಾಂಡಿಸ್ ಸಮಯ ಪ್ರಜ್ಞೆ ...............................07
- ನನಗೆ ಕಾಂಗ್ರೆಸ್‌ನವರು ತುಂಬಾ ಪ್ರಶ್ನೆ ಮಾಡುತ್ತಾರೆ.................................14
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ :** ಹೊ.ಅ.ಅ. ನರಸಿಂಹ ಮೂರ್ತಿ.....32
- **ಮನ್ ಕಿ ಬಾತ್** – ಕಬೀರ, ಸಾವರ್ಕರ್. ಎನ್‌ಟಿಆರ್ ಸ್ಮರಣೆ.....................34

ದೀವಟಿಗೆ

# ಭಗವಾನ್ ಬಿರ್ಸಾ ಮುಂಡಾ

(15 ನವೆಂಬರ್ 1875 – 09 ಜೂನ್ 1900)

ಗಿರೀಶ್ ವಿಠ್ಠಲ ಬಡಿಗೇರ

ನೀವು ಮೊದಲು ಹೆಂಡ ಹಾಗೂ ಮದ್ಯವನ್ನು ಕುಡಿಯುವುದನ್ನು ನಿಲ್ಲಿಸಿ. ಇದರ ಕಾರಣದಿಂದಲೇ ನಮ್ಮ ಭೂಮಿಯನ್ನು ಕಸಿದುಕೊಳ್ಳಲಾಗಿದೆ, ಕುಡಿದೇ ಮಲಗಿರುವುದು ನಮಗೆ ಒಳ್ಳೆಯದಲ್ಲ. ನಮ್ಮ ಎದುರಾಳಿಗಳು ನಮ್ಮನ್ನು ಅಪಹಾಸ್ಯ ಮಾಡುತ್ತಿದ್ದಾರೆ. ನಮ್ಮ ದೇಹಗಳು ಕೊಳೆತು ಹೋಗುತ್ತವೆ ಎಂದು ಬಿರ್ಸಾ ಮುಂಡಾ ಆದಿವಾಸಿಗಳನ್ನು ಬಡಿದೆಬ್ಬಿಸುತ್ತಿದ್ದರು.

ಜಾರ್ಖಂಡ್‌ನ ಮುಂಡಾ ಆದಿವಾಸಿ ಸಮುದಾಯದಲ್ಲಿ ಹುಟ್ಟಿದ ಬಿರ್ಸಾ ಮುಂಡಾ, ಈ ದೇಶ ಕಂಡ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಕೇವಲ ಇಪ್ಪತ್ತೈದು ವರ್ಷಗಳ ಕಾಲ ಬದುಕಿದ್ದ ಈ ಕ್ರಾಂತಿಕಾರಿ ನಾಯಕ ತನ್ನ ಸಮುದಾಯದ ಅಸ್ಮಿತೆಯನ್ನು ಉಳಿಸಿಕೊಳ್ಳುವುದಕ್ಕಾಗಿ, ಈ ನೆಲದ ಮೇಲೆ ತನಗೂ ಹಕ್ಕಿದೆ ಎನ್ನುವುದನ್ನು ತೋರಿಸುವುದಕ್ಕಾಗಿ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ನಡೆಸಿದ ಹೋರಾಟ ಸ್ವಾತಂತ್ರ್ಯ ಹೋರಾಟದ ಇತಿಹಾಸಲ್ಲಿ ಮರೆಯಬಾರದ ವಿದ್ಯಮಾನ.



ಬಿರ್ಸಾ ಹುಟ್ಟಿದ್ದು 1875 ನವೆಂಬರ್ 15 ರಂದು ಝೂರ್ಖಂಡ ರಾಜ್ಯದ ಖುಂಟೀ ಜಿಲ್ಲೆಯ ಉಲಿಹಾತು ಗ್ರಾಮದ ಬಡ ಕುಟುಂಬವೊಂದರಲ್ಲಿ. ಬದುಕಿದ್ದು ಕೇವಲ 25 ವರ್ಷ. ಬದುಕಿದ್ದಾಗಲೇ 'ಭಗವಾನ್ ಬಿರ್ಸಾ ಮುಂಡಾ' ಎಂಬ ಗೌರವಕ್ಕೆ ಭಾಜನನಾದ. ಲಕ್ಷಾಂತರ ಜನರ ಹೃದಯದಲ್ಲಿ ಪೂಜ್ಯತೆಯ ಸ್ಥಾನವನ್ನು ಪಡೆದ.

ತನ್ನ ಗ್ರಾಮದಲ್ಲಿಯೇ ಇದ್ದ ಕ್ರೈಸ್ತ ಶಾಲೆಗೆ ಸೇರಿದ ಬಿರ್ಸಾ, ಕ್ರೈಸ್ತನನ್ನು ಪೂಜಿಸಬೇಕೆಂಬ ಒತ್ತಡ ಬಂದಾಗ ಆ ಚಿಕ್ಕ ವಯಸ್ಸಿನಲ್ಲೇ ವಿರೋಧಿಸಿ ಹೊರಬಂದ. ತನ್ನ ಮನೆಯ ದೇವರ ಬಗ್ಗೆ ಅಪಾರ ಭಕ್ತಿ, ಪರಂಪರೆಗಳ ಬಗ್ಗೆ ಅಪಾರ ಶ್ರದ್ಧೆ ಇದ್ದ ಬಿರ್ಸಾ ತನ್ನ ದೇವರ ಅಪಮಾನವನ್ನು ಸಹಿಸಲಿಲ್ಲ. ಅವನ ಹೃದಯದಲ್ಲಿ ಹತ್ತಿದ ಬೆಂಕಿ ದಾವಾನಲವಾಗಿ ಬೆಳೆಯತೊಡಗಿತು. ಜನರ ಮೇಲೆ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯವನ್ನು ಸಹಿಸದಾದ.

1894ರಲ್ಲಿ ಭೀಕರ ಬರಗಾಲ. ಜನ ತಿನ್ನುವ ಒಂದೊಂದು ತುತ್ತಿಗೂ ತತ್ವಾರವಿದ್ದಾಗ ನಿರ್ದಯಿ ಬ್ರಿಟಿಷ್ ಸರ್ಕಾರ ತೆರಿಗೆ ವಸೂಲಿಗೆ ಹಿಂಸಿಸತೊಡಗಿತು. ಇದಕ್ಕೆ ಕೊನೆ ಹಾಡಲೇಬೇಕೆಂದು ತನ್ನ 18 ನೇ ವಯಸ್ಸಿನಲ್ಲಿಯೇ ಜನರನ್ನು ಸಂಘಟಿಸಲು ಆರಂಭಿಸಿದ. ಜನಗಳಿಗೆ ಸೈನಿಕ ತರಬೇತಿ ನೀಡಿ, ಸೈನ್ಯವನ್ನು ಕಟ್ಟಿದ ಬಿರ್ಸಾ ಮುಂಡಾ.

1895 ರಲ್ಲಿ ತೆರಿಗೆ ಮುಕ್ತಿ ಆಂದೋಲನ ನಡೆಸಿ ಜೈಲು ಸೇರಿದ. ಎರಡು ವರ್ಷ ಕಠೋರ ಜೈಲು ಶಿಕ್ಷೆ ಅನುಭವಿಸಿದ. 1897 ರಲ್ಲಿ ಬಿಡುಗಡೆಯಾದ ನಂತರ ಮತ್ತೆ ಆಂದೋಲನ ಮುಂದುವರೆಸಿದ ಬಿರ್ಸಾ. 400 ಜನ ತನ್ನ ಸೈನಿಕರ ಸಹಾಯದಿಂದ ಖುಂಟೀ ಪೊಲೀಸ್ ಠಾಣೆಯ ಮೇಲೆ ದಾಳಿ ಮಾಡಿದ. 1898 ರಲ್ಲಿ ತಾಂಗಾ ನದಿಯ ದಡದಲ್ಲಿ ನಡೆದ ಯುದ್ಧದಲ್ಲಿ ಬ್ರಿಟಿಷರನ್ನು ಸೋಲಿಸಿದ. ಮೊದಲ ಜಯವೇನೋ ದೊರಕಿತು ಆದರೆ ಇದರ ದುಷ್ಪರಿಣಾಮವನ್ನು ನೂರಾರು ಜನ ಅನುಭವಿಸುವಂತಾಯಿತು. ನೂರಾರು ಜನರನ್ನು ಬಂಧಿಸಲಾಯಿತು. ಚಿತ್ರಹಿಂಸೆಗೆ ಗುರಿಪಡಿಸಲಾಯಿತು. ಇಷ್ಟಾದರೂ ಜನರ ಹೋರಾಟ ನಿಲ್ಲಲಿಲ್ಲ.

1900 ರಲ್ಲಿ ಡೊಂಬರಿ ಪರ್ವತದಲ್ಲಿ ನಡೆದ ಭೀಕರ ಸಂಘರ್ಷದಲ್ಲಿ ತುಂಬಾ ಜನ ಮಹಿಳೆಯರು ಮಕ್ಕಳು ಸಾವನ್ನಪ್ಪಬೇಕಾಯಿತು. ಇಲ್ಲಿಯೇ ಬಿರ್ಸಾ ಮತ್ತೆ ಬಂಧಿತನಾದ. ಜೈಲಿನಲ್ಲಿದ್ದಾಗಲೇ ಆಹಾರದಲ್ಲಿ ವಿಷ ಬೆರೆಸಿ ಬಿರ್ಸಾನನ್ನು ಕೊಲ್ಲಲಾಯಿತು. 1900 ಜೂನ್ 9 ರಂದು ಬಿರ್ಸಾ ಕೊನೆಯುಸಿರೆಳೆದ.

ಝೂರ್ಖಂಡ, ಬಿಹಾರ್, ಛತ್ತೀಸಗಡ್, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾಗಳ ಲಕ್ಷಾಂತರ ಜನ ಇಂದಿಗೂ 'ಬಿರ್ಸಾ ಮುಂಡಾ' ರನ್ನು ದೇವರೆಂದು ಪೂಜಿಸುತ್ತಾರೆ.

24 ಆಕ್ಟೋಬರ್ 2021 ರ 'ಮನ್ ಕೀ ಬಾತ್' ನಲ್ಲಿ 'ಭಗವಾನ್ ಬಿರ್ಸಾ ಮುಂಡಾ'ನ ಸಾಹಸಗಾಥೆಯನ್ನು ನೆನಪಿಸಿದ ಪ್ರಧಾನಿ ಶ್ರೀ ಮೋದಿಯವರು. ಅವನ ಜಯಂತಿಯ ನಿಮಿತ್ತ ನವೆಂಬರ್ 15 ರಂದು ಪ್ರತಿ ವರ್ಷ 'ಜನಜಾತಿ ಗೌರವ ದಿವಸ'ವನ್ನಾಗಿ ಆಚರಿಸಲಾಗುವುದು ಎಂದು ಘೋಷಿಸಿದರು. ಕೊನೆಗೂ ಸ್ವಾಧೀನತೆಯ 74 ನೇ ವರ್ಷದಲ್ಲಿ 'ಬಿರ್ಸಾ'ರಿಗೆ ಗೌರವ ಸಿಕ್ಕಂತೆ ಆಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟವೆಂದರೆ ಮೇಲ್ಜಾತಿ ಮತ್ತು ಮೇಲ್ವರ್ಗದ ಸುಶಿಕ್ಷಿತ ನಾಯಕರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟ ಎನ್ನುವ ಚರಿತ್ರೆಗಳ ನಡುವೆ ತಮ್ಮ ನೆಲ, ಸಂಸ್ಕೃತಿಯನ್ನು ಬಿಟ್ಟುಕೊಡಲು ಒಪ್ಪದೆ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಹೋರಾಟ ಮಾಡಿ ಬಂಧನಕ್ಕೊಳಗಾಗಿ ಜೈಲಿನಲ್ಲೆ ಮೃತಪಟ್ಟ ಧೀರ ಬಿರ್ಸಾ ಮುಂಡಾನನ್ನು ನೆನೆಯುವ ಮೂಲಕ ಈ ದೇಶದ ಮೂಲನಿವಾಸಿಗಳು ನಡೆಸಿದ ಹೋರಾಟವನ್ನು ಗೌರವಿಸೋಣ. ಆ ಮೂಲಕ ಚರಿತ್ರೆಯಲ್ಲಿ ಹುದುಗಿಸಿಟ್ಟಿರುವ ತಳಸಮುದಾಯದ ಹೋರಾಟಗಾರರನ್ನು ಮುಖ್ಯವಾಹಿನಿಗೆ ತರೋಣ.

# ಇದೇ ನನ್ನ ಪ್ರಶ್ನೆ ಕೂಡ...

ಪರಮಾನಂದ.ಎಂ.ಎಸ್
ರಾಜ್ಯ ಕಾರ್ಯದರ್ಶಿ, ಎಸ್ ಸಿ ಮೋರ್ಚಾ

**ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದು ಮುಖ್ಯವಲ್ಲ,**
**ಯಾರಿಗಾಗಿ ಖರ್ಚಾಗುತ್ತದೆ ಎನ್ನುವುದು ಮುಖ್ಯ.** –ಸಿದ್ದರಾಮಯ್ಯ

ಬೀದಿಯ ಒಂದು ಬದಿಯಲ್ಲಿ ಭೀಕ್ಷುಕರು ಮತ್ತೊಂದು ಬದಿಯಲ್ಲಿ ಸಣ್ಣ ಸಣ್ಣ ವ್ಯಾಪಾರ ಮಾಡುವವರು ಕುಳಿತಿರುತ್ತಾರೆ. ನಾವು ನಮ್ಮ ಧಿಮಾಕುಗಳನ್ನು ತೋರಿಸಲು ಭಿಕ್ಷುಕರಿಗೆ ಹಣ ನೀಡುವಂತೆ ವ್ಯಾಪಾರಿಗಳಿಗೂ ನೀಡುವುದಿಲ್ಲ. ಅವರ ವಸ್ತುಗಳಿಗೆ 2 ರೂಪಾಯಿ ಹೆಚ್ಚಿಗೆ ಲಾಭದ ಹಣ ಪಡೆಯುತ್ತಾರೆ ವಿನಃ ಬಿಟ್ಟಿ ಹಣ ಪಡೆಯುವುದಿಲ್ಲ...

ಮಾಡಿದ ಪಾಪಗಳನ್ನು ತನ್ನ ದಾನ ಧರ್ಮಗಳಿಂದ ಕಳೆದುಕೊಳ್ಳುವುದಕ್ಕಾಗಿ ಭಿಕ್ಷುಕರಿಗೆ ಹಣ ನೀಡುವ ಮೂಲಕ ಭಿಕ್ಷಾ ಸಂತತಿಯನ್ನು ಸಾಕುತ್ತಿರುತ್ತಾನೆ. ಭಿಕ್ಷುಕರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದೇ ಸಬಲೀಕರಣ. ಇಡೀ ಸಮಾಜವನ್ನು ಬೇಡುವ ಸ್ಥಿತಿಯಲ್ಲಿ ಇಡುವುದನ್ನು ಅಭಿವೃದ್ಧಿ ಎಂದು ಪ್ರಚಾರ ಮಾಡಿಕೊಂಡರೆ ಅದನ್ನು ಅಂದಾಭಿಮಾನಿಗಳಷ್ಟೇ ಮೆಚ್ಚಿಕೊಳ್ಳಬೇಕು.

ಹೆಣ್ಣುಮಕ್ಕಳಿಗೆ ನೀವು ರೂ 50/– ನೀಡುವುದನ್ನು ಸಾಧನೆ ಎಂದು ಕೊಚ್ಚಿಕೊಳ್ಳುವುದಕ್ಕಿಂತ ದಿನಕ್ಕೆ ಕನಿಷ್ಠ 500/– ಸಂಪಾದನೆ ಮಾಡುವ ಕೌಶಲ್ಯ ಬೆಳೆಸುವ ತರಬೇತಿ ಕೊಟ್ಟು ಸಾಲದ ರೂಪದಲ್ಲಿ ಬಂಡವಾಳ ಕೊಟ್ಟು ಆ ಹೆಣ್ಣು ಮಕ್ಕಳು ಬದುಕು ಕಟ್ಟಿಕೊಳ್ಳುವಲ್ಲಿ ಸಹಕಾರಿಯಾಗಿದ್ದರೆ ಅದು ಮೆಚ್ಚುವ ಯೋಜನೆಯೇ ಆಗಿರುತ್ತಿತ್ತು.

ಆರ್ಥಿಕ ದುರ್ಬಲರಿಗೆ ಕೊಡುವ ಯೋಜನೆಗಳು ನಿಜವಾಗಿಯೂ ಮೆಚ್ಚುವಂತಹ ಸಂಗತಿಯೇ, ಆದರೇ ಎಲ್ಲರಿಗೂ ಕೊಡುವುದಾದರೆ. ಇದು ರಾಜ್ಯವನ್ನು ಆರ್ಥಿಕ ದಿವಾಳಿಗೆ ತಳ್ಳುವ ಯೋಜನೆಯಾಗಿದೆ. ಮೈಸೂರು ವಿಭಾಗ ಒಂದರಿಂದಲೇ ದಿನಕ್ಕೆ 63 ಲಕ್ಷದ 42 ಸಾವಿರ ಹಣ ಹೊರೆಯಾಗಲಿದೆ ಎಂದು ಅಲ್ಲಿನ ವಿಭಾಗಾಧಿಕಾರಿಗಳು ತಿಳಿಸಿದ್ದಾರೆ. ಈಗಾಗಲೇ ದಿನಕ್ಕೆ 25 ಲಕ್ಷ ನಷ್ಟದಲ್ಲಿರುವ ಮೈಸೂರು ವಿಭಾಗದ ಸಾರಿಗೆ ಇಲಾಖೆಗೆ ಲಾಭದಾಯಕ ಯೋಜನೆ ರೂಪಿಸುವ ಬದಲು ಕಾಂಗ್ರೆಸ್ ಸರ್ಕಾರ ತನ್ನ ಬಿಟ್ಟಿ ಗ್ಯಾರಂಟಿ ಪ್ರತಿಷ್ಠೆಗೆ ಇಲಾಖೆಯನ್ನೇ ಮುಚ್ಚುವ ಹುಚ್ಚುತನಕ್ಕೆ 'ಕೈ' ಹಾಕಿದೆ.

ಸರ್ಕಾರದ ಅಂದಾಜಿನ ಪ್ರಕಾರ ವರ್ಷಕ್ಕೆ ಹತ್ತು ಸಾವಿರ ಕೋಟಿ ಹೊರೆಯಾಗುವ ಈ ಬಿಟ್ಟಿ ಯೋಜನೆಯ ಬದಲಾಗಿ 'ಸ್ತ್ರೀ ಸ್ವಾವಲಂಬಿ ಯೋಜನೆ' ರೂಪಿಸಿ ಬಡ ಮಹಿಳೆಯೊಬ್ಬಳಿಗೆ ಕನಿಷ್ಠ 3 ಲಕ್ಷ ಸಾಲ ನೀಡಿದ್ದರೆ ವರ್ಷಕ್ಕೆ ಲಕ್ಷಾಂತರ ಬಡ ಹೆಣ್ಣುಮಕ್ಕಳು ತಮ್ಮ ಬದುಕು ಕಟ್ಟಿಕೊಳ್ಳುತ್ತಿದ್ದರು. ಕಮ್ಯುನಿಸ್ಟ್ ಆಗಲಿ, ಸಮಾಜವಾದವಾಗಲಿ, ಜಾತ್ಯತೀತವಾಗಲಿ, ಬಲಪಂಥವಾಗಲಿ ಪ್ರತಿಯೊಂದು ಸಿದ್ಧಾಂತಕ್ಕೂ ಅವರದೇ ಆದ ಆರ್ಥಿಕ ಆಲೋಚನೆಗಳು, ಆರ್ಥಿಕ ತತ್ವಗಳು ಅಥವಾ ನಿಯಮಗಳಿರುತ್ತವೆ. ನಿಮ್ಮ ಈ ಗ್ಯಾರಂಟಿಗಳು ಯಾವ ತತ್ವದ ಅಡಿಯಲ್ಲಿ ಬರುತ್ತಿವೆ. ಬಡವ ತತ್ವ ಎಂದು ಹೊಸ ಪದ ಬಳಸುವಂತೆಯೂ ಇಲ್ಲಾ...

ಇತ್ತೀಚಿಗೆ ವಿಶ್ವವಿದ್ಯಾನಿಲಯ ಕ್ಯಾಂಪಸ್‌ಗಳಲ್ಲಿ ಬುದ್ಧಿಜೀವಿಗಳನ್ನು ಹಿಡಿದು ತಂದು ಅಲ್ಲಿಯ ವಿದ್ಯಾರ್ಥಿಗಳನ್ನು ನಂಬಿಸಲು ಹರಸಾಹಸ ಮಾಡುತ್ತಾ ಈ ಬಿಟ್ಟಿ ಯೋಜನೆಗಳು ರಾಜ್ಯಶಾಸ್ತ್ರದಲ್ಲಿ 'welfare of the state' ಕಲ್ಯಾಣ ರಾಜ್ಯದ ನಿಯಮದಲ್ಲಿ ಬರುತ್ತದೆ ಎಂದು ಸುಳ್ಳೇ ಭೋದಿಸಲಾಗುತ್ತಿದೆ. ಆದರೇ ಕಲ್ಯಾಣ ರಾಜ್ಯದ ತತ್ವದಲ್ಲಿ ಬರುವುದು ಆರೋಗ್ಯ, ಶಿಕ್ಷಣ ಮತ್ತು ಆರ್ಥಿಕ ದುರ್ಬಲರಿಗಾಗಿ ಆರ್ಥಿಕ ಭದ್ರತೆ ಯೋಜನೆ ರೂಪಿಸುವುದಾಗಿರುತ್ತದೆ. ಈ ಬಿಟ್ಟಿ ಯೋಜನೆಗಳಿಂದ ಕಾಳಸಂತೆಯಲ್ಲಿ ಹಣ ಮಾಡಿಕೊಳ್ಳುವ ಭ್ರಷ್ಟಾಚಾರಿಗಳಿಗೆ ಭದ್ರತೆ ಒದಗಿಸಿಕೊಡಬಲ್ಲದೆ ಹೊರತು ಯಾವ ಸಮುದಾಯದ ಬಡವರಿಗೂ ಇದು ಆರ್ಥಿಕ ಭದ್ರತೆ ಒದಗಿಸಿಕೊಡುವುದಿಲ್ಲ. ಮತ್ತು ಇದು welfare of the state ನಿಯಮದಲ್ಲಿ ಬರುವುದಿಲ್ಲ.

ಹಾಗಾಗಿಯೇ ಮಾನ್ಯ ಸಿದ್ದರಾಮಯ್ಯನವರೇ ನನ್ನದೂ ನಿಮ್ಮದು ಒಂದೇ ಪ್ರಶ್ನೆ...

**ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದು ಮುಖ್ಯವಲ್ಲ,**

**ಯಾರಿಗಾಗಿ ಖರ್ಚಾಗು(ತ್ತಿ)ದೆ ಎನ್ನುವುದು ಮುಖ್ಯ.**

ಮುಂದೊಂದು ದಿನ ಚಾಲಕರು ಮತ್ತು ನಿರ್ವಾಹಕಾರ ಕುಟುಂಬ ಮತ್ತೊಮ್ಮೆ ವಿಧಾನಸೌಧದ ಮುಂದೆ ತಟ್ಟೆ ಬಡಿಯುತ್ತ ಕೂರುತ್ತಾರೆ.... ಆ ದಿನ ನಾನು ಮತ್ತೇ ನನ್ನ ಈ ಬರಹವನ್ನು ಈಗಿನ ಅವಿವೇಕದ ನಿಮ್ಮ ಕಾಂಗ್ರೆಸ್ ಸರ್ಕಾರದ ನೆನಪಿಗಾಗಿ ಮತ್ತೊಮ್ಮೆ ಹಂಚಿಕೊಳ್ಳುತ್ತೇನೆ.

ಅಲ್ಲಿಯತನಕ 'ಈ ಶತಮಾನದ ಸ್ವಾಭಿಮಾನಿ ಹೆಣ್ಣಿಗೆ ಶುಭಾಶಯಗಳು...

ಮೆಲುಕು

# ಜಾರ್ಜ್ ಫರ್ನಾಂಡಿಸ್ ಸಮಯ ಪ್ರಜ್ಞೆ

1977 ರ ಚುನಾವಣೆಯಲ್ಲಿ ಸೋತು, ಅಧಿಕಾರ ಕಳೆದುಕೊಂಡಿದ್ದ ಇಂದಿರಾ ಗಾಂಧಿಗೆ 1978ರ ಚುನಾವಣೆ ರಾಜಕೀಯ ಪುನರ್ಜನ್ಮ ಕೊಟ್ಟಿತು. ಅಲಹಾಬಾದಿನ ತನ್ನ ಸಂಸತ್ ಕ್ಷೇತ್ರವನ್ನು ಕಳೆದುಕೊಳ್ಳುವ ಭಯದಿಂದ ದೇಶಕ್ಕೆ ತುರ್ತು ಪರಿಸ್ಥಿತಿ ಹೇರಿದ್ದ ಇಂದಿರಾ ಗಾಂಧಿ ನಂತರದ ಚುನಾವಣೆಯಲ್ಲಿಯೂ ಅವರೂ ಸೋಲುತ್ತಾರೆ, ಅವರ ಪಕ್ಷವೂ ಅಧಿಕಾರ ಕಳೆದುಕೊಳ್ಳುತ್ತದೆ. ಕಾಂಗ್ರೆಸ್ ಪಕ್ಷ ಆ ಕಾಲಕ್ಕೆ ಭದ್ರ ಕೋಟೆಯೇ ಆಗಿದ್ದ ಚಿಕ್ಕಮಗಳೂರಿನ ಸಂಸದರಾಗಿದ್ದ ಡಿ.ಬಿ. ಚಂದ್ರೇ ಗೌಡರ ರಾಜೀನಾಮೆಯಿಂದ ತೆರವಾದ ಕ್ಷೇತ್ರಕ್ಕೆ ಇಂದಿರಾ ಗಾಂಧಿ ಸ್ಪರ್ಧಿಸಿದರು. ಇವರ ವಿರುದ್ಧ ಜನಸಂಘದಿಂದ ವೀರೇಂದ್ರ ಪಾಟೀಲರು ಸ್ಪರ್ಧಿಸಿದರು. ಅಂದಿಗೆ ಇಡೀ ಜಗತ್ತೇ ಈ ಕ್ಷೇತ್ರದ ಫಲಿತಾಂಶವನ್ನು ಕಾದು ನೋಡುತ್ತಿತ್ತು.



ಕಾಂಗ್ರೆಸ್ ಪಕ್ಷಕ್ಕೆ ಹಣ ಬಲವೂ ಇತ್ತು, ತೋಳ್ಬಲವೂ ಇತ್ತು, ಆದರೆ ಇವರ ವಿರುದ್ಧ ಸ್ಪರ್ಧೆಗೆ ಇಳಿದ ಜನಸಂಘಕ್ಕೆ ತನ್ನ ಕಾರ್ಯಕರ್ತರ ಪಡೆ, ತಾನು ನಂಬುವ ವೈಚಾರಿಕ ಸಿದ್ಧಾಂತ, ಜೊತೆಗಿರುವ ಸಮಾಜದ ಸಹಾನುಭೂತಿ ಇಷ್ಟೇ. ಅದಗಾಲೇ ತಮ್ಮ ಕಾರ್ಯ ಶೈಲಿಯಲ್ಲಿ ದೇಶದ ಜನಮಾನಸದಲ್ಲಿ ಹೆಸರಾಗಿದ್ದ ಜಾರ್ಜ್ ಫರ್ನಾಂಡಿಸ್ ಕೇಂದ್ರದ ಮಂತ್ರಿಗಳಾಗಿದ್ದರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳಕ್ಕೆ ಪ್ರಚಾರಕ್ಕೆ ಬರುತ್ತಾರೆ. ಕಾರ್ಕಳ ಆ ಕಾಲಕ್ಕೆ ಜನಸಂಘದ ಗಟ್ಟಿ ಮತ ಕ್ಷೇತ್ರಗಳಲ್ಲಿ ಒಂದಾಗಿತ್ತು. ಬೋಳಾರ ರಘುರಾಮ ಶೆಟ್ಟಿಯವರು ಇಲ್ಲಿಂದ 1964ರಲ್ಲೇ ಜನಸಂಘದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಆದರೂ ಚುನಾವಣೆಯಲ್ಲಿ ಸ್ಪರ್ಧಿಸಲು ಆರ್ಥಿಕ ಸಂಪನ್ಮೂಲದ ಅಗತ್ಯ ಇದ್ದೇ ಇರುತ್ತದೆ. ಇದನ್ನು ಆಗಿನ ಕಾಲದಲ್ಲಿ ಹೊಂದಿಸುವುದು ಸವಾಲಿನ ಸಂಗತಿಯೇ. ಹೀಗೇ ಕಾರ್ಕಳದಲ್ಲಿ ಚುನಾವಣೆಗೆ ಹಣ ಹೊಂದಿಸುವುದು ಹೇಗಪ್ಪ ಎಂದು ತಲೆ ಮೇಲೆ ಕೈ ಹೊತ್ತು ಕೂತಿರುವ ಕಾರ್ಯಕರ್ತರನ್ನು ಜಾರ್ಜ್ ಫರ್ನಾಂಡೀಸ್ ಗಮನಿಸಿದರು. ಕಾರ್ಯಕರ್ತರ ಬಳಿ ಮಾತನಾಡಿ ಅವರ ಸಮಸ್ಯೆಯ ಅರಿವಾದದ್ದೇ ತಡ ಅಲ್ಲಿಂದ ಕೂಡಲೆ ಪಕ್ಕದ ಅಂಗಡಿಗೆ ತೆರಳಿ ಒಂದು ಬಕೆಟ್ ಕೊಂಡು ಬಂದರು. ಜಾರ್ಜ್ ಫರ್ನಾಂಡಿಸ್ ಏನು ಮಾಡುತ್ತಿದ್ದಾರೆ ಅಥವಾ ಏನು ಮಾಡಲು ಹೊರಟಿದ್ದಾರೆ ಎಂಬುದು ಸ್ವಲ್ಪ ಹೊತ್ತು ಯಾರ ಅರಿವಿಗೂ ಬರಲಿಲ್ಲ. ಅಲ್ಲಿ ಚಿಂತಾಕ್ರಾಂತರಾಗಿ ಕುಳಿತಿದ್ದ ಕಾರ್ಯಕರ್ತರಿಗೆ ಜಾರ್ಜ್ ಫರ್ನಾಂಡಿಸ್ ನಮ್ಮ ಬಳಿ ಚುನಾವಣ ವೆಚ್ಚಕ್ಕೆ ಹಣ ಇಲ್ಲ, ಇದು ವಾಸ್ತವ. ಇದನ್ನ ನಮ್ಮ ಸಮಾಜದ ಮುಂದೆ ಹೇಳೋಣ, ಅವರು ಖಂಡಿತ ನಮ್ಮ ಸಹಾಯಕ್ಕೆ ಬರುತ್ತಾರೆ ಎಂದು ಹೇಳಿ ಬಕೆಟ್ ಹಿಡಿದು  ಕಾರ್ಕಳ ಪೇಟೆಯ ಸುತ್ತ ಬಂದಾಗ ಸುಮಾರು ಹದಿನೈದು ಸಾವಿರ ರೂಪಾಯಿ ಸಂಗ್ರಹವಾಗಿತ್ತು.

ಜಾರ್ಜ್ ಫರ್ನಾಂಡಿಸ್ ಅವರ ಸಮಯ ಪ್ರಜ್ಞೆ ನಿಜಕ್ಕೂ ಕಾರ್ಯಕರ್ತರ ಉತ್ಸಾಹ ಹೆಚ್ಚಿಸಿತು. ಸಮಸ್ಯೆಗಳು ಎದುರಾದಾಗ ಹೇಗೆ ಹೊಸ ಹೊಸ ರೀತಿಯ ಯೋಚನೆಗಳನ್ನು ಉತ್ತಮ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯರೂಪಕ್ಕೆ ತಂದರೆ ಸಮಾಜ ಯಾವತ್ತೂ ಅಂತಹ ವಿಚಾರಗಳ ಜೊತೆ ಇರುತ್ತದೆ ಎಂಬುದು ಸಾಬಿತಾಯಿತು.  ಈ ಚುನಾವಣೆಯಲ್ಲಿ ಇಂದಿರಾಗಾಂಧಿ ಗೆದ್ದರು, ಆದರೆ ಆ ಚುನಾವಣೆ ಕಾರ್ಯಕರ್ತರಿಗೊಂದು ಜಾರ್ಜ್ ಫರ್ನಾಂಡಿಸ್‌ರಿಂದ ಕಲಿತ ಪಾಠವಾಗಿತ್ತು.







### ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರಿಂದ

# ನೂತನ ಸಂಸತ್ ಭವನ

### ಲೋಕಾರ್ಪಣೆ

ರಾಷ್ಟ್ರದ ಶಕ್ತಿ ಕೇಂದ್ರ, ಪ್ರಜಾಪ್ರಭುತ್ವದ ದೇಗುಲ, ದೇಶದ ವಿವಿಧ ಸಂಸ್ಕೃತಿಯನ್ನು ಬಿಂಬಿಸುವ ಮತ್ತು ದೇಶದ ವಿವಿಧ ಕಲಾಕೃತಿಗಳನ್ನೊಳಗೊಂಡು ನಿರ್ಮಿಸಲಾದ ಸಂಸತ್ ನೂತನ ಭವನವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಲೋಕಾರ್ಪಣೆ ಮಾಡುವುದರ ಮೂಲಕ ದೇಶದ ಐತಿಹಾಸಿಕ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಕ್ಷಣಗಳನ್ನು ಜನತೆಗೆ ನೀಡಿದ್ದಾರೆ.





ಸಂಸತ್ ದೇಶದ ಹೆಮ್ಮೆ. ಸಂದೇಶವನ್ನು ರಾಜ್ಯಸಭಾ ಉಪ ಸಭಾಪತಿ ಶ್ರೀ ಹರಿವಂತ್ ಅವರು ಓದಿದ್ದು ಹಾಗೂ ಪ್ರಧಾನಿ ಶ್ರೀ ನರೇಂದ್ರ ಮೋದಿಯಿಂದ ಸಂಸತ್ ನೂತನ ಭವನ ಉದ್ಘಾಟನೆಗೊಂಡಿರುವದು ಸ್ವಾಗತಾರ್ಹ. ಸಂಸತ್ ನೂತನ ಭವನ ಇಡೀ ದೇಶದ ಹೆಮ್ಮೆ. ಇದು ಇಡೀ ದೇಶಕ್ಕೆ ಅಪಾರ ಸಂತೋಷದ ವಿಷಯವಾಗಿದೆ. ನೂತನ ಸಂಸತ್ ಭವನ ಉದ್ಘಾಟನೆ ದೇಶದ ಇತಿಹಾಸ ಪುಟದಲ್ಲಿ ಸುವರ್ಣಾಕ್ಷರದಲ್ಲಿ ಬರೆಯಲ್ಪಡುತ್ತದೆ. ಸಂಸತ್ತು ದೇಶಕ್ಕೆ ಮಾರ್ಗದರ್ಶಕ, ಪ್ರಜಾಪ್ರಭುತ್ವದ ಪಯಣದಲ್ಲಿ ಇದೊಂದು ಪ್ರಮುಖ ಮೈಲಿಗಲ್ಲು

**- ದ್ರೌಪದಿ ಮುರ್ಮು, ಮಾನ್ಯ ರಾಷ್ಟ್ರಪತಿಗಳು**



ಬ್ರಿಟಿಷರಿಂದ ಅಧಿಕಾರ ಹಸ್ತಾಂತರದ ಸಂಕೇತವಾಗಿದ್ದ ಐತಿಹಾಸಿಕ 'ಸೆಂಗೋಲ್'ಗೆ ನಾವು ನಿಜ ಗೌರವ ಸಲ್ಲಿಸಿದಂತಾಗಿದೆ. ಇದು ನಮ್ಮ ಉಜ್ವಲ ಭವಿಷ್ಯದ ಸಂಕೇತವಾಗಿದ್ದು, ಪವಿತ್ರ ಸೆಂಗೊಲ್ ನಮ್ಮ ಪ್ರತಿಷ್ಠೆ, ಇದು ಗೌರವ ಮುರುಸ್ಥಾಪಿಸಲು ಹಾಗೂ ಸದಾ ಪ್ರೇರಣೆ ನೀಡಲು ನೆರವಾಗಲಿದೆ.

**-ನರೇಂದ್ರ ಮೋದಿ ,**
**ಮಾನ್ಯ ಪ್ರಧಾನಮಂತ್ರಿಗಳು**

### ನೂತನ ಸಂಸತ್ ಭವನದಿಂದ ನಮೋ ನುಡಿ

# ಭಾರತ ಅಭಿವೃದ್ಧಿಯಿಂದ ವಿಶ್ವದ ಉನ್ನತಿ

ನೂತನ ಸಂಸತ್ ಭವನ ಸಂಕೀರ್ಣವು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದ ನಮ್ಮ ಸಂಕಲ್ಪದ ಸಾಕಾರಕ್ಕೆ ಸಾಕ್ಷಿಯಾಗಲಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಘೋಷಿಸಿದರು. ಇಲ್ಲಿನ ಪ್ರತಿ ಇಟ್ಟಿಗೆ, ಗೋಡೆ ಬಡವರ ಕಲ್ಯಾಣಕ್ಕೆ ಸಮರ್ಪಿತವಾಗಬೇಕು, ಇಲ್ಲಿ ರೂಪಿಸಲ್ಪಡುವ ಹೊಸ ಕಾನೂನುಗಳು ಮುಂದಿನ 15 ವರ್ಷಗಳಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವಂತಾಗಬೇಕು, ಭಾರತ ಅಭಿವೃದ್ಧಿ ಹೊಂದಿದಾಗ ಇಡೀ ವಿಶ್ವದ ಉನ್ನತಿಯಾಗುತ್ತದೆ ಎಂದು ಹೇಳಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕರು ತ್ಯಾಗ ಮತ್ತು ಬಲಿದಾನ ಮಾಡಿದ್ದಾರೆ ಹಾಗೂ ದೇಶದ ಉನ್ನತಿ, ಅಭಿವೃದ್ಧಿಗಾಗಿ ಅನೇಕ ಮಹನೀಯರು ಹಗಲಿರುಳು ಶ್ರಮಿಸಿದ್ದಾರೆ. ಭಾರತ ಲೋಕತಂತ್ರದ ಜನಕ, ನಮ್ಮ ವೇದಗಳು ಹಾಗೂ ಮಹಾಭಾರತದಲ್ಲಿ ಪ್ರಜಾಪ್ರತಂತ್ರದ ಬಗ್ಗೆ ಹೇಳಲಾಗಿದೆ. ಬಸವೇಶ್ವರರ ಅನುಭವ ಮಂಟಪ ಪ್ರಜಾಪ್ರಭುತ್ವದ ಪರಿಕಲ್ಪನೆ ನೀಡಿತು, ಸರ್ವಧರ್ಮ ಪ್ರಾರ್ಥನೆಯೊಂದಿಗೆ ನೂತನ ಸಂಸತ್ ಭವನ ನಿರ್ಮಾಣಗೊಂಡು ಪ್ರಜಾಪ್ರಭುತ್ವದ ಮಂದಿರವಾಗಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಹೇಳಿದರು.

ಭಾರತವು ಅಭಿವೃದ್ಧಿ ಹೊಂದಿದಾಗ ಇಡೀ ವಿಶ್ವ ಪ್ರಗತಿ, ಉನ್ನತಿ ಹೊಂದುತ್ತದೆ. ಭಾರತ ಪ್ರಗತಿಯ ಮುನ್ನಡೆ ಸಾಧಿಸುತ್ತಿರುವಂತೆಯೇ ನೂತನ ಸಂಸತ್ ಭವನ ಕೂಡ ವಿಶ್ವದ ಪ್ರಗತಿಗೆ ಕೊಡುಗೆ ನೀಡಲಿದೆ. ನೂತನ ಸಂಸತ್ ಭವನವು ಆತ್ಮನಿರ್ಭರ ಭಾರತದ ಹೊಸ ಅರುಣೋದಯಕ್ಕೆ ಹಾಗೂ ಅಭಿವೃದ್ಧಿಯ ಭಾರತದೆಡೆಗಿನ ಪಯಣಕ್ಕೆ ಸಾಕ್ಷಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಬಿ.ವೈ. ಚಂದ್ರಚೂಡ್, ಮಾಜಿ ರಾಷ್ಟ್ರಪತಿ ಶ್ರೀ ರಾಮನಾಥ್ ಕೋವಿಂದ್, ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ, ಬಿಜೆಪಿ ರಾಷ್ಟ್ರಾಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ಶ್ರೀ ಅಮಿತ್ ಶಾ, ಡಾ. ಎಸ್. ಜೈರಂಕರ್, ಶ್ರೀ ರಾಜನಾಥ್ ಸಿಂಗ್, ಶ್ರೀ ಅಶ್ವಿನಿ ವೈಷ್ಣವ್, ಶ್ರೀ ಮನ್ಸುಖ್ ಮಾಂಡವಿಯಾ, ಶ್ರೀ ಜಿತೇಂದ್ರ ಸಿಂಗ್ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್, ಮಾಪಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ಏಕನಾಥ ಶಿಂಧೆ, ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ಜಗನ್ ಮೋಹನ್ ರೆಡ್ಡಿ, ಅಸ್ಸಾಂನ ಮುಖ್ಯಮಂತ್ರಿ ಶ್ರೀ ಹಿಮಂತ್ ಬಿಸ್ವಾ ಶರ್ಮಾ ಸೇರಿದಂತೆ ಹಲವು ಗಣ್ಯರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.





**ಧಾರ್ಮಿಕ ವಿಧಿ ವಿಧಾನ**

ಬೆಳಗ್ಗೆ 7 ಗಂಟೆಯಿಂದಲೇ ಆರಂಭವಾದ ಧಾರ್ಮಿಕ ವಿಧಿವಿಧಾನಗಳಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ಸಭಾಪತಿ ಶ್ರೀ ಓಂ ಬಿರ್ಲಾ ಅವರು ಭಾಗಿಯಾಗಿದ್ದರು. ಹಿಂದು ಸಂಪ್ರದಾಯದಂತೆ ಹೋಮ, ಹವನ ಮಾಡುವ ಮೂಲಕ ದೇಶದ ಹೆಮ್ಮೆಯ ಕಟ್ಟಡವನ್ನು ಲೋಕಾರ್ಪಣೆ ಮಾಡಲಾಗಿದೆ, ಸಂಸತ್ ನೂತನ ಭವನ ಉದ್ಘಾಟನಾ ಸಮಾರಂಭದ ಕೇಂದ್ರ ಬಿಂದುವಾಗಿದ್ದ ಸಂಗೋ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪನೆ ಮಾಡಲಾಗಿದೆ.

**ಅಧೀನಮ್‌ಗಳ ಆಶೀರ್ವಾದ**



ತಮಿಳುನಾಡಿನ ವಿವಿಧ ದೇವಾಲಯಗಳಿಂದ ಆಗಮಿಸಿದ್ದ ಅಧೀನದ ಸಂತಗಣರಿಂದ ಆಶೀರ್ವಾದ ಪಡೆದು, ಅವರಿಂದ 'ಸೆಂಗೋಲ್' ಸ್ವೀಕರಿಸಿ ಲೋಕಸಭಾಧ್ಯಕ್ಷರ ಪೀಠದ ಬಲಗಡೆ ಸ್ಥಾಪಿಸಿದರು. ಸೆಂಗೋಲ್‌ನ್ನು 1947ರ ಆಗಸ್ಟ್ 14ರ ರಾತ್ರಿ ಬ್ರಿಟೀಷರಿಂದ ಪ್ರಥಮ ಪ್ರಧಾನಿ ದಿ. ಜವಹರಲಾಲ್ ನೆಹರೂ ಅವರು ಸ್ವೀಕರಿಸಿದ್ದರು. ನೂತನ ಭವನದ ಉದ್ಘಾಟನೆ ವೇಳೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದೀರ್ಘದಂಡ ನಮಸ್ಕಾರ ಮಾಡಿ ಗೌರವ ಸಲ್ಲಿಸಿದ್ದು ವಿಶೇಷವಾಗಿತ್ತು .

# 6 ಸುಳ್ಳು...
# ವಿರೋಧ - ವಾಸ್ತವ?

**ಮಿಥ್ಯ: ಹೊಸ ಸಂಸತ್ ಭವನ ನಿರ್ಮಿಸಿ ಭಾರತದ ಇತಿಹಾಸವನ್ನು ಮರೆ ಮಾಡಲಾಗುತ್ತಿದೆ.**

**ಸತ್ಯ :** ಭಾರತದ ಇತಿಹಾಸ ಮೊಘಲರ, ಬ್ರಿಟಿಷರ ಹಾಗೂ ನೆಹರು ಕಾಲದಿಂದ ಆರಂಭವಾದದ್ದಲ್ಲ, ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಈ ಇತಿಹಾಸವನ್ನು ಪ್ರಧಾನಿ ಶ್ರೀ ಮೋದಿಯವರು ಮರೆಮಾಚಿಲ್ಲ, ಪ್ರಧಾನಿ ಶ್ರೀ ಮೋದಿ ವಿರೋಧಿಗಳಿಗೆ ಭಾರತದ ಇತಿಹಾಸ ಕಥೆ - ಪುರಾಣದಂತೆ ಕಂಡರೆ ಅದು ಅವರ ಅಜ್ಞಾನದ ಸಂಕೇತ. ಇದಕ್ಕೆ ಪ್ರಧಾನಿ ಶ್ರೀ ಮೋದಿ ಅವರು ಹೊಣೆಗಾರರಲ್ಲ. ಸ್ವತಂತ್ರ ಭಾರತದ ಇತಿಹಾಸವೆಂದರೆ ನೆಹರು, ಗಾಂಧಿ ಪರಿವಾರ ಎನ್ನುವ ಮಟ್ಟಿಗೆ ಬಿಂಬಿಸಲಾಗಿತ್ತು, ಆಸ್ಥಾನ ಪಂಡಿತರು ಬರೆದ ಕಥೆಯನ್ನೇ ಇತಿಹಾಸವೆಂದು ನಂಬಿಕೊಂಡಿದ್ದವರಿಗೆ ನೂತನ ಸಂಸತ್ ಭವನದಲ್ಲಿ ಭಾರತದ ಭವ್ಯ ಇತಿಹಾಸ, ಪರಂಪರೆ ಹೇಳಲು ಹೊರಟಿದ್ದನ್ನು ಸಹಿಸಲಾಗುತ್ತಿಲ್ಲ. ಭಾರತದ ಎಲ್ಲ ಪ್ರಧಾನಿಗಳಿಗೆ ಸಮಾನ ಅವಕಾಶ ನೀಡಿ ಪ್ರಧಾನಿಗಳ ವಸ್ತುಸಂಗ್ರಹಾಲಯವನ್ನು ನಿರ್ಮಿಸಿದ್ದು ಪ್ರಧಾನಿ ಶ್ರೀ ಮೋದಿಯವರು.

**ಮಿಥ್ಯ: ಸೆಂಗೋಲ್ ಮೂಲಕ ಪ್ರಜಾಪ್ರಭುತ್ವದಿಂದ ರಾಜಪ್ರಭುತ್ವದ ಕಡೆಗೆ ಹೆಜ್ಜೆ:**

**ಸತ್ಯ :** ಸೆಂಗೋಲ್ ಅಥವಾ ರಾಜದಂಡ ಎನ್ನುವುದು ರಾಜಪ್ರಭುತ್ವದ ಪ್ರತೀಕ, ಧಾರ್ಮಿಕ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ರಾಜದಂಡವನ್ನು 'ವಾಕಿಂಗ್ ಸ್ಟಿಕ್' ಎಂದು ಹೇಳುವವರು ಪ್ರಜಾಪ್ರಭುತ್ವದ ಪಾಠ ಮಾಡುತ್ತಿರುವುದು ವಿಚಿತ್ರ ಭಾರತದ ಪರಂಪರೆ ಹಾಗೂ ಸಂಸ್ಕೃತಿಗೆ ನಮ್ಮ ಪ್ರಜಾಪ್ರಭುತ್ವದಲ್ಲಿ ಜಾಗ ಕೊಟ್ಟರೆ ಸಂವಿಧಾನಕ್ಕೆ ಯಾವುದೇ ಅಪಚಾರ ಆಗುವುದಿಲ್ಲ.

**ಮಿಥ್ಯ: ಮೂಲಭೂತವಾದಿ ಬ್ರಾಹ್ಮಣರನ್ನು ಮಾತ್ರ ಕರೆದು ನೂತನ ಸಂಸತ್ ಭವನದ ಉದ್ಘಾಟನೆ**

**ಸತ್ಯ :** ಸೆಂಗೋಲ್ ಪ್ರತಿಷ್ಠಾಪನೆಗಾಗಿ ನೂತನ ಸಂಸತ್ ಭವನಕ್ಕೆ ಬಂದ ಅಧೀನಂ ಮಠ ಪರಂಪರೆಯ ಶ್ರೀಗಳನ್ನು ಮೂಲಭೂತವಾದಿ ಬ್ರಾಹ್ಮಣರು ಎಂದು ಕೆಲ ರಾಜಕೀಯ ಮುಖಂಡರು ಹಾಗೂ ಬೆಂಬಲಿಗರು ಹೇಳುತ್ತಿದ್ದಾರೆ. ಬ್ರಾಹ್ಮಣರನ್ನು ಬೈಯದಿದ್ದರೆ ತಿಂದ ಅನ್ನ ಮೈಗೆ ಹತ್ತದ ಮನಸ್ಥಿತಿಯವರಿಗೆ ಅಧೀನಂ ಕೂಡ ಬ್ರಾಹ್ಮಣರಂತೆ ಕಂಡಿದ್ದಾರೆ, ಅಧೀನಂ ಬ್ರಾಹ್ಮಣರಲ್ಲ, ಶೈವ ಪರಂಪರೆ ಪಾಲಿಸುವವರು.

**ಮಿಥ್ಯ: ಪರಿಶಿಷ್ಟಪಂಗಡದ ರಾಷ್ಟ್ರಪತಿಗೆ ಅವಮಾನ**

**ಸತ್ಯ :**ಸಂಸತ್ತು ಹಾಗೂ ದೇಶದ ಆಡಳಿತ ವ್ಯವಸ್ಥೆಯಲ್ಲಿ ರಾಷ್ಟ್ರಪತಿಯವರಿಗೆ ಉನ್ನತ ಸ್ಥಾನವಿದೆ, ಆದರೆ ಕಟ್ಟಡ ಉದ್ಘಾಟನೆಗೆ ಅವರೇ ಬರಬೇಕು ಎನ್ನುವುದಕ್ಕೆ ಯಾವುದೇ ಸಂವಿಧಾನಬದ್ಧ ಚೌಕಟ್ಟಿಲ್ಲ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಕಟ್ಟಡ ಉದ್ಘಾಟಿಸಿದರೆ ಕಾಂಗ್ರೆಸ್‌ಗೆ ಬಿಸಿತುಪ್ಪವಾಗುತ್ತದೆ. ಇದಕ್ಕಾಗಿಯೇ ಕಾಂಗ್ರೆಸ್ ಹಾಗೂ ಕೆಲ ಪ್ರತಿಪಕ್ಷಗಳು ಸಂವಿಧಾನ, ಮಾನ-ಮರ್ಯಾದೆಯ



**ಸರ್ವಧರ್ಮ ಪ್ರಾರ್ಥನೆ**

ನೂತನ ಭವನ ಉದ್ಘಾಟನೆಯಲ್ಲಿ ಸರ್ವಧರ್ಮೀಯರ ಸಮ್ಮಿಲನ, ಭಾರತ ಜಾತ್ಯತೀತ ರಾಷ್ಟ್ರವೆಂಬುದನ್ನು ಎತ್ತಿತೋರಿಸಿದೆ. ವಿವಿಧ ಧರ್ಮದ ಮುಖಂಡರು ಪ್ರಾರ್ಥನೆ ಸಲ್ಲಿಸುವ ಮೂಲಕ ಸೌಹಾರ್ದದ ಸಂದೇಶವನ್ನು ಸಾರಿದರು.
12 ವಿವಿಧ ಧಾರ್ಮಿಕ ನಾಯಕರಿಂದ ಪ್ರಾರ್ಥನೆ ಸಲ್ಲಿಸಲಾಯಿತು.

**ಶೃಂಗೇರಿ ಮಠದ ಪುರೋಹಿತರಿಂದ ವೇದಘೋಷ**

ನೂತನ ಸಂಸತ್ ಭವನ ಉದ್ಘಾಟನೆಗೆ ಮುನ್ನ ಪ್ರಧಾನಿಯವರು ಗಣಪತಿ ಹವನವನ್ನು ನೆರವೇರಿಸಿದ ನಂತರ ಶೃಂಗೇರಿ ಮಠದ ಪುರೋಹಿತರಿಂದ ವೇದಘೋಷ ನಡೆಯಿತು.
2020ರಲ್ಲಿ ನೂತನ ಸಂಸತ್ ನೂತನ ಭವನಕ್ಕೆ ಅಡಿಪಾಯದ ಪೂಜಾ ವಿಧಿವಿಧಾನವನ್ನು ಶೃಂಗೇರಿ ಮಠದ ಪುರೋಹಿತರುಗಳೇ ನಡೆಸಿಕೊಟ್ಟಿದ್ದರು.



**75 ರೂ. ನಾಣ್ಯ, ಅಂಚೆ ಚೀಟಿ ಬಿಡುಗಡೆ**

ನೂತನ ಸಂಸತ್ ಭವನದ ಉದ್ಘಾಟನೆಯ ಸ್ಮರಣಾರ್ಥ ಪ್ರಧಾನಿ ಶ್ರೀ ಮೋದಿ ಅವರು ಅಂಚೆ ಚೀಟಿ ಮತ್ತು 76 ರೂ. ನಾಣ್ಯವನ್ನು ಬಿಡುಗಡೆ ಮಾಡಿದರು.
ನಾಣ್ಯದ ತೂಕ 35.35 ಗ್ರಾಂ, ನಾಣ್ಯದ ಒಂದು ಬದಿಯಲ್ಲಿ ಅಶೋಕ ಸ್ತಂಭದ ಸಿಂಹದ ಚಿತ್ರವಿದೆ, ಅದರ ಸುತ್ತಲೂ ದೇವನಾಗರಿ ಲಿಪಿಯಲ್ಲಿ 'ಭಾರತ್' ಮತ್ತು ಇಂಗ್ಲಿಷ್‌ನಲ್ಲಿ 'ಇಂಡಿಯಾ' ಎಂದು ಮುದ್ರಿಸಲಾಗಿದೆ.
ಸಿಂಹದ ಲಾಂಛನದ ಕೆಳಗೆ ಅಂಕಿಗಳಲ್ಲಿ 75 ರೂಪಾಯಿ ಎಂದು ಮುದ್ರಿಸಲಾಗಿದೆ. ನಾಣ್ಯದ ಇನ್ನೊಂದು ಬದಿಯಲ್ಲಿ ಸಂಸತ್ ಭವನದ ಚಿತ್ರ ಮತ್ತು 2023 ಎಂದು ಮುದ್ರಿಸಲಾಗಿದೆ.

ಗಂಭೀರ ನೆಪ ಹೇಳುತ್ತಿದ್ದಾರಷ್ಟೆ, ವನವಾಸಿ ಮಹಿಳೆಯರ ಬಗ್ಗೆ ಅಷ್ಟೊಂದು ಗೌರವವಿದ್ದರೆ ಶ್ರೀ ಯಶ್ವಂತ್ ಸಿನ್ಹಾ ರಾಷ್ಟ್ರಪತಿ ಚುನಾವಣೆಯಲ್ಲಿ ಪ್ರತಿಪಕ್ಷಗಳ ಅಭ್ಯರ್ಥಿ ಆಗುತ್ತಿರಲಿಲ್ಲ.

**ಮಿಥ್ಯ :** ಸಂಸತ್‌ನ ಹಳೆಯ ಭವನ ಇರುವಾಗ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ಹೊಸ ಕಟ್ಟಡ ನಿರ್ಮಾಣಕ್ಕೆ ಹಣದ ದುರ್ಬಳಕೆ.

**ಸತ್ಯ :** ವಿಶ್ವದ ಐದನೇ ದೊಡ್ಡ ಆರ್ಥಿಕತೆಯ ದೇಶವಾದ ಭಾರತ ಸಂಸತ್ ಭವನಕ್ಕೆ ಸಾವಿರ ಕೋಟಿ ಖರ್ಚು ಮಾಡದ ಸ್ಥಿತಿಯಲ್ಲಿದೆಯೇ? ಹೆದ್ದಾರಿ ಮಾಡಿದರೆ ಇಷ್ಟು ಒಳ್ಳೆಯ ಹೆದ್ದಾರಿ ಬೇಕಿತ್ತಾ ಎನ್ನುತ್ತಾರೆ, ಮಾಡದಿದ್ದರೆ ಈ ಸರ್ಕಾರ ಏನು ಮಾಡಿದೆ ಎಂದು ಪ್ರಶ್ನಿಸುತ್ತಾರೆ. ಅಷ್ಟಕ್ಕೂ ಈ ನೂತನ ಸಂಸತ್ ಭವನ ಪ್ರಧಾನಿ ಶ್ರೀ ಮೋದಿ ಅವರ ಕನಸಿನ ಕೂಸಲ್ಲ, ಸಂಸತ್ ಭವನ ನಿರ್ಮಾಣ ಪ್ರಸ್ತಾವನೆಯನ್ನು ಮೊದಲು ಮುಂದಿಟ್ಟಿದ್ದೇ ಯುಪಿಎ ಕಾಲಾವಧಿಯ ಸ್ಪೀಕರ್ ಶ್ರೀಮತಿ ಮೀರಾಕುಮಾರಿ. ಅಮೇರಿಕದ ಅಧ್ಯಕ್ಷರಾಗಿದ್ದ ಶ್ರೀ ಬರಾಕ್ ಒಬಾಮಾ ಅವರು ಸಂಸತ್ತಿಗೆ ಭೇಟಿ ನೀಡಿದ್ದಾಗ ಸಂಸದರು ಹಾಗೂ ಗಣ್ಯರು ಕೂತಿದ್ದನ್ನು ನೋಡಿ ಮುಜುಗರ ಪಡುವಂತಾಗಿತ್ತು. ಇನ್ನೊಂದು ವರ್ಷದಲ್ಲಿ ಸಂಸತ್ ಸದಸ್ಯರ ಸಂಖ್ಯೆ ಕೂಡ ಏರಿಕೆಯಾಗಲಿರುವುದರಿಂದ ಇಂತಹದೊಂದು ಭವ್ಯ ಭವನದ ಅಗತ್ಯವಿತ್ತು . ಅಲ್ಲದೆ, ಹಳೆಯ ಭವನ ನಿರ್ಮಾಣವಾಗಿ 96 ವರ್ಷವಾಗಿತ್ತು.

**ಮಿಥ್ಯ: ಪ್ರಧಾನಿ ಶ್ರೀ ಮೋದಿ ಅವರಿಂದ ಸರ್ವಾಧಿಕಾರದ ವರ್ತನೆ**

**ಸತ್ಯ :** ಸಂಸತ್ ಭವನ ಅಥವಾ ಪ್ರಾಜೆಕ್ಟ್ ವಿಸ್ತಾ ಮೂಲಕ ಪ್ರಧಾನಿ ಶ್ರೀ ಮೋದಿಯವರು ಸ್ವಂತ ಮನೆ ಕಟ್ಟಿಸುತ್ತಿಲ್ಲ, ಸರ್ಕಾರಿ ಬಂಗಲೆಯನ್ನೇ ತಮ್ಮ ಮನೆಯನ್ನಾಗಿಸಿಕೊಂಡವರ ಬಾಯಲ್ಲಿ ಸರ್ವಾಧಿಕಾರದ ಮಾತು ಭೂತದ ಬಾಯಲ್ಲಿ ಭಗವದ್ಗೀತೆ ಕೇಳಿದಂತಿದೆ. ಪ್ರಧಾನಿ ಶ್ರೀ ಮೋದಿಯವರು ಸರ್ವಾಧಿಕಾರಿಯಾಗಿದ್ದರೆ ಹೊಸ ಸಂಸತ್ ಭವನದಲ್ಲಿ ಭಾರತದ ಪರಂಪರೆ ಅನಾವರಣಗೊಳ್ಳುತ್ತಿರಲಿಲ್ಲ.



**ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಂದ ಕಾರ್ಮಿಕರಿಗೆ ಶಾಲು ಹಾಗೂ ಸ್ಮರಣಿಕೆ ನೀಡುವ ಮೂಲಕ ಸನ್ಮಾನ**


## ಸಮಸ್ತ ಜನತೆಯ ಕಲ್ಯಾಣಕ್ಕೆ ಸಮರ್ಪಣೆ



ನೂತನ ಸಂಸತ್ ಭವನದಲ್ಲಿ ತೆಗೆದುಕೊಳ್ಳುವ ಪ್ರತಿ ನಿರ್ಣಯ ಬರುವ ದಿನಗಳಲ್ಲಿ ಸಾಕಷ್ಟು ಮಹತ್ವವಾಗುತ್ತದೆ. ಇಲ್ಲಿ ತೆಗೆದುಕೊಳ್ಳುವ ಪ್ರತಿ ನಿರ್ಣಯ ಭಾರತದ ಉಜ್ವಲ ಭವಿಷ್ಯದ ಆಧಾರವಾಗಲಿದೆ. ಇಲ್ಲಿ ತೆಗೆದುಕೊಳ್ಳುವ ಪ್ರತಿ ನಿರ್ಣಯ ಬಡವರ ಪಾಲಿನ ಆಶಾಕಿರಣವಾಗಲಿದೆ. ಈ ನೂತನ ಸಂಸತ್ ಬಡವರ ಕಲ್ಯಾಣಕ್ಕಾಗಿ ಸಮರ್ಪಿತವಾಗಿದೆ. ಇಲ್ಲಿ ನಿರ್ಮಿಸಲಿರುವ ಕಾನೂನುಗಳು ಬಡವರ, ಯುವಶಕ್ತಿಯ ಏಳಿಗೆ ಸೇರಿದಂತೆ ಸಮಸ್ತ ಜನತೆಯ ಕಲ್ಯಾಣಕ್ಕೆ ಸಮರ್ಪಣೆಯಾಗಿದೆ. ದೇಶದ ಸಮಸ್ತ ಜನತೆಗೆ ನೂತನ ಭವನ ನಿರ್ಮಾಣದ ಶುಭಾಶಯಗಳು.

**-ಪ್ರಧಾನಿ ಶ್ರೀ ನರೇಂದ್ರ ಮೋದಿ**

## ದೇಶದ ಪ್ರಗತಿಗೆ ಸಾಕ್ಷಿ



**ನೂತನ ಸಂಸತ್ ಭವನ ರಾಜಕೀಯ ಒಮ್ಮತ ಸೃಷ್ಟಿಸಲು ಸಹಾಯ ಮಾಡುತ್ತದೆ ಮತ್ತು ಗುಲಾಮಗಿರಿಯ ಮನಸ್ಥಿತಿಯಿಂದ ಸ್ವಾತಂತ್ರ್ಯದ ಸಂಕೇತವಾಗಿ ಕಾರ್ಯನಿರ್ವಹಿಸುತ್ತದೆ. ಈ ಭವನ ದೇಶದ ಜನರ ಆಶೋತ್ತರಗಳಿಗೆ ಪರಿಹಾರ ನೀಡುತ್ತದಲ್ಲದೆ, ದೇಶದ ಪ್ರಗತಿಗೆ ಸಾಕ್ಷಿಯಾಗಲಿದೆ.**

**- ಜಗದೀಶ್ ಧಂಖಾರ್,**
**ಮಾನನೀಯ ಉಪರಾಷ್ಟ್ರಪತಿಗಳು ಹಾಗೂ ರಾಜ್ಯಸಭಾ ಅಧ್ಯಕ್ಷರು**

ನೂತನ ಸಂಸತ್ ಭವನಕ್ಕೆ

# ಕೆಂಪು ಹಸಿರು ರತ್ನಗಂಬಳಿ ಮೆರಗು





## ಲೋಕಸಭೆ ಮತ್ತು ರಾಜ್ಯ ಸಭೆಯ ಸಭಾಂಗಣದ ಅಳತೆ 17,500 ಚದರ ಅಡಿ

- ಲೋಕಸಭೆಯಲ್ಲಿ ಹಸಿರು ರಾಜ್ಯಸಭೆಯಲ್ಲಿ ಕೆಂಪು ಕಾರ್ಪೆಟ್.
- ಉತ್ತರ ಪ್ರದೇಶದ ಭದೋಹಿ ಮತ್ತು ಮಿರ್ಜಾಪುರದ 900 ಕುಶಲಕರ್ಮಿಗಳು 10 ಲಕ್ಷ ಗಂಟೆಗಳ ಕಾಲ ಶ್ರಮಿಸಿ ರತ್ನಗಂಬಳಿ ನೇಯ್ದಿದ್ದಾರೆ.
- ಸೆಪ್ಟೆಂಬರ್ 2021 ರಿಂದ ಮೇ 2022ರ ವರೆಗೆ ಕಾರ್ಪೆಟ್ ನೇಯಲಾಗಿದೆ.

## ಒಟ್ಟುಗೂಡಿದ ವಿವಿಧ ರಾಜ್ಯದ ವೈಶಿಷ್ಟ್ಯ

- ಉತ್ತರ ಪ್ರದೇಶದ ಮಿರ್ಜಾಪುರದ ರತ್ನಗಂಬಳಿ.
- ತ್ರಿಪುರಾದ ಬಿದಿರು ನೆಲಹಾಸು.
- ರಾಜಸ್ಥಾನದ ಕಲ್ಲಿನ ಕಲಾಕೃತಿ, ಕೆಂಪು ಮತ್ತು ಬಿಳಿ ಮರಳು, ಅಮೃತಶಿಲೆ.
- ಮಹಾರಾಷ್ಟ್ರದ ನಾಗ್ಪುರದ ತೇಗದ ಮರ.
- ಉದಯಪುರದ ಹಸಿರು ಕಲ್ಲು.
- ಅಜ್ಮೇರ್‌ನ ಲಾಖಾದ ಕೆಂಪು ಗ್ರಾನೈಟ್.
- ದಮನ್ ಮತ್ತು ದಿಯು ಕೇಂದ್ರಾಡಳಿತ ಪ್ರದೇಶದಿಂದ ಸೀಲಿಂಗ್‌ಗಳಿಗೆ ಉಕ್ಕಿನ ಬಳಕೆ.
- ಮುಂಬೈನಿಂದ ಪೀಠೋಪಕರಣ
- ಮಧ್ಯಪ್ರದೇಶದ ಇಂದೋರ್‌ನಿಂದ ಅಶೋಕ ಚಕ್ರ
- ನಿರ್ಮಾಣಕ್ಕೆ ಹರಿಯಾಣಾದ ಎಂ-ಸ್ಯಾಂಡ್ -ಮರಳು.
- ಭವನ ನಿರ್ಮಾಣದಲ್ಲಿ ಗುಜರಾತ್‌ನ ಹಿತ್ತಾಳೆ ಬಳಕೆ.

## ಅತ್ಯಾಧುನಿಕ ಮೂಲಸೌಕರ್ಯ

- ವೇಗದ ಅಂತರ್ಜಾಲದ ವ್ಯವಸ್ಥೆ.
- ಅತ್ಯಾಧುನಿಕ ಸಿಸಿಟಿವಿ.
- ಕಾಗದದ ಬಳಕೆಯನ್ನು ತಗ್ಗಿಸಲು ಶ್ರೇಷ್ಟ ಗುಣಮಟ್ಟದ ಡಿಜಿಟಲ್ ಸಾಧನಗಳ ಅಳವಡಿಕೆ.
- ಸೂರ್ಯನ ಕಿರಣಗಳು ನೇರವಾಗಿ ಸಭಾಂಗಣದ ಒಳ ಪ್ರವೇಶಿಸುವಂತೆ ವಿನ್ಯಾಸ.
- ಸೌರಶಕ್ತಿ ಪ್ರೇರಿತ ವಿದ್ಯುತ್ ಬಳಕೆ.

## ವಿಶ್ವದ 4ನೇ ಅತಿದೊಡ್ಡ ಸಂಸತ್ ಭವನ

- ನೂತನ ಸಂಸತ್ ಭವನದ ಲೋಕಸಭೆಯಲ್ಲಿ 888 ಸದಸ್ಯರು ಕುಳಿತುಕೊಳ್ಳಲು ಅವಕಾಶವಿದೆ.
- ರಾಜ್ಯಸಭೆಯಲ್ಲಿ 384 ಸದಸ್ಯರಿಗೆ ಕುಳಿತುಕೊಳ್ಳಲು ಅವಕಾಶವಿದೆ.
- ಸೆಂಟ್ರಲ್ ಹಾಲ್‌ನಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಒಟ್ಟು 1272ಮಂದಿಗೆ ಕುಳಿತುಕೊಳ್ಳಲು ಅವಕಾಶವಿದೆ.
- 441ಕೋಟಿ ರೂ ವೆಚ್ಚದ ಯೋಜನೆಯಾಗಿದ್ದರೂ, ಇದೀಗ 64,500 ಚ.ಮೀ, ವಿಸ್ತಾರದ ಈ ನೂತನ ಸಂಸತ್ ಭವನ 1200 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಈ ಮೂಲಕ

**ಭಾರತದ ನೂತನ ಸಂಸತ್ ಭವನವು , ಚೀನಾ, ರೊಮೇನಿಯಾ ಮತ್ತು ಅಮೆರಿಕ ಸಂಸತ್‌ನ ಬಳಿಕ ವಿಶ್ವದ 4ನೇ ಅತಿದೊಡ್ಡ ಸಂಸತ್ ಭವನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.**



## ನನಗೆ ಕಾಂಗ್ರೆಸ್ ನವರು ತುಂಬಾ ಪ್ರಶ್ನೆ ಮಾಡುತ್ತಾರೆ,

ಒಂಬತ್ತು ವರ್ಷ ಆಯ್ತು,
ನಿಮ್ಮ ಮೋದಿ ಏನು ಮಾಡಿದ್ದಾರೆ????
ನಿಮ್ಮ ಮೋದಿ ಏನು ಮಾಡಿದ್ದಾರೆ ????

## ಅವರಿಗೆ ನನ್ನ ಉತ್ತರ

ನಮ್ಮ ಮೋದಿ ಏನು ಮಾಡಿದ್ದಾರೆ ಅಂತ ಆಮೇಲೆ ಹೇಳ್ತಿನಿ!
ಮೊದಲು ಮೋದಿ ನಿನಗೆ ಏನು ಮಾಡಿದ್ದಾರೆ ಗೊತ್ತಾ???????
ನಿನಗೆ ಏನೇನು ಮಾಡಿದಾರೆ ನನ್ನ ಮೋದಿ ಹೇಳ್ತೀನಿ ಕೇಳು

- ಎಪ್ಪತ್ತು ವರ್ಷಗಳ ಕಾಲ ಕಾಂಗ್ರೆಸ್ ಆಳ್ವಿಕೆಯಲ್ಲಿ ನಿನ್ನ ಬುದ್ದಿಗೆ ತುಕ್ಕು ಹಿಡಿದಿತ್ತು, ನಿನ್ನ ನಾಲಿಗೆ ಸತ್ತು ಹೋಗಿತ್ತು. ನೀನು ಭಾರತೀಯ ಪ್ರಜೆ ಆಗಿಯೂ ಅಪ್ರಯೋಜಕನಾಗಿದ್ದೆ. ನಮ್ಮನ್ನು ಆಳುವವರಿಗೆ ಪ್ರಶ್ನೆಯನ್ನು ಕೇಳಬೇಕು ಎನ್ನುವ ಪ್ರಜ್ಞೆಯೇ ಇಲ್ಲದಿದ್ದ ನಿನಗೆ, ಇಂದು ಪ್ರಶ್ನೆಯನ್ನು ಕೇಳಬೇಕು ಎಂಬ ಜಾಗೃತ ಪ್ರಜ್ಞೆ ತಂದದ್ದು ಮೋದಿ ಆಳ್ವಿಕೆ! ಈಗ ನೀನು ಪ್ರಶ್ನೆ ಕೇಳುತ್ತಿದ್ದೀಯಲ್ಲ ಮೋದಿ ಏನು ಮಾಡಿದ್ದಾರೆ? ಎಂದು, ಹೀಗೆ ಎಪ್ಪತ್ತು ವರ್ಷಗಳವರೆಗೆ ಒಂದು ಬಾರಿಯೂ ಕಾಂಗ್ರೆಸ್‌ನವರು ಏನು ಮಾಡಿದ್ದಾರೆ ಎಂದು ಕೇಳದ ಗುಲಾಮ ನೀನು!
- ಸರ್ಕಾರ ಇರುವುದು ಅಭಿವೃದ್ಧಿ ಮಾಡಲು ಎಂದು ನಿನಗೆ ಮನವರಿಕೆ ಮಾಡಿದ್ದು ನನ್ನ ಮೋದಿ ಆಳ್ವಿಕೆ!
- ದೇಶವನ್ನು ಮುನ್ನಡೆಸಬೇಕಾದ ರಾಜಕಾರಣಿ ದೇಶಕ್ಕಾಗಿ ತನ್ನ ಸರ್ವಸ್ವವನ್ನೂ ಧಾರೆ ಎರೆಯಬೇಕು ಎಂದು ನಿನಗೆ ತೋರಿಸಿದ್ದು ನನ್ನ ಮೋದಿ ಆಳ್ವಿಕೆ!
- 70 ವರ್ಷಗಳಿಂದ ಸರ್ಕಾರ ಪ್ರಜೆಗಳ ಸಂಬಂಧವೇ ಇಲ್ಲದಂತೆ ಇರುತ್ತಿದ್ದರು. ಆದರೆ ಇವತ್ತು ಸರ್ಕಾರ ಪ್ರಜೆ ಇಬ್ಬರೂ ಸೇರಿ ದೇಶದ ಒಳಿತಿಗಾಗಿ ಕೆಲಸ ಮಾಡುತ್ತಿದ್ದಾರೆ.
- ಪ್ರಜೆಗಳಿಗೆ ಅವರ ಕರ್ತವ್ಯವನ್ನು ನಿರ್ವಹಿಸಲು ಸರಿಯಾದ ಸಂವಹನ ಮಾಧ್ಯಮ, ವೇದಿಕೆಯನ್ನೂ, ಕೊಟ್ಟಿದ್ದಾರೆ ನನ್ನ ಮೋದಿಜಿ (ಉದಾ: ಸ್ವಚ್ಛ ಭಾರತ, ನಮೋ ಆ್ಯಪ್, ಮನ್ ಕಿ ಬಾತ್ ಇತ್ಯಾದಿ)
- ಇಂದು ಪ್ರತಿಯೊಬ್ಬ ಪ್ರಜೆಯೂ ಕೂಡ ನನ್ನ ನರೇಂದ್ರ ಮೋದಿಯವರಿಗಾಗಲಿ ಅಥವಾ ಅವರ ಸಚಿವರಿಗಾಗಲಿ ನೇರವಾಗಿ ಪ್ರಶ್ನೆಯನ್ನು ಕೇಳಬಹುದು, ಸಲಹೆ ಸೂಚನೆಯನ್ನು ನೀಡಬಹುದು. ಹಾಂ ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಸಹ ಕೊಡುತ್ತಾ ಇದ್ದಾರೆ ನನ್ನ ಮೋದಿಜಿ!
- ಮೊದಲು ವಿಶ್ವ ನಾಯಕರುಗಳ ಸಮ್ಮೇಳನದಲ್ಲಿ ಭಾರತದ 'ಮೂಕ' ಪ್ರಧಾನಿಯನ್ನು ಯಾರೂ ಕೂಡ 'ಮೂಸಿ' ಸಹ ನೋಡುತ್ತಿರಲಿಲ್ಲ. ಇಂದು ನೋಡು ಇಡೀ ವಿಶ್ವದ ನಾಯಕರು ಭಾರತದ ಕಡೆಗೆ ಬೆಕ್ಕಸಬೆರಗಾಗಿ ನೋಡುವಂತೆ ಮಾಡಿ, ಭಾರತದಲ್ಲಿ ಆ ನಾಯಕರುಗಳು ಹಣ ಹೂಡಿಕೆ ಮಾಡುವಂತೆ ಮಾಡುತ್ತಿದ್ದಾರೆ ನನ್ನ ಮೋದಿಜಿ!
- ಹಿಂದೂಗಳಿಂದ ಬಂದ, ಹೌದುರೀ ಸನಾತನ ಹಿಂದೂಗಳಿಂದ ಪ್ರಪಂಚಕ್ಕೆ ಪರಿಚಯಿಸಲ್ಪಟ್ಟ ಶ್ರೇಷ್ಠ ಜೀವನ ಪದ್ದತಿ 'ಯೋಗ'ವನ್ನು ಇಡೀ ಜಗತ್ತೆ ಒಪ್ಪಿಕೊಂಡು, ಅಳವಡಿಸಿಕೊಳ್ಳುವಂತೆ ಮಾಡಿದ್ದು ನನ್ನ ಮೋದಿಜಿ!
- ಮುಸ್ಲಿಂಮರು ವಿರೋಧಿಸುವ ಯೋಗವನ್ನು, ಮುಸ್ಲಿಮರ ಮೂಲದೇಶ ಸೌದಿ ಅರೇಬಿಯಾ ಒಪ್ಪುವಂತೆ ಮಾಡಿದ್ದು ನನ್ನ ಮೋದಿಜಿ!
- ಪಾಕಿಸ್ತಾನ, ಚೀನಾದಂತಹ ಶತ್ರು ರಾಷ್ಟ್ರಗಳ ತಂತ್ರಗಳಿಗೆ ಪ್ರತಿತಂತ್ರ ಮಾಡಿ, ಇಡೀ ಜಗತ್ತಿನಲ್ಲಿ ಪಾಕಿಸ್ತಾನವನ್ನು ಮೂಲೆಗುಂಪು ಆಗುವಂತೆ ಮಾಡಿದ್ದು ನನ್ನ ಮೋದಿಜಿ. ಪಾಕಿಸ್ತಾನವು ಮೋದಿ 2019 ರಲ್ಲಿ ಪ್ರಧಾನಿ ಆಗಬಾರದು ಎಂದು ಬಹಿರಂಗವಾಗಿ ಹೇಳುತ್ತದೆ ಎಂದರೆ ಪಾಕಿಸ್ತಾನಕ್ಕೆ ಎಂಥ ಮರ್ಮ ಘಾತ ಕೊಟ್ಟಿರಬೇಡ ನನ್ನ ಮೋದಿಜಿ! (ಸರ್ಜಿಕಲ್ ಸ್ಟೈಕ್ , ಡೊಕ್ಲಾಂ ನಿರ್ವಹಣೆ, ಉಗ್ರಗಾಮಿಗಳ ನಿರಂತರ ಹತ್ಯೆ, ಛಹಬಾರ ಪೋರ್ಟ್ ಖರೀದಿ ಇತ್ಯಾದಿ)
- ಹಗರಣಗಳು, ಭ್ರಷ್ಟಾಚಾರಗಳಿಂದ ತತ್ತರಿಸಿ, ಬೇಜಾರಾಗಿ, ಸೋತು ಸರ್ಕಾರದ ಮೇಲೆ ನಂಬಿಕೆಯನ್ನೇ ಕಳೆದುಕೊಂಡು ನಿರಾಶಾವಾದಿಯಾಗಿದ್ದ ಪ್ರಜೆಗೆ, ಹಗರಣ, ಭ್ರಷ್ಟಾಚಾರ ಇಲ್ಲದೆ ಸರ್ಕಾರವನ್ನು ನಡೆಸಿ ಆಶಾವಾದಿಯನ್ನಾಗಿ ಮಾಡಿ, ದೇಶದಲ್ಲೆಲ್ಲಾ ಧನಾತ್ಮಕತೆಯನ್ನು ತುಂಬಿದವರು ನನ್ನ ಮೋದಿಜಿ!
- ದೇಶದ ದುಸ್ಥಿತಿ, ನಿರಾಶೆಗೆ ಕಾರಣವಾಗಿದ್ದ ನಿನ್ನ ಕಾಂಗ್ರೆಸ್‌ನ್ನು ಸಂಪೂರ್ಣವಾಗಿ ಇನ್ನೂ ಕೆಲವೇ ವರ್ಷಗಳಲ್ಲಿ ನಿರ್ನಾಮ ಮಾಡಲಿದ್ದಾರೆ ನನ್ನ ಮೋದಿಜಿ!
- ದಿವಸಕ್ಕೆ 18 ಗಂಟೆಯಂತೆ , ಕಳೆದ ಹದಿನೆಂಟು ವರ್ಷಗಳಿಂದ ದೇಶಕ್ಕಾಗಿ ಒಂದು ದಿವಸವೂ ವಿಶ್ರಾಂತಿಯನ್ನು ತೆಗೆದುಕೊಳ್ಳದೇ, ಹೌದುರೀ ಒಂದು ದಿವಸವೂ ವಿಶ್ರಾಂತಿ ತೆಗೆದುಕೊಳ್ಳದೆ ಕೆಲಸ ಮಾಡಿದರೂ ಸಹ ತನ್ನನ್ನು ತಾನು ಕೇವಲ ಕಾಮನ್ ಮ್ಯಾನ್ – ಸಾಮಾನ್ಯ ಮನುಷ್ಯ (CM), ಪ್ರಧಾನ ಸೇವಕ (ಪ್ರಧಾನ ಮಂತ್ರಿ ಅಲ್ಲ) ಎಂದು ಕರೆದುಕೊಳ್ಳುತ್ತಾರೆ ನನ್ನ ಮೋದಿಜಿ!
- ಅತ್ಯಂತ ನಿರ್ಲಿಪ್ತ, ನಿರಹಂಕಾರಿ , ಸೇವಕ ಎಂದಿಗೂ ಭಾರತಕ್ಕೆ ಸಿಗಲಿಕ್ಕಿಲ್ಲ. ಭಾರತ ಯಾಕೇ, ಇಡೀ ವಿಶ್ವದಲ್ಲೇ ಯಾವ ರಾಷ್ಟವೂ ಇಲ್ಲಿಯ ತನಕ ಹೊಂದಿರದ, ಹೊಂದಲಾಗದ ಮಹಾನ್ ರಾಷ್ಟ್ರ ಸೇವಕ ನನ್ನ ಮೋದಿ!
- ಓ ಕಾಂಗ್ರೆಸ್ ಬೆಂಬಲಿಸುವ , ಮೋದಿ ವಿರೋಧಿಸುವ ಶತಮೂರ್ಖನೇ ತಿಳಿಯಿತೆ ಮೋದಿ ನಿನ್ನಲ್ಲಿ , ನಿನಗೆ ತಿಳಿಯದಂತೆ ಈ ದೇಶದಲ್ಲಿ ಎಂಥಾ ಬದಲಾವಣೆ ತಂದಿದ್ದಾರೆಂದು ?????????

**ಕೃಪೆ : ಫೇಸ್‌ಬುಕ್ (ಚಿದಂಬರ್ ಸವಾಯ್)**





# ಮೋದಿ 9 ವರ್ಷ

## ವಿರೋಧ ಮತ್ತು ವಿರೋಧಿಗಳ ಮಧ್ಯೆ

# ವಿಶ್ವ ವಿಜೇತ



**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು

**ಮೋದಿಯವರ ಪ್ರತೀ ನಿರ್ಧಾರಗಳಿಗೂ ವಿರೋಧ ಪಕ್ಷ ಮತ್ತು ಅವರ ತಂಡ ಒಂದಿಲ್ಲೊಂದು ರೀತಿ ವಿರೋಧಿಸುತ್ತಾ ಅಡ್ಡಗಾಲು ಹಾಕಿದ್ದೆ ಜಾಸ್ತಿ. ವಿದೇಶಗಳಿಗೆ ಹೋಗಿ ಭಾರತವನ್ನು ಸಮರ್ಥಿಸಿಕೊಳ್ಳುವುದನ್ನು ಬಿಟ್ಟು, ಭಾರತ ಸುರಕ್ಷಿತವಾಗಿಲ್ಲ ಎಂದೆಲ್ಲ ಬಿಂಬಿಸುವ ಕೆಲಸವನ್ನೇ ವಿರೋಧಿಗಳು ಮಾಡಿದರು. ಇದರಿಂದ ಮೋದಿ ಸರ್ಕಾರ ಆಂತರಿಕವಾಗಿ, ಬಾಹ್ಯವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ನೂರಾರು ಸವಾಲುಗಳನ್ನು ಮೆಟ್ಟಿನಿಲ್ಲುವ ಪರಿಸ್ಥಿತಿ ಎದುರಾಯಿತಾದರೂ ಹೆಜ್ಜೆ ಹಿಂದಿಡದೆ ಹಿಡಿದ ಕಾರ್ಯವನ್ನು ಮಾಡಿ ಮೋದಿ ಸರ್ಕಾರ 9 ವರ್ಷಗಳನ್ನು ಪೂರೈಸಿದೆ. ಕ್ರಿಯಾಶೀಲ ಕರ್ತೃತ್ವದ ಮೂಲಕ ದೇಶವನ್ನು ಹೊಸ ಪಥದಲ್ಲಿ ಕೊಂಡಯ್ಯುವ ಮೋದಿಯವರ ಪ್ರತೀ ಹೆಜ್ಜೆಯಲ್ಲೂ ಸವಾಲುಗಳನ್ನು ಸೃಷ್ಟಿ ಮಾಡಲಾಯಿತು. ಆದರೆ ಯಾವುದಕ್ಕೂ ಹೆದರದೆ ಮೋದಿಯವರು ಈ ಎಲ್ಲವನ್ನು ಯಶಸ್ವಿಯಾಗಿ ನಿರ್ವಹಿಸಿ ಮುಂದಡಿ ಇಟ್ಟಿದ್ದಾರೆ ಮತ್ತು ದೇಶವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ.**



ಅದು ಮೇ-26, 2014, ಇಡೀ ದೇಶದ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ತೊಡಗಿದ್ದರು. ಇದಕ್ಕೆ ಕಾರಣ ದಿಲ್ಲಿಯಲ್ಲಿ ನರೇಂದ್ರ ದಾಮೋದರ್ ದಾಸ್ ಮೋದಿ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದರು. ಬರೋಬ್ಬರಿ 30 ವರ್ಷಗಳ ನಂತರ ಒಂದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಕ್ಕಿ ದೆಹಲಿಯ ಗದ್ದುಗೆಯಲ್ಲಿ ದೇಶದ ಆಡಳಿತ ಚುಕ್ಕಾಣಿ ಹಿಡಿದಿತ್ತು ಭಾರತಿಯ ಜನತಾ ಪಕ್ಷ. 2014 ರಲ್ಲಿ 282 ಸ್ಥಾನವನ್ನು ಗೆಲ್ಲುವ ಮೂಲಕ ಬಿಜೆಪಿ ಸ್ವತಂತ್ರವಾಗಿ ಬಹುಮತವನ್ನು ಸಾಽಸಿ ಅಽಕಾರಕ್ಕೇರಿತ್ತು. ಗುಜರಾತಿನ ಮುಖ್ಯ ಮಂತ್ರಿಯಾಗಿ ಸಾಽಸಿದ ಅಭಿವೃದ್ಧಿಯ ಸಾಧನೆ ದೇಶದ ಎಲ್ಲೆಡೆ ಪ್ರಸಿದ್ದಿಯಾಗಿ, ಅವರೆ ದೇಶದ ಪ್ರಧಾನಿಯಾಗಿ ಅಽಕಾರ ಹಿಡಿದಾಗ ಜನರಿಗೆ ಸಹಜವಾಗಿಯೇ ತಮ್ಮದೊಂದಿಷ್ಟು ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ, ಅಲ್ಲದೆ ದೇಶದ ಸ್ಥಿತಿ-ಗತಿ ಸುಧಾರಿಸಲಿದೆ, ಭಾರತ ವಿಶ್ವಗುರುವಿನ ಸ್ಥಾನವನ್ನು ಮರಳಿ ಪಡೆಯಲಿದೆ ಎಂಬ ಭರವಸೆ ಮೂಡಿತ್ತು. ಅದರ ಪರಿಣಾಮವೆ ಬಿಜೆಪಿ ಸ್ಪಷ್ಟ ಬಹುಮತವನ್ನು ಗಳಿಸಿತ್ತು. ಬಹುಮತದೊಂದಿಗೆ ಅಧಿಕಾರ ಹಿಡಿದ ಬಿಜೆಪಿ ಸಹ ಒಬ್ಬ ಸಾಮಾನ್ಯ ಜನರ ಭಾವನೆಗಳಿಗೆ ಸ್ಪಂದಿಸುವ, ಈ ದೇಶದ ಸನಾತನ ಪರಂಪರೆಯನ್ನು ಎತ್ತಿ ಹಿಡಿಯುವುದರ ಜೊತೆಗ ಸುಶಾಸನದ ಮೂಲಕ, ವಿಶ್ವದಲ್ಲಿ ಭಾರತವನ್ನು ಶಕ್ತಿ ಶಾಲಿಯಾಗಿಸುವ ಜವಾಬ್ದಾರಿಯೊಂದಿಗೆ ಕಾರ್ಯಕ್ಕೆ ಇಳಿದಿತ್ತು.

ಆದರೆ ಸುಮಾರು 60 ವರ್ಷಗಳಿಂದ ದೇಶವನ್ನಾಳಿದ್ದ ಪಕ್ಷವೊಂದರ ನಿರ್ಧಾರ, ನೀತಿಗಳಿಂದಾಗಿ ಭಾರತ ಆಂತರಿಕವಾಗಿ, ಅಭಿವೃದ್ಧಿ ವಿಚಾರವಾಗಿ, ಸೈದ್ಧಾಂತಿಕವಾಗಿ ಕುಗ್ಗಿ ಬಸವಳಿದಿತ್ತು. ಆ ಮೂಲಕ ವಿಶ್ವದಲ್ಲಿ ಭಾರತದ ಸ್ಥಾನ-ಮಾನಕ್ಕೆ ಗೌರವವಿಲ್ಲದಂತಾಗಿತ್ತು. ಇಂತಹ ಸಂದರ್ಭದಲ್ಲಿ ಅಧಿಕಾರಕ್ಕೇರಿದ ಬಿಜೆಪಿಗೆ ಸರಿದಾರಿಯಲ್ಲಿ ದೇಶವನ್ನು ಕೊಂಡೊಯ್ಯುವುದು ಸವಾಲಿನ ಕೆಲಸವಾಗಿತ್ತು. ಆದರೂ ದೇಶ ಬಗ್ಗೆ ಕಾಳಜಿ, ಗೌರವ, ಅಭಿಮಾನ ಹೊಂದಿದ್ದ ಪ್ರಧಾನಿ ಮೋದಿ ಯಾವ ಸವಾಲುಗಳಿಗೆ ಜಗ್ಗಲಿಲ್ಲ, ಕುಗ್ಗಲಿಲ್ಲ, ವಿರೋಧ ಮತ್ತು ವಿರೋಧಿಗಳನ್ನು ಮೆಟ್ಟಿನಿಂತರು, ಸಬ್ ಕಾ ವಿಶ್ವಾಸ್ ಎನ್ನುತ್ತಾ ದೇಶದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡರು. ಕಠಿಣ ನಿರ್ಧಾರಗಳನ್ನು ತೆಗೆದುಕೊಂಡರು. ದೇಶದ ಕೀರ್ತಿಪತಾಕೆಯನ್ನು ಹಾರಿಸುವಲ್ಲಿ ಕಳೆದ 9 ವರ್ಷಗಳಿಂದ ದೇಶದ ಗೌರವ, ಪ್ರತಿಷ್ಠೆಗಳನ್ನು ಎತ್ತಿ ಹಿಡಿಯುವದರ ಜೊತೆಗೆ ಅಭಿವೃದ್ಧಿ ಪಥದಲ್ಲಿಯೂ ಗಾವುದ ದೂರ ಸಾಗುವಲ್ಲಿ ಯಶಸ್ವಿಯಾದರು.

ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಮೋದಿಯವರನ್ನು ಕಾಂಗ್ರೆಸ್‌ನವರು ಸಾವಿನ ದಲ್ಲಾಳಿ ಎಂದರು. ಚಾಯ್ ವಾಲಾ ಎಂದು ಹೀಯಾಳಿಸಿದರು. ಕಾಂಗ್ರೆಸ್‌ನ ಮಿತ್ರ ಪಕ್ಷಗಳು ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ಹತಾಶರಾಗಿ ಮೋದಿಯವರ ಪ್ರತೀ ನಡೆಯನ್ನು ವಿರೋಧಿಸಲಾರಂಭಿಸಿದರು. ದೇಶದ ಗೌರವ, ಘನತೆಯನ್ನು ಮರೆತು, ಕೇವಲ ಟೀಕಿಸಬೇಕು ಎನ್ನುವ

ಪೂರ್ವಾಗ್ರಹ ಪೀಡಿತರಾಗಿ ವ್ಯವಸ್ಥಿತ ಷಡ್ಯಂತ್ರದಿಂದ ಮೋದಿಯನ್ನು ಟೀಕಿಸುವಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ನಿರತವಾದವು. ಮೋದಿ ಸರಕಾರದ ಕೆಲವು ಕಠಿಣ ನಿರ್ಧಾರಗಳಿಂದಾಗಿ ತಮ್ಮ ಬೇಳೆ ಬೇಯಿಸಿಕೊಳ್ಳಲಾಗದ ಸ್ವಯಂಘೋಷಿತ ಬುದ್ಧಿಜೀವಿಗಳು, ದೇಶದ ಅಂತಃಶಕ್ತಿಯನ್ನು ಹಾಳು ಮಾಡುವಲ್ಲಿ ಕ್ರಿಯಾಶೀಲವಾದವು. ಇನ್ನು ಕೆಲವು ದೇಶ ವಿರೋಧಿ ಮಿಷನರಿಗಳಿಗಾದ ಹಿನ್ನೆಡೆಯಿಂದ ಅವುಗಳೂ ಸಹ ವಿರೋಧ ಪಕ್ಷಗಳ ಜೊತೆಗೆ ಕೈ ಜೋಡಿಸಿ ಮೋದಿ ಮತ್ತು ಬಿಜೆಪಿ ಸರ್ಕಾರದ ಪ್ರತಿ ಹೆಜ್ಜೆಗೆ ಅಡ್ಡಗಾಲು ಹಾಕಲಾರಂಭಿಸಿದರು.

## ಅಮಾನ್ಯೀಕರಣದಲ್ಲೂ ಅನುಮಾನ




ಇನ್ನೊಂದು ಸವಾಲು ಎದುರಾಗಿದ್ದು ನೋಟು ಅಮಾನ್ಯೀಕರಣ ಮಾಡಿದಾಗ. ದೇಶದಲ್ಲಿರುವ ಕಪ್ಪುಹಣವನ್ನು ತೊಡೆದು ಹಾಕಿ ಆರ್ಥಿಕತೆಯನ್ನು ಸುಧಾರಿಸುವ ನಿಟ್ಟಿನಲ್ಲಿ 2016 ರಲ್ಲಿ ಮೋದಿ ಸರ್ಕಾರ 500, 1000 ರೂ. ನೋಟುಗಳನ್ನು ಹಿಂಪಡೆಯುವ ನಿರ್ಧಾರ ಮಾಡಿತು. ಜನರು ಇದರ ಬಗ್ಗೆ ಆಶಾವಾದವನ್ನು ತಳೆದಿದ್ದರು, ವಿರೋಧ ಪಕ್ಷಗಳು ಮಾತ್ರ ಇದರ ಬಗ್ಗೆ ಜನರಲ್ಲಿ ಗೊಂದಲವನ್ನು ಹುಟ್ಟಿಸಿದರು. ಜನರು ಕೆರಳುವಂತೆ ಪ್ರಚೋದಿಸಿದರು. ಮೋದಿ ಸರ್ಕಾರ ಈ ಬಗ್ಗೆ ಎಲ್ಲಾ ಸಾಧ್ಯಾ ಸಾಧ್ಯತೆಗಳನ್ನು ಮೊದಲೇ ಪರಿಶೀಲಿಸಿ ಅತ್ಯಂತ ಗೌಪ್ಯವಾಗಿ ಈ ನಿರ್ಧಾರವನ್ನು ಮಾಡಿದ್ದಕ್ಕೆ ಸರ್ಕಾರದ ವಿರುದ್ಧ ಎಷ್ಟೇ ಪಿತೂರಿ ನಡೆಸಿದರು ಯಶಸ್ವಿಯಾಗಲಿಲ್ಲ.

## ವಿದೇಶ ಪ್ರವಾಸಕ್ಕೂ ವಿರೋಧ







ಮೋದಿ ನೇತೃತ್ವದ ಸರ್ಕಾರ ಬರುವ ಮೊದಲು ವಿಶ್ವಮಟ್ಟದಲ್ಲಿ ಭಾರತದ ಸ್ಥಿತಿ ಹೆಮ್ಮೆ ಪಡುವಂತಿರಲಿಲ್ಲ. ಭಾರತದ ನಿಲುವುಗಳಿಗೆ ಬೆಂಬಲಿಸುವ ದೇಶಗಳಿರಲಿಲ್ಲ. ಭಾರತದ ವಿರುದ್ಧ ಮಸಲತ್ತು ನಡೆಸುವ ದೇಶಗಳ ಸಂಖ್ಯೆ ಹೆಚ್ಚಿತ್ತು. ಆದರೆ ಮೋದಿಯವರ ಪ್ರಬುದ್ಧ ವಿದೇಶಾಂಗ ನೀತಿಯಿಂದ ಇವತ್ತು ಪ್ರಪಂಚದ ದೊಡ್ಡ ದೊಡ್ಡ ದೇಶಗಳಾದ ಅಮೆರಿಕಾದಿಂದ ಹಿಡಿದು, ಪುಟ್ಟ ದೇಶ ನೇಪಾಳದವರೆಗೂ ಭಾರತದ ಅಭಿಪ್ರಾಯದ ಬಗ್ಗೆ, ಭಾರತದ ನಿಲುವುಗಳ ಬಗ್ಗೆ ಕಾತುರದಿಂದ ಕಾದು, ಅದಕ್ಕೆ ಹೌದೆನ್ನುವಂತಹ ವಾತಾವರಣ ನಿರ್ಮಾಣವಾಗಿದೆ. ಈ ಬದಲಾವಣೆಗೆ ಕಾರಣ ಮೋದಿಯವರ ವಿದೇಶ ಪ್ರವಾಸ. ಮೋದಿ ಪ್ರಧಾನಿಯಾಗಿ ಅಧಿಕಾರ ಹಿಡಿದಾಗಿನಿಂದ ವಿಶ್ವದ ಚಿಕ್ಕ ಚಿಕ್ಕ ರಾಷ್ಟ್ರಗಳನ್ನು ಬಿಡದೆ ಪ್ರವಾಸ ಮಾಡಿ ಬಾಂಧವ್ಯವನ್ನು ವೃದ್ಧಿಗೊಳಿಸಿ, ಭಾರತದ ಶಕ್ತಿಯ ಬಗ್ಗೆ ಅರಿವು ಮೂಡಿಸಿದರು. ಆದರೆ ವಿರೋಧ ಪಕ್ಷಗಳು ಮೋದಿಯವರ ಈ ನಡೆಯನ್ನೂ ಟೀಕಿಸಿದರು. ಮೋದಿ ಕೇವಲ ವಿದೇಶ ಸುತ್ತುತ್ತಾರೆ, ದೇಶದ ಬಗ್ಗೆ ಕಾಳಜಿ ಇಲ್ಲ, ವಿದೇಶ ಪ್ರವಾಸಕ್ಕೆ ಕೋಟಿ ಕೋಟಿ ಖರ್ಚು ಮಾಡುತ್ತಿದ್ದಾರೆ ಎಂದು ವಿರೋಧಿಸಿದರು, ಅದಕ್ಕೆ ಮೋದಿ ಬೇಸರಿಸದೆ ಸಂದರ್ಭಕ್ಕೆ ಮತ್ತು ಅವಶ್ಯಕತೆಗನುಸಾರವಾಗಿ ವಿದೇಶಿ ಪ್ರವಾಸದ ಜೊತೆಗೆ, ಅಮೆರಿಕಾದಂತಹ ದೇಶಗಳಿಗೆ ತೀಕ್ಷ್ಣ ಪ್ರತಿಕ್ರಿಯೆಯನ್ನೂ ನೀಡಲಾರಂಭಿಸಿದರು. ವಿದೇಶಕ್ಕೆ ಹೊದಾಗ ಭಾರತ ಮೂಲದವರನ್ನು ಭೇಟಿ ಮಾಡುವ, ಸಂಘಟಿಸುವ, ದೇಶಕ್ಕಾಗಿ ಒಂದಿಷ್ಟು ಯೋಚಿಸುವ ಪರಿಪಾಠವನ್ನು ಮೂಡಿಸಿದರು. ಇದರಿಂದ ಇಂದು ವಿಶ್ವಮಟ್ಟದಲ್ಲಿ ಎಲ್ಲಾ ದೇಶಗಳು ಸಮಸ್ಯೆಗಳಿಗೆ, ಮುಂದೆ ಬರಬಹುದಾದ ಸವಾಲುಗಳಿಗೆ ಉತ್ತರಕ್ಕಾಗಿ ಭಾರತದತ್ತ ದೃಷ್ಟಿ ಹಾಯಿಸುವ ವಾತಾವರಣ ನಿರ್ಮಾಣವಾಯಿತು.



## ಭಾರತೀಯರ ಚೌಕಿದಾರ್

ವಿರೋಧಿಗಳು ಮೋದಿ ದೇಶವನ್ನು ಮಾರುತ್ತಾರೆ, ಮೋದಿ ಕಳ್ಳ ಎಂದೆಲ್ಲಾ ವಾಗ್ದಾಳಿ ನಡೆಸಿದರು. ಆದರೆ ಮೋದಿ ಅದರ ಬಗ್ಗೆ ಕೊಂಚವು ತಲೆಕೆಡಿಸಿಕೊಳ್ಳದೆ, ನಾನು 100 ಕೋಟಿ ಭಾರತೀಯರ ಚೌಕಿದಾರ್ ಎಂದು ಎದೆ ತಟ್ಟಿ ಹೇಳಿದರು. ಅಲ್ಲದೆ ಭಾರತದ ಅಂತರಿಕ ಭದ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಭಯೋತ್ಪಾದನೆಯ ವಿರುದ್ಧ ಸಮರ ಸಾರಿದರು. ಭಯೋತ್ಪಾದಕರ ತಾಣವಾದ ಪಾಕಿಸ್ತಾನದ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡಿ, ಭಯೋತ್ಪಾದನೆ ಪೋಷಿಸುತ್ತಿದ್ದ ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಟ್ಟಾಗಲು ದೇಶದ ಹಿತಕ್ಕಾಗಿ ಪಕ್ಷರಾಜಕಾರಣ ಮರೆತು ಬೆಂಬಲಿಸುವ ಬದಲು ಸರ್ಜಿಕಲ್ ಸ್ಟ್ರೈಕ್‌ಗೆ ಸಾಕ್ಷಿ ಕೊಡಿ ಎಂದು ನಮ್ಮ ಸೈನಿಕರ ಮೇಲೆ ಅನುಮಾನ ವ್ಯಕ್ತಪಡಿಸಿದರು. ವಿಶ್ವವೇ ನಮ್ಮ ಬೆಂಬಲಕ್ಕೆ ನಿಂತರು ದೇಶದ ಒಳಗಿನ ವಿರೋಧಿಗಳು ನಮ್ಮ ವ್ಯವಸ್ಥೆಯನ್ನು ಅನುಮಾನಿಸಿದರು. ಆದರೆ ಮೋದಿ ಸರ್ಕಾರ ಇದಕ್ಕೆ ಯಾವುದೇ ತರದ ಪ್ರತಿಕ್ರಿಯೆ ನೀಡದೆ ಸಮಯ ಬಂದಾಗ ವಿಡಿಯೋವನ್ನು ಬಿಡುಗಡೆ ಮಾಡಿ ವಿರೋಧಿಗಳ ಬಾಯಿ ಮುಚ್ಚಿಸಿದರು.



## ಸಂಕಷ್ಟದಲ್ಲೂ ಸಿಗದ ಸಹಕಾರ

ಕೋವಿಡ್ ನಿರ್ವಹಣೆಯಂತೂ ಮೋದಿ ಸರಕಾರಕ್ಕೆ ದೊಡ್ಡ ಸವಾಲಾಗಿತ್ತು. ಇಡೀ ವಿಶ್ವ ಹತಾಶವಾಗಿ ಕೈಚೆಲ್ಲಿ ಕುಳಿತಾಗ ಸಹ ಪ್ರಧಾನಿ ಮೋದಿ ದೇಶದ ಜನರನ್ನು ಕೈಬಿಡಲಿಲ್ಲ. ಮನೆಯ ಯಜಮಾನನ ರೀತಿಯಲ್ಲಿ ದೇಶದ ಜನರಿಗೆ ಆತ್ಮಸ್ಥೈರ್ಯ ತುಂಬಿದರು. ಕೋವಿಡ್ ನಿಯಂತ್ರಿಸಲು ಬೇಕಾದ ಎಲ್ಲಾ ತರಹದ ಸಲಕರಣೆ ನಮ್ಮಲ್ಲೇ ಸಿದ್ಧವಾಗುವ ರೀತಿ ನೋಡಿಕೊಂಡರು. ದೇಶದ ಸಂಕಷ್ಟದ ಈ ಸಮಯದಲ್ಲೂ ವಿರೋಧ ಪಕ್ಷಗಳು ಮೋದಿಯವರ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದರು, ಜನರ ಮನಃಸ್ಥಿತಿಯನ್ನು ಕದಡುವ ಪ್ರಯತ್ನ ಮಾಡಿದರು. ಕೋವಿಡ್ ಲಸಿಕೆಯನ್ನು ಭಾರತದಲ್ಲಿಯೇ ತಯಾರಿಸಿ ಉಚಿತವಾಗಿ ನೀಡಲು ನಿರ್ಧರಿಸಿದಾಗಲೂ ವಿರೋಧ ಪಕ್ಷದವರು ಲಸಿಕೆ ವಿರುದ್ಧ ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದರು. ಆದರೆ ಮೋದಿಯವರ ನಿರ್ಧಾರಗಳ ಬಗ್ಗೆ ವಿಶ್ವಾಸ ಹೊಂದಿದ್ದ ಜನರು ಸುಳ್ಳು ಸುದ್ದಿಗಳಿಗೆ ಬೆಲೆ ಕೊಡದೆ ಮೋದಿ ಪರವಾಗಿ ನಿಂತರು. ಕೊವಿಡ್ ನಿರ್ವಹಣೆಯಂತಹ ದೊಡ್ಡ ಸವಾಲು ಮೋದಿಯವರ ಪರಿಶ್ರಮ, ದೇಶದ ಬಗೆಗಿನ ಪ್ರೀತಿ ಮತ್ತು ಕಾಳಜಿ ದೇಶವನ್ನು ಸ್ವಾವಲಂಬಿ ಮಾಡುವುದರ ಜೊತೆಗೆ ಸುರಕ್ಷಿತವಾಗಿಡಲು ಅನುವಾಯಿತು. ಕೋವಿಡ್‌ನಿಂದ ಅಮೆರಿಕಾದಂತಹ ದೇಶಗಳು ಆರ್ಥಿಕ ಹೊಡೆತದಿಂದ ಹೊರಬರಲಾಗದೆ ಒದ್ದಾಡುತ್ತಿವೆ. ಆದರೆ ನಮ್ಮ ದೇಶದ ಆರ್ಥಿಕತೆ ಮಾತ್ರ ಸ್ಥಿರವಾಗಿರಲು ಮೋದಿಯವರು ಸವಾಲು ಎದುರಿಸಿ ತೆಗೆದುಕೊಂಡ ನಿರ್ಣಯಗಳ ಫಲವಾಗಿದೆ.

ಪ್ರಧಾನಿ ಶ್ರೀ ಮೋದಿ ಅಧಿಕಾರ ವಹಿಸಿಕೊಂಡಾಗಿನಿಂದ ವಿರೋಧ ಪಕ್ಷಗಳು ವಿರೋಧಿಸುತ್ತಾ, ವಿದೇಶಗಳಿಗೆ ಹೋಗಿ ಭಾರತ ಸುರಕ್ಷಿತವಾಗಿಲ್ಲವೆಂದು ಬಿಂಬಿಸುವ ಕೆಲಸವನ್ನೇ ಮಾಡಿದರು.ಇದರಿಂದ ಮೋದಿ ಸರ್ಕಾರಕ್ಕೆ ನೂರಾರು ಸವಾಲುಗಳನ್ನು ಮೆಟ್ಟಿನಿಲ್ಲುವ ಪರಿಸ್ಥಿತಿ ಎದುರಾಯಿತಾದರೂ ಹೆಜ್ಜೆ ಹಿಂದಿಡದೆ ಮೋದಿ ಸರ್ಕಾರ 9 ವರ್ಷಗಳನ್ನು ಪೂರೈಸಿದೆ. ರಾಮಮಂದಿರ ನಿರ್ಮಾಣ, ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಏಕತಾ ಪ್ರತಿಮೆ ಸ್ಥಾಪನೆ, ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಆಮದು, ಸ್ವದೇಶಿ ರಕ್ಷಣಾ ಸಾಮಗ್ರಿಗಳ ತಯಾರಿಕೆ, ಯೋಗಕ್ಕೆ ಅಂತಾರಾಷ್ಟ್ರೀಯ ಮಾನ್ಯತೆ, ನೆರೆ ರಾಷ್ಟ್ರ ಶ್ರೀಲಂಕಾಕ್ಕೆ ಮತ್ತು ವಿಶ್ವದ ಹಲವು ದೇಶಗಳಿಗೆ ನೆರವು, ಸ್ವಾತಂತ್ರ್ಯ ಬಂದು 70 ವರ್ಷಗಳ ಅನಂತರವೂ ಸುಮಾರು 18 ಸಾವಿರ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ, ರಾಷ್ಟ್ರೀಯ ಹೆದ್ದಾರಿ, ರೈಲ್ವೇ, ಜಲಮಾರ್ಗಗಳ ಅಭಿವೃದ್ಧಿ, ವಿಶ್ವಸಂಸ್ಥೆ, ಬ್ರಿಕ್ಸ್, ಸಾರ್ಕ್, 2ಜಿ ಶೃಂಗ ಸಭೆಯ ಆಯೋಜನೆ ಮಾಡುವ ಮೂಲಕ ದೇಶವನ್ನು ಹೊಸ ಪಥದಲ್ಲಿ ಕೊಂಡಯ್ಯುವ ಪ್ರತಿ ಹೆಜ್ಜೆಯಲ್ಲೂ ಸವಾಲುಗಳನ್ನು ಸೃಷ್ಟಿ ಮಾಡಲಾಯಿತು. ಆದರೆ ಯಾವುದಕ್ಕೂ ಹೆದರದೆ ಮೋದಿಯವರು ಎಲ್ಲವನ್ನು ಯಶಸ್ವಿಯಾಗಿ ನಿರ್ವಹಿಸಿ ಮುಂದಡಿ ಇಟ್ಟಿದ್ದಾರೆ. ಮೋದಿಯವರು ಸಾಧಿಸಿ ಜೈಸಿದ ಪರಿಯನ್ನು ಕಾರ್ಯಕರ್ತರಾದ ನಾವು ಜನ ಸಾಮಾನ್ಯರಿಗೆ ತಿಳಿಸಿ 2024 ರಲ್ಲಿ ಮತ್ತೆ ಮೋದಿ ಸರ್ಕಾರವನ್ನು ಗೆಲ್ಲಿಸುವ ನಿಟ್ಟಿನಲ್ಲಿ ಈಗಲೇ ಕಾರ್ಯೋನ್ಮುಖವಾಗೋಣ...

# ಮೋದಿಯವರ ಗೆಲುವಿನ ನಾಗಲೋಟದಲ್ಲಿನ

# ಮಗ್ಗಲು ಮುಳ್ಳುಗಳು





**ಅಜಿತ್ ಶೆಟ್ಟಿ ಹೆರಂಜೆ**
ಸಹ ಸಂಚಾಲಕರು
ರಾಜ್ಯ ಪ್ರಕಾಶನ ಪ್ರಕೋಷ್ಠ



**ಕಳೆದ 9 ವರ್ಷಗಳಲ್ಲಿ ದೇಶದೊಳಗಿನ ದೇಶವಿರೋಧಿಗಳ ಕಾರ್ಯಶಕ್ತಿ 70%ದಷ್ಟು ಕ್ಷೀಣಿಸಿದೆ. ದೇಶದಾದ್ಯಂತ ಮತೀಯ ಗಲಭೆ ನಡೆಸಲು ಹೊಂಚು ಹಾಕಿದ್ದ ಪಿಎಫ್ಐ ಸಂಘಟನೆಯ ಮೇಲೆ ನಿಷೇಧ ಹೇರಿ ಆ ಸಂಘಟನೆಯ ಪ್ರಮುಖರನ್ನು ಬಂಧಿಸಿದೆ. ದೇಶದೊಳಗೆ ಆರ್ಥಿಕ ಭಯೋತ್ಪಾದನೆ, ಬಲವಂತದ ಮತಾಂತರ ಮಾಡುತ್ತಿದ್ದ, ಎನ್ ಜಿಓಗಳಿಗೆ ಲೆಕ್ಕವಿಲ್ಲದಷ್ಟು ಹರಿದು ಬರುತ್ತಿದ್ದ ವಿದೇಶಿ ಹಣವನ್ನು ತಡೆ ಹಿಡಿಯಲಾಗಿದೆ. ಕಳೆದ 9 ವರ್ಷದಲ್ಲಿ ದೇಶದೊಳಗೆ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದ ಸುಮಾರು 20 ಸಾವಿರ ಎನ್‌ಜಿಓಗಳನ್ನು ಮೋದಿ ಸರಕಾರ ನಿಷೇಧಿಸಿದೆ.**



ಭಾರತ ತನ್ನ ಪರಮ ವೈಭವ ಸಾಧಿಸುವ ನಿಟ್ಟಿನಲ್ಲಿ ಕಳೆದ 9 ವರ್ಷಗಳಲ್ಲಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದಿಟ್ಟ ಹೆಜ್ಜೆಗಳನ್ನಿಡುತ್ತಿದೆ. ಆದರೆ ಮೋದಿಯವರನ್ನು ವಿನಾಕಾರಣ ವಿರೋಧಿಸುವ ಒಂದು ವ್ಯವಸ್ಥೆ (ಉಟ್ಟ ಖಥಠರಿಥಿಇ) ಮೋದಿ ಅಧಿಕಾರಕ್ಕೆ ಬಂದಾಗಿನಿಂದ ಇಂದಿನವರೆಗೂ ಜನರನ್ನು ದಿಕ್ಕು ತಪ್ಪಿಸುವ ಕುತಂತ್ರಗಾರಿಕೆಯನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ರಾಜಕೀಯ, ಸಿನಿಮಾ, ಕಲೆ, ಸಾಹಿತ್ಯ, ಪತ್ರಿಕೋದ್ಯಮ, ಸಮಾಜ ಸೇವೆ, ವಾಣಿಜ್ಯ ವ್ಯವಹಾರ, ಧಾರ್ಮಿಕ , ಕ್ರೀಡೆ, ಶಿಕ್ಷಣ ಎಲ್ಲಾ ಕ್ಷೇತ್ರದಲ್ಲೂ ಇವರುಗಳು ತಮಗಿರುವ ಪ್ರಭಾವವನ್ನು ಪ್ರಧಾನಿ ಶ್ರೀ ಮೋದಿಯವರ ನಡೆಯನ್ನು ವಿರೋಧಿಸುವ ಮೂಲಕ ಭಾರತೀಯ ಸಾಂಸ್ಕೃತಿಕ ಪುರುತ್ಥಾನದತ್ತ ಹೆಜ್ಜೆಗಳನ್ನಿಡುತ್ತಿರುವ ಬಿಜೆಪಿ ಸರಕಾರಕ್ಕೆ ತೊಡರುಗಾಲಾಗಿದ್ದಾರೆ.

ಗುಜರಾತಿನಲ್ಲಿ ಮೇಧಾ ಪಾಟ್ಕರ್ ನಡೆಸಿದ ನರ್ಮದಾ ಬಚಾವೋ ಆಂದೋಲನದಲ್ಲಿ ಪರಿಸರ ಕಾಳಜಿಯ ಹೆಸರಿನಲ್ಲಿ ಅಣೆಕಟ್ಟು ಕಟ್ಟಿ ನೀರಾವರಿ ಮತ್ತು ವಿದ್ಯುತ್ ಯೋಜನೆಗಳು ಜಾರಿಗೆ ಬರುವುದನ್ನೇ ವಿರೋಧಿಸಿದರು. ತಮಿಳುನಾಡಿನ ಕೂಡಂಕೊಲಂ ಪರಮಾಣು ವಿದ್ಯುತ್ ಘಟಕ ಪ್ರಾರಂಭವಾದಾಗ ತಮಿಳುನಾಡಿನ ಕ್ರೈಸ್ತ ಮಿಷನರಿಗಳ ಜಾಲ ಈ ಯೋಜನೆಯ ವಿರುದ್ಧ ಇಂತಹುದೇ ಒಂದು ಹೋರಾಟ ಪ್ರಾರಂಭ ಮಾಡಿತು. ಜಾನ್ ದಯಾಳ್, ಕವಿತಾ ಕೃಷ್ಣ ಮೂರ್ತಿಯಂತಹ ಆಂದೋಲನ ಜೀವಿಗಳು ಇದರ ನೇತೃತ್ವ ವಹಿಸಿದ್ದರು. ಪಿಎಫ್ಐ, ಖಾಲಿಸ್ತಾನಿಯಂತಹ ಉಗ್ರಗಾಮಿ ಸಂಘಟನೆಗೆ ಪಾಕಿಸ್ತಾನ ಸಿರಿಯಾದಂತಹ ದೇಶಗಳು ಬೆಂಬಲ ನೀಡಿದವು. ಇನ್ನು ಭಾರತದೊಳಗೆ ನಡೆಯುತ್ತಿರುವ ನಕ್ಸಲ್ ಚಟುವಟಿಕೆಯನ್ನು ಹಾಗು ಈಶಾನ್ಯ ರಾಜ್ಯಗಳಲ್ಲಿ ಬಂಡಕೋರರಿಗೆ ಚೈನಾ ನೆರವನ್ನು ನೀಡುತ್ತಿದೆ. ಮೋದಿ ವಿರೋಧಿಸುವ ನೆಪದಲ್ಲಿ ಭಾರತದ ವಿರುದ್ಧ ನಿರಂತರವಾದ ಅಪಪ್ರಚಾರ ಹಬ್ಬುವ ಕೆಲಸವನ್ನು ಚಿತ್ರರಂಗದ ಒಂದಷ್ಟು ಮಂದಿ, ಮತ್ತೊಂದಿಷ್ಟು ಇತಿಹಾಸಕಾರರು ಮಾಡುತ್ತಿದ್ದಾರೆ. ಇವರೆಲ್ಲರೂ ಮೋದಿಯವರ ಭಾರತದ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಪುನರುತ್ಥಾನದ ಕೆಲಸಕ್ಕೆ ನಿರಂತರವಾಗಿ ಅಡ್ಡಗಾಲನ್ನು ಹಾಕುತ್ತಲೇ ಬಂದಿದ್ದಾರೆ. ಕಾಂಗ್ರೆಸ್ ಪಕ್ಷದ ಆಡಳಿತದ ಕಾಲದಲ್ಲಿ ಅದರ ರಾಜಾಶ್ರಯದಲ್ಲಿಯೇ ಇವರೆಲ್ಲರೂ ವಿರಾಜಮಾನರಾಗಿದ್ದುದು ವಿಪರ್ಯಾಸದ ಸಂಗತಿ.

2014ರಲ್ಲಿ ಮೋದಿಯವರು ಅಧಿಕಾರಕ್ಕೆ ಬಂದ ಕೂಡಲೇ ಇವರ ರಾಜಾಶ್ರಯಕ್ಕೆ ಪೆಟ್ಟು ಬಿತ್ತು, ಅಭದ್ರತೆ ಕಾಡಿತು. ತೆರೆಯ ಮರೆಯಲ್ಲಿ ಇದ್ದು ಬೆಂಬಲ ಕೊಡುತ್ತಿದ್ದ ಸಂಘಟನೆಗಳು ಮುನ್ನಲೆಗೆ ಬಂದವು. ಜಾರ್ಜ್ ಸಾರಾಸ್‌ನ ಓಪಮ್ ಸೊಸೈಟಿ ಫೌಂಡೇಶನ್ ಮತ್ತು ಅದರ ಅಂಗ ಸಂಸ್ಥೆಗಳು ನೇರವಾಗಿ ಮೋದಿ ಸರಕಾರದ ವಿರುದ್ಧ ಅಪಪ್ರಚಾರ ಮಾಡಿದವು. ಭಾರತದೊಳಗಿನ ಪ್ರತಿಭಟನೆ ಗಲಭೆಗಳಿಗೆ ಕುಮ್ಮಕ್ಕು ಕೊಡುವುದು ಮತ್ತು ವಿದೇಶದಲ್ಲಿ ಭಾರತದ ಗೌರವಕ್ಕೆ ಧಕ್ಕೆ ತರುವ ಕೆಲಸವನ್ನು ಪ್ರಾರಂಭಿಸಿದವು. ರೈತ ಗಲಭೆಯ ಸಮಯದಲ್ಲಿ ವಿದೇಶದಲ್ಲಿ ಭಾರತದ ಬಗ್ಗೆ ಅಪ ಪ್ರಚಾರ, ಕೋವಿಡ್ ಸಮಯದಲ್ಲಿ ಭಾರತದ ವಿರುದ್ಧ ಅಪ ಪ್ರಚಾರ, ಭಾರತ ವಿರೋಧಿ ಅಂದೋಲನಗಳ ಆಯೋಜನೆ, ಭಾರತದ ರಾಯಭಾರಿ ಕಛೇರಿಯ ಮೇಲೆ ದಾಳಿ ಪ್ರತಿಭಟನೆ, ಅಷ್ಟೇ ಯಾಕೆ ವಿದೇಶಗಳಲ್ಲಿರುವ ಹಿಂದೂ ದೇವಾಲಯಗಳಿಗೆ ಹಾನಿ ಮಾಡುವುದು. ಇದೆಲ್ಲದರ ಜೊತೆಗೆ ಕೆನಡಾದಲ್ಲಿ ಖಾಲಿಸ್ತಾನಿ ಉಗ್ರರು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯನ್ನೂ ಸಂಭ್ರಮಿಸುವ ಕಾರ್ಯಗಳೂ ಇವರ ಕುಮ್ಮಕ್ಕಿಂತ ಆಯೋಜಿತವಾದವು. ದೇಶದಲ್ಲಿ ಅಸಹಿಷ್ಣುತೆ ಹೆಚ್ಚಾಗಿದೆ ಎಂದು ತಮ್ಮ ಪ್ರಶಸ್ತಿಗಳನ್ನು ವಾಪಸ್ ಕೊಡುವ ಆಂದೋಲನದಿಂದ ಹಿಡಿದು ಈಗ ನಡೆಯುತ್ತಿರುವ ಕುಸ್ತಿಪಟುಗಳ ಪ್ರತಿಭಟನೆಯ ತನಕ ಎಲ್ಲವೂ ಆದವು. ಇತ್ತೀಚೆಗೆ ನಡೆದ ರೈಲು ದುರಂತಲ್ಲೂ ಇಂತಹ ಶಕ್ತಿಗಳ ಕೈವಾಡ ಇರುವ ಬಗ್ಗೆ ತನಿಖೆಗಳು ನಡೆಯುತ್ತಿವೆ. ಸಿಎಎ ವಿರುದ್ಧದ ಹೋರಾಟ, ಭೀಮಾ ಕೋರೇಗಾಂವ್ ದಂಗೆ, ರೈತ ಹೋರಾಟ, ಅಷ್ಟೇ ಯಾಕೆ ನಗರ ನಕ್ಸಲರ ಸಮೂಹವೊಂದು ಪ್ರಧಾನಿ ಶ್ರೀ ಮೋದಿಯರನ್ನು ಹತ್ಯೆ ಮಾಡುವ ಸಂಚನ್ನೂ ರೂಪಿಸಿತ್ತು. ಇದೇ ಕಾರಣಕ್ಕೆ ನಗರ ನಕ್ಸಲ್ ವರವರ ರಾವ್ ಅಂತವರ ಬಂಧನವಾಯಿತು. ಅಂತ್ಯಗೊಂಡಿದ್ದ ಖಲಿಸ್ಥಾನಿ ಉಗ್ರ ಸಂಘಟನೆಗಳಿಗೆ ಮರುಜೀವ ಬಂದಿದೆ. ''ಸರ್ಕಾರ ಅವರದ್ದೇ ಇರಬಹುದು ಆದರೆ ವ್ಯವಸ್ಥೆಗಳು ಇವತ್ತಿಗೆ ನಮ್ಮದೇ'' ಎಂಬ 'ದಿ ಕಾಶ್ಮೀರಿ ಫೈಲ್' ಚಿತ್ರದ ಒಂದು ಡೈಲಾಗ್‌ನ ಕೃತಿರೂಪ ವಾಸ್ತವವಾಯಿತು.

ಮೋದಿ ಸರಕಾರ ಇವರ ಮಗ್ಗಲು ಮುರಿಯುವ ಕೆಲಸ ಮಾಡಿದರು. ನಗರ ನಕ್ಸಲರು ಮತ್ತು ಕಾಡಿನ ನಕ್ಸಲರ ವಿರುದ್ಧ ಕಾರ್ಯಾಚರಣೆಗಳಾದವು. ಕಳೆದ 9 ವರ್ಷಗಳಲ್ಲಿ ಇವರ ಕಾರ್ಯಶಕ್ತಿ 70%ರಷ್ಟು ಕ್ಷೀಣಿಸಿದೆ. ದೇಶದಾದ್ಯಂತ ಮತೀಯ ಗಲಭೆ ನಡೆಸಲು ಹೊಂಚು ಹಾಕಿದ್ದ ಪಿಎಫ್ಐ ಸಂಘಟನೆಯ ಮೇಲೆ ನಿಷೇಧ ಹೇರಿ ಆ



ಸಂಘಟನೆಯ ಪ್ರಮುಖರನ್ನು ಬಂಧಿಸಿದೆ. ದೇಶದೊಳಗೆ ಆರ್ಥಿಕ ಭಯೋತ್ಪಾದನೆ, ಬಲವಂತದ ಮತಾಂತರ ಮಾಡುತ್ತಿದ್ದ, ಕಳೆದ 9 ವರ್ಷದಲ್ಲಿ ದೇಶದೊಳಗೆ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದ ಸುಮಾರು 20 ಸಾವಿರ ಎನ್‌ಜಿಓಗಳನ್ನು ಮೋದಿ ಸರಕಾರ ನಿಷೇಧಿಸಿದೆ. ಭಾರತದ ವಿರುದ್ಧ ನಿಂತರವಾಗಿ ಸುಳ್ಳುಸುದ್ದಿಯನ್ನು ದೇಶದೊಳಗೆ ಮತ್ತು ದೇಶದ ಹೊರಗೆ ಪ್ರಚಾರ ಮಾಡುತ್ತಿದ್ದ ಪತ್ರಕರ್ತರು, ಸುದ್ದಿ ಸಂಸ್ಥೆಗಳ ವಿರುದ್ಧ ಕೇಂದ್ರ ಸರಕಾರ ಕಾನೂನು ಕ್ರಮ ಜರುಗಿಸಲು ಪ್ರಾರಂಭ ಮಾಡಿದೆ.

ವಿದೇಶಗಳಲ್ಲಿ ಭಾರತದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳನ್ನು ಭಾರತದ ವಿದೇಶಾಂಗ ಇಲಾಖೆ ಸಮರ್ಥವಾಗಿ ನಿಭಾಯಿಸುತ್ತಿದೆ. ಯಾವುದೇ ದೇಶದಲ್ಲಿ ಭಾರತದ ವಿರುದ್ಧ ಭಾರತೀಯರ ವಿರುದ್ಧ ಅಪಾರಧ ಚಟುವಟಿಕೆಗಳು ನಡೆದರೆ ಅಂತಹ ದೇಶಗಳ ಸರಕಾರವನ್ನು ಸಂಪರ್ಕಿಸಿ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕಾಶ್ಮೀರದ ವಿವಾದದಲ್ಲಿ ಮೂಗು ತೂರಿಸುವ ಪ್ರಯತ್ನ ಮಾಡಿದ ಮಲೇಶಿಯಾಕ್ಕೆ ಭಾರತ ಆರ್ಥಿಕ ದಿಗ್ಬಂದನ ಹಾಕಿತು. ಪಿಎಫ್‌ಐ ಅನ್ನು ಬೆಂಬಲಿಸುತ್ತಿದ್ದ ಟರ್ಕಿಯ ಮೇಲೂ ಭಾರತ ರಾಜತಾಂತ್ರಿಕ ಒತ್ತಡ ಹಾಕುವಲ್ಲಿ ಯಶಸ್ವಿಯಾಯಿತು. ಭಾರತದ ಬಹಳಷ್ಟು ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳಿಗೆ ಮೂಲ ಕಾರಣವಾದ ಪಾಕಿಸ್ತಾನ ಭಾರತದ ರಾಜತಾಂತ್ರಿಕ ನೀತಿಯ ಕಾರಣಕ್ಕೆ ಅಕ್ಷರಶಃ ದಿವಾಳಿಯಾಗಿದೆ. ಇನ್ನು ಚೀನಾಕ್ಕೆ ದೊಕ್ಲಾಮ್ ಮತ್ತು ಅಕ್ಸಾಯ್ ಚಿನ್ ಭಾಗದಲ್ಲಿ ಎರಡೆರಡು ಭಾರಿ ಹಿಮ್ಮೆಟ್ಟಿಸಿ ಸಾಮರಿಕವಾಗಿ ಮರ್ಮಾಗಾತ ಮಾಡಿದರೆ, ಅದು ಭಾರತದಲ್ಲಿ ನಡೆಸುತ್ತಿದ್ದ ಅನೇಕ ಆರ್ಥಿಕ ಚಟುವಟಿಕೆಯ ಮೇಲೆ ನಿಷೇದ ಹೇರಿತು. ಭಾರತದ ಕುಶಲ ವಿದೇಶಿ ನೀತಿಗಳ ಕಾರಣ ಕೋವಿಡ್ ನಂತರ ಚೀನಾದ ಬ್ರಹತ್ ಕೈಗಾರಿಕೆಗಳು ಭಾರತಕ್ಕೆ ವಲಸೆ ಬಂದವು. ಇನ್ನು ಕ್ವಾಡ್‌ನಂತಹ ಒಕ್ಕೂಟಗಳ ಜೊತೆಗೆ ಸೇರಿ ಅಂತರಾಷ್ಟ್ರೀಯವಾಗಿ ಅದಕ್ಕೆ ಪೆಟ್ಟು ಕೊಡುವಲ್ಲೂ ಯಶಸ್ವಿಯಾಯಿತು. ಇದರ ಜೊತೆಗೆ ಅದು ಈಶಾನ್ಯ ರಾಜ್ಯದಲ್ಲಿ ಬೆಂಬಲ ಕೊಡುತ್ತಿದ್ದ ಪ್ರತ್ಯೇಕತಾವಾದಿಗಳ ಜೊತೆಗೆ ಕೇಂದ್ರ ಸರಕಾರ ನಿರಂತರವಾದ ಸಂಧಾನಗಳನ್ನು ಮಾಡಿ ಅವುಗಳನ್ನು ಬಹುತೇಕ ಶಮನ ಮಾಡಿತು. ಹೀಗೆ ಕಳೆದ 9 ವರ್ಷದಲ್ಲಿ ಮೋದಿ ಸರಕಾರ ಈ ಭಾರತ ವಿರೋಽಗಳ ಶಕ್ತಿಯನ್ನು ಅಡಗಿಸಲು ಸಾಕಷ್ಟು ಸಫಲವಾಗಿದೆ.

2024ರ ಚುನಾವಣೆ ಈ ಭಾರತ ವಿರೋಧಿ ಶಕ್ತಿಗಳಿಗೆ ಮಾಡು ಇಲ್ಲವೆ ಮಡಿ ಎಂಬ ಪರಿಸ್ಥಿತಿಯದ್ದು. ಅವರದ್ದು ಅಸ್ತಿತ್ವದ ಉಳಿವಿಗಾಗಿ ಹೋರಾಟ. ಆದ್ದರಿಂದಲೇ ಮೋದಿಯವರನ್ನು ಸೋಲಿಸಲು ಎಲ್ಲಾ ರೀತಿಯ ತಂತ್ರ ಕುತಂತ್ರಗಳನ್ನು ಮಾಡಲಿದ್ದಾರೆ. ವಿದೇಶಗಳಲ್ಲಿ ಅತೀ ಹೆಚ್ಚು ಅಪ ಪ್ರಚಾರ ಮಾಡುತ್ತಿರುವುದು ರಾಹುಲ್ ಗಾಂದಿ ಮತ್ತು ಇದಕ್ಕೆ ಆ ದೇಶಗಳಲ್ಲಿ ವೇದಿಕೆಯನ್ನು ಒದಗಿಸಿಕೊಡುತ್ತಿರುವುದು ಇದೇ ಭಾರತ ವಿರೋಧಿ ಶಕ್ತಿಗಳು. ಈ ಶಕ್ತಿಗಳ ಹಿಡಿತದಲ್ಲಿಯೇ ಫೇಸ್ ಬುಕ್ ಟ್ವಿಟ್ಟರ್‌ನಂತಹ ಸಾಮಾಜಿಕ ಜಾಲತಾಣಗಳೂ ಇವೆ. ರೈತ ಹೋರಾಟದ ಸಮಯದಲ್ಲಿ ಭಾರತದ ವಿರುದ್ಧ ಬಳಸಿಕೊಂಡಂತಹ ಟೂಲ್ ಕಿಟ್‌ಗಳು ಸಾಮಾಜಿಕ ಜಾಲತಾಣದ ಮೂಲಕ ಮಾಡಲಿವೆ. ಇತ್ತೀಚೆಗೆ ಒಪನ್ ಸೊಸೈಟಿಯ ಜಾರ್ಜ್ ಸೊರಾಸ್ ಭಾರತದಲ್ಲಿ ಮೋದಿ ಸರಕಾರವನ್ನು ಕಿತ್ತೊಗೆಯಲು ತಾನು ಒಂದು ಬಿಲಿಯನ್ ಡಾಲರ್ ಹೂಡಿಕೆ ಮಾಡುವುದಾಗಿ ನೇರವಾಗಿ ಹೇಳುತ್ತಾನೆ. ಭಾರತದೊಳಗೆ ವಿರೋಧ ಪಕ್ಷಗಳು ಅಽಕಾರದ ಗದ್ದುಗೆ ಏರಲು ಪ್ರಜಾಪ್ರಭುತ್ವದ ಎಲ್ಲಾ ಮೌಲ್ಯಗಳನ್ನು ಗಾಳಿಗೆ ತೂರಿ ಕುತಂತ್ರದ ರಾಜಕಾರಣ ಮಾಡುತ್ತಿವೆ. ಇಂತಹಾ ಸಂದಿಗ್ಧ ಸಂದರ್ಭದಲ್ಲಿ 2024ರ ಚುನಾವಣೆಯಲ್ಲಿ ಪ್ರಧಾನಿ ಮೋದಿಯವರನ್ನು ಈ ದೇಶ ಮತ್ತೊಮ್ಮೆ ಚುನಾಯಿಸಬೇಕಾದ ಅನಿವಾರ್ಯತೆಯಿದೆ. ದೇಶವನ್ನು ಪ್ರೀತಿಸುವ, ಕಾಳಜಿಯಿರುವ ಪ್ರತೀ ಭಾರತೀಯನೂ ಈ ನಿಟ್ಟಿನಲ್ಲಿ ಇಂದಿನಿಂದಲೇ ಕ್ರಿಯಾಶೀಲರಾಗಲೇ ಬೇಕಿದೆ.

## ಚರ್ಚೆಗೊಂದು ಸಾಲು...

**ಸರ್ಕಾರ ಪ್ರತೀ ಪ್ರಜೆಯನ್ನು ಸ್ವಾವಲಂಬಿಯನ್ನಾಗಿಸಬೇಕು... ಬೇಡುವ ಭಿಕ್ಷುಕನನ್ನಾಗಿಸಬಾರದು...**



# ನೈತಿಕ ಹೊಣೆಗೆ ಹೊಸ ಅರ್ಥ ಕೊಟ್ಟ

# ಅಶ್ವಿನಿ ವೈಷ್ಣವ್!



## ಕೇವಲ 50 ಗಂಟೆಗಳಲ್ಲಿ ಸುಸೂತ್ರ ಕೆಲಸ



**ರಾಹುಲ್ ಹಜಾರೆ**
ಅಂಕಣಕಾರರು

ಒರಿಸ್ಸಾದ ರೈಲು ದುರಂತ. ರೇಲ್ವೇ ಸಚಿವರಿಗೆ ಇದೊಂದು ಸತ್ವ ಪರೀಕ್ಷೆ! ಅಲ್ಲಿನ ಘಟನೆಯ ಕುರಿತು ವರದಿ ಪಡೆಯಬೇಕು. ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಬೋಗಿಗಳನ್ನು ಸ್ಥಳಾಂತರಿಸಬೇಕು. ಹಳಿಯ ದುರಸ್ತಿ ಕಾರ್ಯ ಮಾಡಿ ಇದೇ ಹಳಿಯಲ್ಲಿ ಓಡಾಡಬೇಕಾಗಿದ್ದ ಇನ್ನಿತರೆ ರೈಲುಗಳಿಗೆ ಜಾಗ ಮಾಡಿಕೊಡಬೇಕು. ತೀರಿಹೋದವರನ್ನು ಅವರ ಬಂಧು ಬಾಂಧವರಿಗೆ ಸುದ್ದಿ ಮುಟ್ಟಿಸಬೇಕು, ಗಾಯಗೊಂಡವರನ್ನು ಆಸ್ಪತ್ರೆಗೂ ಕಳಿಸಬೇಕು, ಪರಿಹಾರ ಕಾರ್ಯಗಳು ನಡೆಯಬೇಕು, ಹೇಗೆ ಅಪಘಾತವಾಯಿತು ಎಂಬ ತನಿಖೆಯೂ ನಡೆಯಬೇಕು, ಕೊನೆಯದಾಗಿ ಯಾವುದನ್ನೂ ವಿಳಂಬ ಮಾಡುವಂತಿಲ್ಲ! ಹಲವಾರು ಗೂಡ್ಸ್ ರೈಲುಗಳು ನಿಗದಿತ ಸಮಯಕ್ಕೆ, ನಿಗದಿತ ಜಾಗವನ್ನು ತಲುಪದೇ ಹೋದರೆ ದೇಶಕ್ಕೆ ಆರ್ಥಿಕ ನಷ್ಟವೂ ಆಗುತ್ತೆ. ಕಾಯುತ್ತಾ ಕುಳಿತ ಪ್ರಯಾಣಿಕರಿಗೆ ಯಾವ್ಯಾವ ತುರ್ತಿದೆಯೋ ಇದಿಷ್ಟನ್ನು ಸ್ಥಳದಲ್ಲೇ ನಿಂತು ಉಸ್ತುವಾರಿ ವಹಿಸಿಕೊಂಡು ಕೇವಲ 50 ಗಂಟೆಗಳಲ್ಲಿ ಸುಸೂತ್ರವಾಗಿ ಕೆಲಸ ಮುಗಿಸಿದವರು ರೇಲ್ವೇ ಸಚಿವ ಅಶ್ವಿನಿ ವೈಷ್ಣವ್.

ಒಬ್ಬ ಪ್ರಧಾನಿ ದಕ್ಷ ಆಡಳಿತ ನಡೆಸಬೇಕಾದರೆ ಅವನ ತಂಡ ಅಷ್ಟೇ ದಕ್ಷವಾಗಿರಬೇಕು. ಸತ್ವ ಪರೀಕ್ಷೆಗಳೆದುರಾದಾಗಲೇ ದಕ್ಷತೆ ಕಣ್ಮುಂದೆ ಬರುತ್ತದೆ. ಅಂಥದ್ದೇ ಸತ್ವ ಪರೀಕ್ಷೆ ಒರಿಸ್ಸಾದ ರೈಲು ದುರಂತ. ಘಟನೆಯ ವರದಿ, ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಬೋಗಿಗಳ ಸ್ಥಳಾಂತರ, ಹಳಿಯ ದುರಸ್ತಿ ಕಾರ್ಯ, ಇದೇ ಹಳಿಯಲ್ಲಿ ಓಡಾಡುವ ಇನ್ನಿತರೆ ರೈಲುಗಳಿಗೆ ಜಾಗ ಮಾಡಿಕೊಡುವುದು, ತೀರಿಹೋದವರ ಬಗ್ಗೆ ಅವರ ಬಂಧು ಬಾಂಧವರಿಗೆ ಸುದ್ದಿ ಮುಟ್ಟಿಸುವುದು, ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸುವುದು, ಪರಿಹಾರ ಕಾರ್ಯಗಳು, ಅಪಘಾತದ ತನಿಖೆ, ಕೊನೆಯದಾಗಿ ಯಾವುದನ್ನೂ ವಿಳಂಬ ಮಾಡುವಂತಿಲ್ಲ! ಹಲವಾರು ಗೂಡ್ಸ್ ರೈಲುಗಳು ನಿಗದಿತ ಸಮಯಕ್ಕೆ, ನಿಗದಿತ ಜಾಗವನ್ನು ತಲುಪದಿದ್ದಲ್ಲಿ ದೇಶಕ್ಕೆ ಆರ್ಥಿಕ ನಷ್ಟ, ಕಾಯುತ್ತಾ ಕುಳಿತ ಪ್ರಯಾಣಿಕರಿಗೆ ತುರ್ತು ನೆರವು ಇದಿಷ್ಟನ್ನು ಸ್ಥಳದಲ್ಲೇ ನಿಂತು ಉಸ್ತುವಾರಿ ವಹಿಸಿಕೊಂಡು ಕೇವಲ 50 ಗಂಟೆಗಳಲ್ಲಿ ಸುಸೂತ್ರವಾಗಿ ಕೆಲಸ ಮುಗಿಸಿದವರು ರೇಲ್ವೇ ಸಚಿವ ಶ್ರೀ ಅಶ್ವಿನಿ ವೈಷ್ಣವ್.


ಒಟ್ಟಾರೆ 2,300ಕ್ಕೂ ಹೆಚ್ಚು ಮಾನವ ಸಂಪನ್ಮೂಲವನ್ನು ಬಳಸಿ, ಜೀವಗಳನ್ನು ಉಳಿಸಲು ಪ್ರಯತ್ನಿಸಿದರು. ತಲಾ ಎಪ್ಪತ್ತು ಜನರಿರುವ ಎಂಟು ತಂಡಗಳು ಅವಿರತವಾಗಿ ಈ ಕಾರ್ಯದಲ್ಲಿ ನಿರತವಾದವು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ರೇಲ್ವೆ ಬೋರ್ಡಿನ ಛೇರ್ಮನ್ನರನ್ನು ಕಟಕ್ಕಿನ ಆಸ್ಪತ್ರೆಗೂ EA ಅವರನ್ನು ಭುವನೇಶ್ವರದ ಆಸ್ಪತ್ರೆಗೆ ಕಳುಹಿಸಿ ಗಾಯಾಳುಗಳನ್ನು ಸಂತೈಸಲು ಹೇಳಲಾಯಿತು. ರೇಲ್ವೇ ಇಲಾಖೆಯ ಕೇಂದ್ರ ಕಛೇರಿಯಲ್ಲಿ ನಾಲ್ಕಾರು ಲೈವ್ ಕ್ಯಾಮರಾಗಳ ಮೂಲಕ ಈ ಎಲ್ಲಾ ಕಾರ್ಯಗಳ ಒಟ್ಟಾರೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿತ್ತು. ಇಂಥ ಒಂದು ಬೃಹತ್ ಪ್ರಮಣದ ಕೆಲಸ ಇಷ್ಟೊಂದು ಕ್ಷಿಪ್ರಗತಿಯಲ್ಲಿ ನಡೆದು ಐವತ್ತು ಗಂಟೆಗಳಲ್ಲಿ ಎಲ್ಲವೂ ಸರಿಹೋಗಿ ಹೊಸ ರೈಲೊಂದು ಹಳಿಯ ಮೇಲೆ ಓಡಾಡುವಂತಾಗಲು ಕಾರಣ ರೈಲ್ವೇ ಮಂತ್ರಿಗಳ ಮುತ್ಸದ್ದಿತನ ಮತ್ತು ಕಳೆದ 9 ವರ್ಷಗಳಲ್ಲಿ ಕೇಂದ್ರ ಸರಕಾರ ರೈಲ್ವೆ ಇಲಾಖೆಯ ಕಾರ್ಯಪದ್ಧತಿಯಲ್ಲಿ ಮಾಡಿದ ಆಮೂಲಾಗ್ರ ಬದಲಾವಣೆ..

ಪಣಜಿ ಮುಂಬೈ ವಂದೇ ಭಾರತ್ ರೈಲಿನ ಉದ್ಘಾಟನೆಗಾಗಿ ಗೋವಾಗೆ ಆಗಮಿಸಿದ್ದ ಸಚಿವರಿಗೆ ಒರಿಸ್ಸಾದ ರೈಲು ದುರಂತದ ಸುದ್ದಿ ತಿಳಿದಾಗ ರಾತ್ರಿ ಏಳು ಗಂಟೆ. ಅಲ್ಲಿಂದ ದೆಹಲಿಗೆ ತೆರಳಿ, ಅಲ್ಲಿಂದ ವಿಶೇಷ ವಿಮಾನದಲ್ಲಿ ಒರಿಸ್ಸಾಕೆ ಹೊರಟಾಗ ಬೆಳಗ್ಗೆ 3 ಗಂಟೆ! ವಿಮಾನ ನಿಲ್ದಾಣದಿಂದಲೇ ಪರಿಹಾರ ಕಾರ್ಯ ನಿರ್ವಹಣೆಯನ್ನು ಅವರ ತಂಡದೊಂದಿಗೆ ಚರ್ಚಿಸಿ ವಿಮಾನ ನಿಲ್ದಾಣದಿಂದ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ಕಾರ್ಯದ ಮೇಲುಸ್ತುವಾರಿಯನ್ನು ಗಮನಿಸಿದರು. ರೇಲ್ವೇ ಸುರಕ್ಷಾ ಆಯುಕ್ತರ ತಂಡಕ್ಕೆ ತನಿಖೆಗೆ ಆದೇಶ ನೀಡುತ್ತಾ ಪ್ರಧಾನಿಯವರಿಗೆ ಮಾಹಿತಿ ಒದಗಿಸಿದರು. ಪ್ರಧಾನಿಯವರು ಸಚಿವರೊಂದಿಗೆ ಘಟನಾ ಸ್ಥಳ ಮತ್ತು ಆಸ್ಪತ್ರೆಗೆ ತೆರಳಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು. ಪ್ರಧಾನಿ ಅವರು ಅಪಘಾತದ ಸ್ಥಳದಿಂದ ಮಾಧ್ಯಮಗಳಿಗೆ ವಿವರಣೆಯನ್ನು ನೀಡಿದರು. ಸಚಿವರ ಉಪಸ್ಥಿತಿಯಲ್ಲಿ ಬೋಗಿಗಳ ತೆರವು, ಪ್ರಯಾಣಿಕರನ್ನು ಆಸ್ಪತ್ರೆಗೆ ಸೇರಿಸುವುದು, ಹಾಳಾದ ಹಳಿಗಳ ದುರಸ್ತಿ ಎಲ್ಲವೂ ಏಕಕಾಲಕ್ಕೆ ನಡೆದವು. ಕೇವಲ ಐವತ್ತೊಂದು ಗಂಟೆಗಳಲ್ಲಿ ಹಳಿಗಳ ಸಂಪೂರ್ಣ ದುರಸ್ತಿ ಕಾರ್ಯ ನಡೆದು ಅಪಘಾತವಾದ ಹಳಿ ಪುನಃ ಸಂಚಾರಕ್ಕೆ ಯೋಗ್ಯವಾದದ್ದು ಇದೇ ಮೊದಲು. ಸಂತ್ರಸ್ತರಿಗೆ ಪರಿಹಾರ ಸಿಗುವವರೆಗೆ, ಗಾಯಾಳುಗಳು ಚಿಕಿತ್ಸೆಯಿಂದ ಗುಣವಾಗುವವರೆಗೆ ವಿರಮಿಸುವುದಿಲ್ಲ ಎಂದು ಸಚಿವರು ಹೇಳಿದ್ದಾರೆ.

## ರಾಜಿನಾಮೆಯಲ್ಲ, ಜವಾಬ್ದಾರಿ ನಿರ್ವಹಣೆ

ಇಷ್ಟಾಗಿಯೂ ಕಾಂಗ್ರೆಸ್ ರಾಜೀನಾಮೆಯನ್ನು ಕೇಳುತ್ತಿದೆ. ಅಸಲಿಗೆ ರಾಜೀನಾಮೆಯೊಂದು ಈ ಹಿಂದಿನ ಸರ್ಕಾರಗಳು ರೂಢಿಸಿಕೊಂಡು ಬಂದ ಪಲಾಯನವಾದವಷ್ಟೆ. ಈ ಇಲಾಖೆಯಲ್ಲಿ ರಾಜೀನಾಮೆ ಪಡೆದು ಮತ್ತೊಂದು ಇಲಾಖೆಗೆ ಸಚಿವರನ್ನು ದಾಟಿಸುತ್ತಿದ್ದರು. ನೈತಿಕ ಹೊಣೆ ಹೊತ್ತವರು ಸ್ಥಳದಲ್ಲೆ ನಿಂತು ಆದ ಅಷ್ಟೂ ಅನಾಹುತಗಳನ್ನು ಸರಿ ಮಾಡದೇ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಟ್ಟ ಸಂಪ್ರದಾಯಕ್ಕೆ ಶ್ರೀ ಅಶ್ವಿನಿ ವೈಷ್ಣವ್ ತಿಲಾಂಜಲಿ ಹೇಳಿಯಾಗಿದೆ. ಶ್ರೀ ಅಶ್ವಿನಿ ವೈಷ್ಣವ್ ಅವರು ಇಂಥ ಹಲವಾರು ಹುದ್ದೆಗಳನ್ನು ನಿರ್ವಹಿಸಿ ಬಂದ ಕಾರಣ ಇಂಥ ಸಂಕಷ್ಟಗಳನ್ನು ನಿರ್ವಹಿಸುವ ಕಲೆಯೂ ಕರಗತವಾಗಿತ್ತು. ಎಲೆಕ್ಟ್ರಾನಿಕ್ಸ್ ವಿಭಾಗದ BTechನಲ್ಲಿ ಗೋಲ್ಡ್ ಮೆಡಲ್ ಪಡೆದು, IIT ಕಾನ್ಪುರ್‌ನಿಂದ MTech ಮಾಡಿದವರವರು. IASನಲ್ಲಿ ಭಾರತಕ್ಕೆ 27ನೇ ರ‍್ಯಾಂಕ್ ಪಡೆದವರು. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಿಂದ MBA, ಅಮೇರಿಕಾದ GE ಟ್ರಾನ್ಸ್‌ಪೋರ್ಟೇಷನ್ MDಯಾಗಿ ಕಾರ್ಯ ನಿರ್ವಹಿಸಿದವರು. ಜರ್ಮನಿಯ ಸೀಮನ್ಸ್‌ನ VC ಮತ್ತು ಮುರ್ಮುಗಾವಾ ಪೋರ್ಟ್ ಅಥಾರಿಟಿಯ ಛೇರ್ಮನ್ ಆಗಿ ಸೇವೆ ಸಲ್ಲಿಸಿದವರು. Vee Gee Auto Components Pvt Ltd, Three Tee Auto Logistics Pvt Ltdನ ಸ್ಥಾಪಕರು ಆಗಿದ್ದವರು. ಸದ್ಯ ರೇಲ್ವೇ ಮಂತ್ರಿಯಷ್ಟೇ ಅಲ್ಲದೇ ಟೆಲಿಕಾಂ ಮಂತ್ರಿಯೂ ಆಗಿದ್ದು 5G ತರಂಗಾಂತರದ ಅನುಷ್ಠಾನವನ್ನೂ ನಿರ್ವಹಿಸುತ್ತಿದ್ದಾರೆ. ವಂದೇ ಭಾರತ್ ಮತ್ತು ಆಧುನಿಕ ರೇಲ್ವೇ ನಿಲ್ದಾಣಗಳ ಪರಿಕಲ್ಪನೆಯನ್ನು ಕೊಟ್ಟವರು ಶ್ರೀ ಅಶ್ವಿನಿ ವೈಷ್ಣವ್.

1999ರಲ್ಲಿ IAS ಅಧಿಕಾರಿಯಾದಾಗ ಒರಿಸ್ಸಾದ ಚಂಡ ಮಾರುತದಿಂದಾದ ಹಾನಿಯನ್ನು ನಿರ್ವಹಿಸಿದವರು ಶ್ರೀ ಅಶ್ವಿನಿ ವೈಷ್ಣವ್. ಆಗ ಪ್ರಧಾನಿಯಾಗಿದ್ದ ದಿ. ವಾಜಪೇಯಿ ಅವರಿಂದ ಮೆಚ್ಚುಗೆ ಪಡೆದವರನ್ನು ಪ್ರಧಾನಿ ಶ್ರೀ ಮೋದಿ ನೇತೃತ್ವದ ಆಡಳಿತಾವಧಿಯಲ್ಲಿ ಇವರಿಗೆ ರೇಲ್ವೆ ಇಲಾಖೆಯನ್ನು ನೀಡಿದ ಗುಣಗ್ರಾಹಿತನವನ್ನು ಮೆಚ್ಚಲೇಬೇಕು. ನೈತಿಕ ಹೊಣೆ ಅನ್ನುವುದಕ್ಕೆ ಹೊಸ ಅರ್ಥ ಕೊಟ್ಟವರು ಶ್ರೀ ಅಶ್ವಿನಿ ವೈಷ್ಣವ್. ಪ್ರಧಾನಿ ಶ್ರೀ ಮೋದಿಯವರ ಸಚಿವ ಸಂಪುಟದಲ್ಲಿ ಇಂಥದ್ದೇ ದಕ್ಷ ಮಂತ್ರಿಗಳ ದಂಡೇ ಇದೆ. ಸ್ವ-ದಕ್ಷತೆಯ ಜೊತೆಗೆ ತಂಡದ ದಕ್ಷತೆಯೂ ಪ್ರಶ್ನಾತೀತವಾದದ್ದರಿಂದಲೇ ಪ್ರಧಾನಿ ಶ್ರೀ ಮೋದಿ ಅವರು ವಿಶ್ವನಾಯಕನಾದದ್ದು.












# ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನೆ

**ವಿದ್ಯುತ್ ದರ ಹೆಚ್ಚಳಕ್ಕೆ ಖಂಡನೆ :** ರಾಜ್ಯ ಕಾಂಗ್ರೆಸ್ ಸರ್ಕಾರ ಒಂದೆಡೆ 200 ಯುನಿಟ್‌ವರೆಗೂ ಉಚಿತ ವಿದ್ಯುತ್ ಎಂದು ಹೇಳಿದರೆ ಮತ್ತೊಂದು ಕಡೆ ಒಂದು ಯುನಿಟ್‌ಗೆ 0.70 ಪೈಸೆಯಷ್ಟು ದರವನ್ನು ಹೆಚ್ಚು ಮಾಡಿದ್ದು, ವಾಣಿಜ್ಯ ಮಳಿಗೆಗಳ ವಿದ್ಯುತ್‌ನ ಕನಿಷ್ಠ ಶುಲ್ಕ ರೂ. 125 ರಿಂದ 200 ರವರೆಗೆ ಹೆಚ್ಚಿಸಿದ್ದಾರೆ. ಅಂದರೆ ಒಂದು ಕಡೆ ಉಚಿತ ಎಂದು ಘೋಷಿಸಿದ ಕಾಂಗ್ರೆಸ್ ಸರ್ಕಾರ ಮತ್ತೊಂದೆಡೆ ದರ ಹೆಚ್ಚಿಸಿ ಹಣ ಸಂಗ್ರಹಿಸುತ್ತಿದೆ. ಇದರಿಂದ ಜನತೆಗೆ ಮತ್ತಷ್ಟು ಹೊರೆಯಾಗಲಿದೆ ಆದ್ದರಿಂದ ವಿದ್ಯುತ್ ದರ ಹೆಚ್ಚಳವನ್ನು ಹಿಂಪಡೆಯಬೇಕೆಂದು ಬಿಜೆಪಿ ಒತ್ತಾಯಿಸುತ್ತಿದೆ.

**ಗೋಹತ್ಯೆ ನಿಷೇಧ ಕಾನೂನು ರದ್ದತಿಗೆ ವಿರೋಧ:** ರಾಜ್ಯ ಪಶುಸಂಗೋಪನ ಸಚಿವರಾದ ಶ್ರೀ ವೆಂಕಟೇಶ್‌ರವರು ರಾಜ್ಯದಲ್ಲಿ ವಯಸ್ಸಾದ ಹಸುಗಳನ್ನು ಸಾಕಲು ಕಷ್ಟವಾಗುತ್ತದೆ ಆದ್ದರಿಂದ ಗೋ ಹತ್ಯೆ ನಿಷೇಧ ಕಾನೂನನ್ನು ರದ್ದು ಮಾಡಿ ಗೋಹತ್ಯೆಗೆ ಅವಕಾಶ ನೀಡಲಾಗುವುದು ಎಂದು ಹೇಳಿಕೆ ನೀಡಿದ್ದಾರೆ. ಇದನ್ನು ಬಿಜೆಪಿ ವಿರೋಧಿಸುತ್ತದೆ.

ನಮ್ಮ ದೇಶದಲ್ಲಿ ಹಸುಗಳನ್ನು ಪೂಜಾ ಸ್ಥಾನದಲ್ಲಿಟ್ಟು ಗೌರವಿಸಲಾಗುತ್ತಿದೆ, ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಹಸುಗಳನ್ನು ಒದೆ ಮಾಡದೆ ತಾಯಿಯಂತೆ ರಕ್ಷಣೆ ಮಾಡಿಕೊಂಡು ಬಂದಿರುವುದು ನಮ್ಮ ಸಂಸ್ಕೃತಿಯಾಗಿದೆ. 1948, 1964 ರಲ್ಲಿ ಕಾಂಗ್ರೆಸ್ ಸರ್ಕಾರ ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತಂದಿತು. ನಮ್ಮ ರಾಜ್ಯದಲ್ಲಿ 2020-21 ರಲ್ಲಿ ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೊಳಿಸಿದೆ. ಈಗ ಮತ್ತೆ ಇದನ್ನು ರದ್ದುಗೊಳಿಸಿ ಗೋ ಹತ್ಯೆಗೆ ಅವಕಾಶ ನೀಡಿದರೆ ಕೋಟ್ಯಾಂತರ ಜನರ ಭಾವನೆಗೆ ಧಕ್ಕೆಯುಂಟು ಮಾಡಿದಂತಾಗುತ್ತದೆ. ನಮ್ಮ ಮನೆಗಳಲ್ಲಿ ವಯಸ್ಸಾದ ತಂದೆ-ತಾಯಿಯರನ್ನು ಹೇಗೆ ನಾವು ರಕ್ಷಿಸುತ್ತೇವೆಯೋ ಹಾಗೆಯೇ ವಯಸ್ಸಾದ ಹಸುಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಕೂಡಲೆ ಸರ್ಕಾರ ಈ ಹೇಳಿಕೆಯನ್ನು ಹಿಂಪಡೆಯಬೇಕೆಂದು ಬಿಜೆಪಿ ಆಗ್ರಹಿಸುತ್ತದೆ.

**ಒಕ್ಕೂಟಗಳಿಂದ ನೀಡುತ್ತಿದ್ದ ಹಾಲಿನ ಪ್ರೋತ್ಸಾಹಧನ ಕಡಿತಕ್ಕೆ ವಿರೋಧ:** ರಾಜ್ಯದಲ್ಲಿರುವ ಎಲ್ಲಾ ಹಾಲು ಒಕ್ಕೂಟಗಳು ಹಾಲು ಉತ್ಪಾದಕರಿಗೆ 1.5 ರೂ ಪ್ರೋತ್ಸಾಹಧನವನ್ನು ನೀಡುತ್ತಿದ್ದವು, ಆದರೆ ಈಗ ನಿಲ್ಲಿಸಲಾಗಿದೆ. ಇದರಿಂದ ಲಕ್ಷಾಂತರ ರೈತರು ಮತ್ತು ಹಾಲು ಉತ್ಪಾದಕರಿಗೆ ತೊಂದರೆಯಾಗಿದೆ. ಸರ್ಕಾರ ಮಧ್ಯಪ್ರವೇಶಿಸಿ ಯಥಾರೀತಿಯಲ್ಲಿ ಹಾಲು ಉತ್ಪಾದಕರಿಗೆ ಒಕ್ಕೂಟಗಳಿಂದ ನೀಡುತ್ತಿದ್ದ 1.5 ರೂಗಳನ್ನು ನೀಡುವಂತೆ ಮಾಡಬೇಕೆಂದು ಬಿಜೆಪಿ ಒತ್ತಾಯಿಸುತ್ತಿದೆ.




**ಬೆಂಗಳೂರು:** ರಾಜ್ಯದ ಕಾಂಗ್ರೆಸ್ ಸರಕಾರವು ಹೆಚ್ಚಿಸಿದ ವಿದ್ಯುತ್ ದರವನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು ಎಂದು ಮಾಜಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅವರು ಆಗ್ರಹಿಸಿದರು.

ಬಿಜೆಪಿ ಬೆಂಗಳೂರು ಮಹಾನಗರದ ವತಿಯಿಂದ ರಾಜ್ಯದ ಕಾಂಗ್ರೆಸ್ ಸರಕಾರದ ನೀತಿಯನ್ನು ಖಂಡಿಸಿ ನಗರದ ಫ್ರೀಡಂ ಪಾರ್ಕ್ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ಸಚಿವರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಅವರು ಮಾತನಾಡಿ ವಿದ್ಯುತ್ ಬೆಲೆ ಏರಿಕೆಯ ಹೊರೆಯನ್ನು ರಾಜ್ಯದ ಜನರ ಮೇಲೆ ಕಾಂಗ್ರೆಸ್ ಸರಕಾರ ವಿಧಿಸಿದ್ದು, ಕಾಂಗ್ರೆಸ್ ಸರ್ಕಾರವು ಜನವಿರೋಧಿ ನೀತಿಯನ್ನು ಅನುಸರಿಸುತ್ತಿದೆ, ಇದನ್ನು ಬಿಜೆಪಿ ಖಂಡಿಸುತ್ತದೆ ಎಂದು ತಿಳಿಸಿದರು.

ಸಂಸದರಾದ ಶ್ರೀ ಪಿ.ಸಿ.ಮೋಹನ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ರವಿಕುಮಾರ್, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೇಶವ ಪ್ರಸಾದ್, ಶ್ರೀ ವಿನಯ ಬಿದರೆ, ಮಾಜಿ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್, ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಎಸ್.ಸಿ. ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಶ್ರೀ ಗೋಪಿನಾಥ ರೆಡ್ಡಿ, ನಗರ ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣ, ಶ್ರೀ ಮಂಜುನಾಥ್, ಶ್ರೀ ಎನ್.ಆರ್.ರಮೇಶ್, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗೋಪೂಜೆ ನೆರವೇರಿಸಿದ ಕಾರ್ಯಕರ್ತರು ಮತ್ತು ಪ್ರಮುಖರು ಬಿಜೆಪಿ ಜಾರಿಗೊಳಿಸಿದ ಗೋಹತ್ಯಾ ನಿಷೇಧ ಕಾನೂನನ್ನು ಮುಂದುವರಿಸಬೇಕು ಮತ್ತು ಅದನ್ನು ಹಿಂದಕ್ಕೆ ಪಡೆಯದಂತೆ ಸರಕಾರವನ್ನು ಆಗ್ರಹಿಸಿದರು. ಹಾಲು ಒಕ್ಕೂಟಗಳು ಹಾಲು ಉತ್ಪಾದಕರಿಗೆ ನೀಡುತ್ತಿದ್ದ ಪ್ರೋತ್ಸಾಹಧನವನ್ನು ಯಥಾವತ್ ಮುಂದುವರಿಸುವಂತೆ ಒತ್ತಾಯಿಸಲಾಯಿತು.



**ಹಾವೇರಿ :** ಹಾವೇರಿ ನಗರದ ಹೊಸಮನಿ ಸಿದ್ದಪ್ಪ ಸರ್ಕಲ್‌ನಲ್ಲಿ ಕಾಂಗ್ರೆಸ್ ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದರಾಜ ಕಲಕೋಟಿ ಮತ್ತು ಸಂಸದರಾದ ಶ್ರೀ ಶಿವಕುಮಾರ ಉದಾಸಿಯವರು ಮಾತನಾಡಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ನೂತನ ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ಆಸೆ, ಆಮಿಷಗಳನ್ನು ಒಡ್ಡಿ, ಉಚಿತ ಗ್ಯಾರಂಟಿ ಕಾರ್ಡಗಳನ್ನು ಹಂಚಿ ಅಧಿಕಾರಕ್ಕೆ ಬಂದಿದೆ. ಚುನಾವಣೆಯ ಪ್ರಚಾರದಲ್ಲಿ ಒಂದು ಮನೆಗೆ 200 ಯುನಿಟ್ ವರೆಗೆ ವಿದ್ಯುತ್ ಉಚಿತವಾಗಿ ನೀಡುತ್ತೇವೆ ಎಂದು ಘೋಷಿಸಿದ ಕಾಂಗ್ರೆಸ್ ಇಂದು ಅಧಿಕಾರಕ್ಕೆ ಬಂದ ಮೇಲೆ ವರ್ಷದ 12 ತಿಂಗಳ ಸರಾಸರಿ ಲೆಕ್ಕವನ್ನು ಹಾಕಿ ಪ್ರತಿ ತಿಂಗಳು ಸರಾಸರಿ 70-80 ಯೂನಿಟ್ ವಿದ್ಯುತ್‌ನ್ನು ರಾಜ್ಯದ ಬಹಳ್ಟು ಮನೆಗಳು ಉಪಯೋಗಿಸುತ್ತಿವೆ. ಈ ಹಿನ್ನಲೆಯಲ್ಲಿ ಸರಾಸರಿಗಿಂತ 10 ಯುನಿಟ್ ಹೆಚ್ಚು ಉಪಯೋಗಿಸಲು ಅನುಮತಿ ಕೊಡುತ್ತೇವೆ ಅದಕ್ಕಿಂತ ಹೆಚ್ಚು ಯುನಿಟ್ ವಿದ್ಯುತ್ ಉಪಯೋಗಿಸಿದರೆ ಅದಕ್ಕೆ ಹಣವನ್ನು ಪಾವತಿಸಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದ್ದಾರೆ. ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಗ್ಯಾರಂಟಿ ಕಾರ್ಡಗಳನ್ನು ಹಂಚಿದಂತೆ ಮತ್ತು ಮಾತು ಕೊಟ್ಟಂತೆ 200 ಯುನಿಟ್‌ವರೆಗೆ ಮನೆಗಳಿಗೆ ಉಚಿತ ವಿದ್ಯುತ್ ನೀಡಬೇಕೆಂದು ಇಲ್ಲವಾದರೆ ಈ ಸರ್ಕಾರ ವಚನಭ್ರಷ್ಟ ಸರ್ಕಾರವಾಗುತ್ತದೆ ಎಂದು ಆಗ್ರಹಿಸಿದ್ದಾರೆ.



ಈ ಪ್ರತಿಭಟನೆಯಲ್ಲಿ ಹಾವೇರಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿಯಾದ ಶ್ರೀ ಗವಿಸಿದ್ದಪ್ಪ ದ್ಯಾಮಣ್ಣವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಶಿಧರ ಹೊಸಳ್ಳಿ, ಶ್ರೀ ರುದ್ರೇಶ

ಚಿನ್ನಣ್ಣನವರ, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷರಾದ ಶ್ರೀ ಭೋಜರಾಜ ಕರೋದಿ, ಗ್ರಾಮೀಣ ಮಂಡಲ ಅಧ್ಯಕ್ಷರಾದ ಶ್ರೀ ಬಸವರಾಜ ಕಳಸೂರ, ಜಿಲ್ಲಾ ವಕ್ತಾರರಾದ ಶ್ರೀ ಪ್ರಭು ಹಿಟ್ನಳ್ಳಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಶ್ರೀ ರಮೇಶ ಪಾಲನಕರ, ಶ್ರೀ ನೀಲಪ್ಪ ಚಾವಡಿ, ಶ್ರೀಮತಿ ಚನ್ನವ್ವ ಬ್ಯಾಡಗಿ, ಶ್ರೀ ವಿಜಕುಮಾರ ಚಿನ್ನಿಕಟ್ಟಿ, ಶ್ರೀ ಬವರಾಜ ಹಾಲಪ್ಪನವರ, ಶ್ರೀ ನಂಜುಡೇಶ ಕಳ್ಳೇರ, ಶ್ರೀ ಫಕ್ಕಿರೇಶ ಹಾವನೂರ, ಶ್ರೀ ಕಿರಣ ಕೋಣನವರ, ಶ್ರೀ ಕರಬಸಪ್ಪ ಹಳದೂರ, ಶ್ರೀ ಜಗದೀಶ ಓಲೇಕಾರ, ಶ್ರೀ ಶಿವಯೋಗಿ ಹುಲಿಕಂತಿಮಠ, ಶ್ರೀ ಎಂ.ಎಸ್. ಪಾಟೀಲ, ಶ್ರೀ ಮಲ್ಲಿಕಾರ್ಜುನ ಅಂಗಡಿ, ಶ್ರೀ ಇಸುಪಲಿ ಕರ್ಜಗಿ, ಶ್ರೀ ಸದಾನಂದ ಸುರಳಿಹಳ್ಳಿ, ಶ್ರೀ ಮಹಾಲಿಂಗಸ್ವಾಮಿ ಹಿರೇಮಠ, ಶ್ರೀ ನಾಗರಾಜ ಹಾರಗೋಲ, ಶ್ರೀ ಗಿರೀಶ ಶೆಟ್ಟರ, ಶ್ರೀ ಬಸವರಾಜ ಮತ್ತೂರ, ಶ್ರೀ ರಾಜು ಬಳ್ಳಾರಿ, ಶ್ರೀ ನಾಗರಾಜ ಮತ್ತೂರ, ಶ್ರೀ ನಿಖೀಲ ಡೊಗ್ಗಳ್ಳಿ, ಶ್ರೀ ಅಲ್ಲಾಭಕ್ಷ ತಿಮ್ಮಾಪೂರ, ಶ್ರೀ ರಾಜು ಹೊಸಕೇರಿ, ಶ್ರೀ ಶಂಭು ಹತ್ತಿ, ಶ್ರೀ ಕೋಟ್ರೇಶ ಮಂಜಲಾಪೂರ, ಶ್ರೀ ರಾಜಶೇಖರ, ಶ್ರೀ ಗಿರೀಶ ಶೆಟ್ಟರ ಮತ್ತು ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

**ಧಾರವಾಡ :** ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲೆ ಬಿಜೆಪಿ ವತಿಯಿಂದ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ವಿದ್ಯುತ್ ದರದ ಏರಿಕೆ ಹಾಗೂ ಜನ ವಿರೋಧಿ ನೀತಿಗಳನ್ನು ಖಂಡಿಸಿ ಪ್ರತಿಭಟಣೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಕಾಂಗ್ರೆಸ್ ಸರ್ಕಾರ ವಿಧಾನಸಭೆ ಚುನಾವಣೆಯಲ್ಲಿ ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದು ಗ್ಯಾರಂಟಿಯಾಗಿ 200 ಯುನಿಟ್ ವಿದ್ಯುತ್ ಉಚಿತ ಎಂದು ಹೇಳಿದ ಕೇವಲ ಒಂದು ವಾರದಲ್ಲಿ ರಾಜ್ಯದ ಜನರಿಗೆ 25% ರಷ್ಟು ದರ ಏರಿಕೆ ಮಾಡುವ ಮೂಲಕ ಪ್ರಥಮ ಬರೆ ನೀಡಿ ಮತದಾರರಿಗೆ ಮೋಸ ಮಾಡಿದೆ ಎಂದು ಆಗ್ರಹಿಸಿ ಜಿಲ್ಲಾಧ್ಯಕ್ಷಾರಾದ ಶ್ರೀ ಸಂಜಯ ಕಪಟಕರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಕ್ರಮ ಕೈಗೊಳ್ಳುವಂತೆ ಘನತೆವೆತ್ತ ರಾಜ್ಯ ಪಾಲರಿಗೆ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.




ಪ್ರಾರಂಭದಲ್ಲಿಯೇ ಗ್ಯಾರಂಟಿಗಳ ಭರಪಾಯಿ ಮಾಡಲು ವಿದ್ಯುತ್ ದರ ಏರಿಕೆ ಮಾಡುವ ಮೂಲಕ ಶುಭಾರಂಭ ಮಾಡಿದೆ. ಮುಂದಿನ ದಿನಗಳಲ್ಲಿ 5 ಉಚಿತ ಗ್ಯಾರಂಟಿಗಳನ್ನು ಪೂರೈಸಲು ಯಾವುದರ ಮೇಲೆ ಬೆಲೆ ಏರಿಕೆ ಮಾಡಿ ತಮ್ಮ ಉಚಿತ ಗ್ಯಾರಂಟಿ ಜಾರಿ ಮಾಡುತ್ತಾರೆ ಎಂದು ಜನರು ಈಗಿಂದಲೇ ಚಿಂತಿಸುವಂತೆ ಆಗಿದೆ ಎಂದು ಜಿಲ್ಲಾಧ್ಯಕ್ಷರಾದ ಸಂಜಯ ಕಪಟಕರ ರಾಜ್ಯ ಸರ್ಕಾರದ ವಿರುದ್ಧ ಟೀಕಿಸಿದರು.

ಈ ಸಂಧರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಸಂಜಯ ಕಪಟಕರ, ಶ್ರೀ ವಿಜಯಾನಂದ ಶೆಟ್ಟಿ, ಶ್ರೀ ಮಹಿಂದ್ರ ಕೌತಾಳ, ಶ್ರೀ ಬಸವರಾಜ ಗರಗ , ಶ್ರೀ ಶಿವಣ್ಣ ಬಣವನ್ನನವರ , ಶ್ರೀ ಮೋಹನ ರಾಮದುರ್ಗ, ಶ್ರೀ ಶಂಕರ್ ಶೇಳಕೆ, ಶ್ರೀ ಆನಂದ ಯಾವಗಲ್, ಶ್ರೀ ಬಸವರಾಜ ರುದ್ರಾಪುರ, ಶ್ರೀ ಮಂಜುನಾಥ ಬಟ್ಟಣನವರ, ಶ್ರೀ ವಿಷ್ಣು ಕೊರಲಳ್ಳಿ , ಶ್ರೀ ಶಿವಾಜಿ ಶಿಂದೆ, ಶ್ರೀ ಬಸವರಾಜ ಚಳಗೇರಿ, ಶ್ರೀ ಪ್ರಮೂದ ಕಾರಕೂನ, ಶ್ರೀ ವೀರನಗೌಡ ಲಕ್ಕಣಪರ, ಶ್ರೀಮತಿ ಮಾಲತಿ ಹುಲಿಕಟ್ಟಿ, ಶ್ರೀಮತಿ ಚಂದ್ರಕಲಾ ಕೊಟ್ಟಬಾಗಿ, ಶ್ರೀಮತಿ ಗೀತಾ ಪಾಟೀಲ್, ಶ್ರೀಮತಿ ಅಶ್ವಿನಿ ವೀರಾಪುರ, ಶ್ರೀಮತಿ ನೀಲಾಂಬಿಕೆ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಮಧುಗಿರಿ:** ಮಧುಗಿರಿ ಮಂಡಲ ವತಿಯಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ದ ಬೆಲೆ ಏರಿಕೆ ವಿರುದ್ಧ, ಗೋ ಹತ್ಯೆ ನಿಷೇಧ ವಾಪಸ್ ವಿರುದ್ಧ, ಗ್ಯಾರಂಟಿ ಯೋಜನೆ ಸರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.



ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಚ್ಚಿ ಮಂಜುನಾಥ್ ಉಪಾಧ್ಯಕ್ಷ ಲಕ್ಷ್ಮಿಪತಿ, ಮಂಡಲ ಅಧ್ಯಕ್ಷ ನರಸಿಂಹ ಮೂರ್ತಿ, ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಮಹಿಳಾ ಮುಖಂಡರಾದ ರತ್ನಮ್ಮ, ಸೀತಾರಾಮ್, ಕುಮಾರ್, ಇನ್ನು ಮುಂತಾದ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು

**ಉಡುಪಿ :** ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಜನತೆಗೆ ನೀಡಿರುವ 5 ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ 24 ಗಂಟೆಗಳೊಳಗೆ ಯಥಾವತ್ತಾಗಿ ಜಾರಿಗೊಳಿಸದೆ ರಾಜ್ಯದ ಜನತೆಗೆ ದ್ರೋಹ ಬಗೆದಿದೆ. 200 ಯುನಿಟ್ ಉಚಿತ ವಿದ್ಯುತ್ ಎಂದಿರುವ




ಕಾಂಗ್ರೆಸ್ ಇದೀಗ ಒಂದು ವರ್ಷದ ಸರಾಸರಿ ಎಂದು ವರಸೆ ಬದಲಿಸಿ, ವಿದ್ಯುತ್ ದರವನ್ನು ಕೂಡಾ ದಿಡೀರ್ ಹೆಚ್ಚಿಸಿರುವುದು ಖಂಡನೀಯ. ದಿನಕ್ಕೊಂದು ಹೇಳಿಕೆಗಳನ್ನು ನೀಡಿ ಸಮಾಜದಲ್ಲಿ ಗೊಂದಲ ಸೃಷ್ಠಿಸುವ ಬದಲು ಸರ್ಕಾರ ಜನಪರ ಆಡಳಿತದತ್ತ ಗಮನ ಹರಿಸುವುದು ಉತ್ತಮ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷರಾದ ಶ್ರೀ ಕುಯಿಲಾಡಿ ಸುರೇಶ್ ನಾಯಕ್ ಅವರು ಹೇಳಿದರು.

ಕೊಟ್ಟ ಮಾತು ತಪ್ಪಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಮಾನಸಿಕತೆ 15 ದಿನಗಳಲ್ಲೇ ಸಾಬೀತಾಗಿದೆ. ಗೃಹ ಲಕ್ಷ್ಮಿ, 10 ಕೆ.ಜಿ. ಅಕ್ಕಿ, ಪದವೀಧರರಿಗೆ ಮಾಸಾಶನ, ಬಸ್ ಪ್ರಯಾಣ ಗ್ಯಾರಂಟಿಯಲ್ಲೂ ಕಾಂಗ್ರೆಸ್ ಸರ್ಕಾರ ಸ್ಪಷ್ಟತೆ ಇಲ್ಲದೆ ತಾರತಮ್ಯ ನೀತಿಯನ್ನು ಅನುಸರಿಸಿ ಜನತೆಯಲ್ಲಿ ಗೊಂದಲ ಸೃಷ್ಟಿಸಿ ಮೋಸ ಎಸಗಿದೆ ಎಂದು ಹೇಳಿದರು. ಕಾಂಗ್ರೆಸ್ ಸಚಿವರಾದ ಶ್ರೀ ಎಂ.ಬಿ. ಪಾಟೀಲ್ ಅವರಿ ಬಿಜೆಪಿ ಕಾರ್ಯಕರ್ತರು ಬಾಲ ಬಿಚ್ಚಿದರೆ ಅವನ್ನು ಜೈಲಿಗೆ ಹಾಕುವುದಾಗಿ ದುರಹಂಕಾರದ ಮಾತನ್ನಾಡಿರುವುದು ಖಂಡನೀಯ. ಇಂತಹ ಗೊಡ್ಡು ಬೆದರಿಕೆಗಳಿಗೆ ಬಿಜೆಪಿ ಹೆದರುವುದಿಲ್ಲ, ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಯನ್ನು ಬಿಜೆಪಿ ಎಂದಿಗೂ ವಿರೋಧಿಸುತ್ತದೆ. ದನ ಮತ್ತು ಕೋಣದ ವ್ಯತ್ಯಾಸ ತಿಳಿಯದವರನ್ನು ಪಶು ಸಂಗೋಪನಾ ಸಚಿವರನ್ನಾಗಿ ನೇಮಕ ಮಾಡಿರುವ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ ನಾಚಿಕೆಯಾಗಬೇಕು ಎಂದು ಹೇಳಿದರು.

ರಾಜ್ಯದ ಜನತೆ ಕಾಂಗ್ರೆಸ್ಸಿನ ಬಣ್ಣ ಬದಲಿಸುವ ಗೋಸುಂಬೆತನವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು ಸೂಕ್ತ ಸಮಯದಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು. ಬಿಜೆಪಿ ಮಂಗಳೂರು ವಿಭಾಗ ಪ್ರಭಾರಿ ಶ್ರೀ ಕೆ.ಉದಯ ಕುಮಾರ್ ಶೆಟ್ಟಿ ಮತ್ತು ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ವೀಣಾ ಎಸ್. ಶೆಟ್ಟಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಉಚಿತ ಗ್ಯಾರಂಟಿಗಳ ಜಾರಿಯಲ್ಲಿ ಜನತೆಗೆ ಎಸಗಿದ ಮೋಸ ಮತ್ತು ಕಾಂಗ್ರೆಸ್ಸಿನ ಜನ ವಿರೋಧಿ ನೀತಿಯನ್ನು ಖಂಡಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ರವಿ ಅಮೀನ್, ಶ್ರೀ ಬೈಕಾಡಿ ಸುಪ್ರಸಾದ್ ಶೆಟ್ಟಿ, ಮಾಜಿ ಜಿಲ್ಲಾಧ್ಯಕ್ಷ ಶ್ರೀ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಮನೋಹರ್ ಎಸ್. ಕಲ್ಮಾಡಿ, ರಾಜ್ಯ ಎಸ್.ಸಿ. ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀ ದಿನಕರ ಬಾಬು, ಜಿಲ್ಲಾ ವಕ್ತಾರ ಶ್ರೀ ಕೆ.ರಾಘವೇಂದ್ರ ಕಿಣಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಸತ್ಯಾನಂದ ನಾಯಕ್, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಗುರುಪ್ರಸಾದ್ ಶೆಟ್ಟಿ, ಶ್ರೀಮತಿ ನಳಿನಿ ಪ್ರದೀಪ್ ರಾವ್, ಶ್ರೀಮತಿ ಅನಿತಾ ಶ್ರೀಧರ್, ಜಿಲ್ಲಾ ಸಹ ವಕ್ತಾರರಾದ ಶ್ರೀ ಶಿವಕುಮಾರ್ ಅಂಬಲಪಾಡಿ, ಶ್ರೀ ಪ್ರತಾಪ್ ಶೆಟ್ಟಿ ಚೇರ್ಕಾಡಿ, ಜಿಲ್ಲಾ ಮಾಧ್ಯಮ ಸಂಚಾಲಕರಾದ ಶ್ರೀ ಶ್ರೀನಿಧಿ ಹೆಗ್ಡೆ, ಉಡುಪಿ ನಗರಸಭೆ ಮಾಜಿ ಅಧ್ಯಕ್ಷ ಶ್ರೀ ಕಿರಣ್ ಕುಮಾರ್ ಬೈಲೂರು, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾದ ಶ್ರೀ ದಾವೂದ್ ಅಬೂಬಕರ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆಲ್ವಿನ್ ಡಿಸೋಜ, ಶ್ರೀ ಆಸಿಫ್ ಕಟಪಾಡಿ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರಶ್ಮಿತಾ ಬಿ. ಶೆಟ್ಟಿ, ಜಿಲ್ಲಾ ಒಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀ ಅರುಣ್ ಕುಮಾರ್ ಬಾಣ, ಜಿಲ್ಲಾ ಮೋರ್ಚಾಗಳ ಸಂಯೋಜಕರಾದ ಶ್ರೀ ಜಗದೀಶ್ ಆಚಾರ್ಯ ಕಪ್ಪೆಟ್ಟು, ಶ್ರೀ ವಿಜಯ ಕುಮಾರ್ ಉದ್ಯಾವರ, ಬಿಜೆಪಿ ಉಡುಪಿ ನಗರ ಪ್ರಧಾನ ಕಾರ್ಯದರ್ಶಿ ಶ್ರೀ ದಿನೇಶ್ ಅಮೀನ್, ಉಡುಪಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಚಿನ್ ಪೂಜಾರಿ, ಶ್ರೀ ಗಣೇಶ್ ಕುಲಾಲ್, ಪ್ರಮುಖರಾದ ಶ್ರೀ ರಾಜೇಂದ್ರ ಪಂದುಬೆಟ್ಟು, ಶ್ರೀ ಅಕ್ಷಯ್ ಶೆಟ್ಟಿ, ಶ್ರೀ ಸದಾನಂದ ಪ್ರಭು, ಶ್ರೀ ದಿನಕರ ಪೂಜಾರಿ, ಶ್ರೀ ಆನಂದ ಸುವರ್ಣ, ಶ್ರೀ ರುಡಾಲ್, ಶ್ರೀಮತಿ ಮಾಯಾ ಕಾಮತ್, ಶ್ರೀಮತಿ ಪೂರ್ಣಿಮಾ ರತ್ನಾಕರ್, ಶ್ರೀಮತಿ ಅಶ್ವಿನಿ ಶೆಟ್ಟಿ ಹಾಗೂ ಪಕ್ಷದ ವಿವಿಧ ಸ್ತರದ ಪದಾಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



# ಹೊತ್ತಿ ಉರಿದ ಮಣಿಪುರ



ಪ್ರತಾಪ್ ಸಿಂಗ್ ಬಿಳಿಗೆರೆ
ಕಾರ್ಯಕರ್ತರು

ಐತಿಹಾಸಿಕವಾಗಿ ಬುಡಕಟ್ಟು ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹೊಂದಿರುವ ಗುಡ್ಡಗಾಡು ಪ್ರದೇಶದಿಂದ ಕೂಡಿದ ಈಶಾನ್ಯ ಭಾರತದ ಸಪ್ತಸೋದರಿ ರಾಜ್ಯಗಳಲ್ಲಿ ಒಂದಾದ ಮಣಿಪುರ ರಾಜ್ಯಕ್ಕೆ ತನ್ನದೇ ಆದ ಇತಿಹಾಸವಿದೆ. 2011 ರ ಜನಗಣತಿಯಂತೆ ಇಲ್ಲಿ ಇಪ್ಪತ್ತೆಂಟುವರೆ ಲಕ್ಷ (28,55,794) ಜನ ವಾಸಿಸುತ್ತಿದ್ದಾರೆ. ಈ ರಾಜ್ಯದಲ್ಲಿ 41.39% ಹಿಂದೂಗಳು, 41.29% ಕ್ರಿಶ್ಚಿಯನ್‌ರು, 8.4% ಮುಸಲ್ಮಾನರು, ಉಳಿದಂತೆ ಅಲ್ಪ ಪ್ರಮಾಣದಲ್ಲಿ ಬೌದ್ಧರು, ಜೈನರು, ಸಿಖ್ಖರು, ಸನ್ಮತಿಗಳು ವಾಸಿಸುತ್ತಾರೆ. ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮೇಟಿ ಜನಾಂಗದವರು ಹಿಂದೂ ಧರ್ಮದ ಪರಿಪಾಲಕರಾಗಿದ್ದಾರೆ. ಉಳಿದಂತೆ ನಾಗ ಮತ್ತು ಕುಕ್ಕಿ ಬುಡಕಟ್ಟು ಜನಾಂಗಗಳು ಹಿಂದೆ ಬ್ರಿಟಿಷರ ಮತ್ತು ಮಿಷನರಿಗಳ ಪ್ರಭಾವದಿಂದ 98% ಕ್ರಿಶ್ಚಿಯನ್ನರಾಗಿ ಮತಾಂತರ ಹೊಂದಿದ್ದಾರೆ. ಗುಡ್ಡಗಾಡಿನ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುವ ಇವರನ್ನು ಪರಿಶಿಷ್ಟ ಪಂಗಡ(ಎಸ್.ಟಿ) ಎಂದು ಸರ್ಕಾರ ಪರಿಗಣಿಸಿದೆ. ಮೂಲತಃ ಮೇಟಿ ಜನಾಂಗವು ಬುಡಕಟ್ಟು ಸಂಸ್ಕೃತಿ, ಸಂಪ್ರದಾಯವನ್ನು ಆಚರಿಸುತ್ತಿದ್ದು ಇಲ್ಲಿಯ ಮೂಲ ನಿವಾಸಿಗಳಾಗಿದ್ದಾರೆ. ಇವರು ಮೊದಲಿನಿಂದಲೂ ಅಲ್ಲಿಯ ರಾಜಕಾರಣದ ಮೇಲೆ ಸ್ವಲ್ಪ ಹಿಡಿತ ಉಳ್ಳವರಾಗಿದ್ದಾರೆ.

19ನೇ ಶತಮಾನದ ಆದಿ ಭಾಗದಲ್ಲಿ ಪಕ್ಕದ ಬರ್ಮಾ ದೇಶವು ಮಣಿಪುರದ ಮೇಲೆ ದಾಳಿ ಮಾಡಿದಾಗ ಅದನ್ನು ಹಿಮ್ಮೆಟ್ಟಿಸಲು ಮಣಿಪುರದ ಅರಸರು ಬ್ರಿಟೀಷರ ಸಹಾಯ ಪಡೆದಿದ್ದರು. ಇದರ ದುರಪಯೋಗ ಪಡೆದ ಬ್ರಿಟೀಷರು ರಾಜನ ಮೇಲೆ ಪ್ರಭಾವ ಬೀರಿ ತಮ್ಮ ಧರ್ಮದ ಮತ ಪ್ರಚಾರಕ್ಕೆ ಮಿಷನರಿಗಳನ್ನು ಅಲ್ಲಿಗೆ ಕಳುಹಿಸಿ ಮಣಿಪುರದ ಕುಕ್ಕಿ ಮತ್ತು ನಾಗಾ ಬುಡಕಟ್ಟು ಸಮುದಾಯದ ಬಹುತೇಕರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸಿದರು.

ಭಾರತದ ಸ್ವಾತಂತ್ರ್ಯದ ಸಮಯದಲ್ಲಿ ಮಣಿಪುರದ ಅರಸು ಭೋದಚಂದ್ರನ ಮುಂದೆ 3 ಆಯ್ಕೆಗಳಿದ್ದವು ಒಂದು ಭಾರತದೊಂದಿಗೆ ವಿಲೀನವಾಗುವುದು, ಇಲ್ಲ ಬರ್ಮಾದೊಂದಿಗೆ ಸೇರುವುದು, ಇಲ್ಲವೇ ಸ್ವತಂತ್ರವಾಗಿ ಉಳಿಯುವುದು. ರಾಜ ಭೋದಚಂದ್ರನ ಭಾರತದೊಂದಿಗೆ ವಿಲೀನವಾಗಲು ಸಂಪೂರ್ಣವಾಗಿ ಒಪ್ಪಿದರು. ಆ ಸಂದರ್ಭದಲ್ಲಿ ಕೆಲವರು ಇದನ್ನು ವಿರೋಧಿಸಿದ್ದರು. ಹೀಗೆ ಮಣಿಪುರ ಭಾರತದ ಭಾಗವಾಯಿತು. ಇದನ್ನು ವಿರೋಧಿಸಿದವರು ಅವರು ನೇರವಾಗಿ ಭಾರತದ ಜೊತೆ ಸಂಘರ್ಷಕ್ಕೆ ಇಳಿದರು. 1964 ರಲ್ಲಿ ಯುನೈಟೆಡ್ ನ್ಯಾಷನಲ್ ಲಿಬರೇಷನ್ ಎನ್ನುವ ಸಂಘಟನೆ ಕಟ್ಟಿ ಪ್ರತ್ಯೇಕ ಮಣಿಪುರ ಎಂಬ ಕೂಗನ್ನು ಎಬ್ಬಿಸಿದರು. ಇದಾದ ನಂತರ 1977ರಲ್ಲಿ ದಿ ಪೀಪಲ್ಸ್ ರೆವಲ್ಯೂಷನರಿ ಪಾಟಿ ಆಫ್ ಕೆಂಗ್ಲಿ ಪಾಕ್ ಎಂಬ ಸಂಘಟನೆ ಹುಟ್ಟಿಕೊಂಡಿತು. ಕೆಂಗ್ಲಿ ಪಾಕ್ ಎನ್ನುವುದು ಮಣಿಪುರಕ್ಕೆ ಇರುವ ಮತ್ತೊಂದು ಹೆಸರು. ಹಾಗೆಯೇ 1978ರಲ್ಲಿ ಪೀಪಲ್ಸ್ ಲಿಬರೇಷನ್ ಆರ್ಮಿ ಎಂಬ ಸಂಘಟನೆ ಸಹಾ ಹುಟ್ಟಿಕೊಂಡಿತು. ಇವೆರಡೂ ಸಂಘಟನೆಗಳಿಗೆ ನಮ್ಮ ಶತ್ರು ರಾಷ್ಟ್ರ ಚೀನಾ ಹಣಕಾಸಿನ ಸಹಕಾರ, ಆಯುಧಗಳ ಸರಬರಾಜು ಮತ್ತು ತರಬೇತಿ ನೀಡುತ್ತಿದೆ ಎಂಬ ವಿಷಯವನ್ನು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆ ಬಹಿರಂಗಗೊಳಿಸಿತ್ತು. ಈ ಪ್ರತ್ಯೇಕತವಾದಿ ಹೋರಾಟಕ್ಕೆ 1980ರಲ್ಲಿ ದಿ ಕೆಂಗ್ಲಿ ಪಾಕ್ ಎನ್ನುವ ಕಮ್ಯುನಿಸ್ಟ್ ಸಂಘಟನೆಯೂ ಸೇರಿಕೊಂಡಿತು. ಈ ಎಲ್ಲಾ ಪ್ರತ್ಯೇಕವಾದಿ ಗುಂಪುಗಳು ನಾನಾ ಅಪರಾಧ ಕೃತ್ಯಗಳ ಮೂಲಕ ಹಣ ಸಂಗ್ರಾಮ ಮಾಡಿ ಅದನ್ನು ಪ್ರತ್ಯೇಕತವಾದಿ ಭಯೋತ್ಪಾದನೆ ಮತ್ತು ದೇಶ ವಿರೋಧಿ ಕೃತ್ಯಗಳಿಗೆ ಬಳಕೆ ಮಾಡುತ್ತಿದ್ದರು.

ಸ್ವಾತಂತ್ರ್ಯ ನಂತರ ಗಡಿಯ ರಾಜ್ಯಗಳಿಗೆ ಅದರಲ್ಲೂ ವಿಶೇಷವಾಗಿ ಬುಡಕಟ್ಟು ಜನಾಂಗವಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರವು 1972ರಲ್ಲಿ ಸಂವಿಧಾನದ ಅನುಚ್ಛೇದ 371ರ ಸಿ ಅಡಿಯಲ್ಲಿ ತರಲಾಯಿತು. ಇದರಿಂದಾಗಿ ಮಣಿಪುರ ರಾಜ್ಯದ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಕುಕ್ಕಿ ಮತ್ತು ನಾಗಾ ಜನಾಂಗಗಳನ್ನು ಪರಿಶಿಷ್ಟ ಪಂಗಡ ಎಂದು ಪರಿಗಣಿಸಿ ಮೀಸಲಾತಿ ನೀಡಲಾಯಿತು ಮತ್ತು ಗುಡ್ಡಗಾಡು

ಪ್ರದೇಶಗಳಲ್ಲಿ ಇವರಿಗೆ ಮಾತ್ರ ಆಸ್ತಿಯ ಹಕ್ಕು ಮತ್ತು ಶಾಶ್ವತ ವಾಸದ ಹಕ್ಕನ್ನು ನೀಡಲಾಯಿತು. ಹೆಚ್ಚು ಜನಸಂಖ್ಯೆಯುಳ್ಳ ಗಿರಿಜನ ಸಂಪ್ರದಾಯವನ್ನು ಹೊಂದಿರುವ ನಗರ ಪ್ರದೇಶಗಳಲ್ಲಿ ವಾಸಿಸುವ ಮೇಟಿ ಜನಾಂಗಕ್ಕೆ ಇದರಿಂದ ಅನ್ಯಾಯವಾಯಿತು. ಇವರು ವಾಸಿಸುತ್ತಿರುವುದು ಪಟ್ಟಣ ಪ್ರದೇಶಗಳಲ್ಲಿ ಮಾತ್ರ, ಅವರ ಅನೇಕ ಪೂಜಾ ಸ್ಥಳಗಳು ಗುಡ್ಡಗಾಡು ಪ್ರದೇಶದಲ್ಲೇ ಇದ್ದವು. ಇದಲ್ಲದೇ ನಾಗಾ ಮತ್ತು ಕುಕ್ಕಿ ಜನಾಂಗಗಳು ನಗರ ಪ್ರದೇಶದಲ್ಲಿ ವಾಸಿಸಲು ಯಾವ ಅಭ್ಯಂತರವೂ ಇಲ್ಲದಾಯಿತು. ಕುಕ್ಕಿ ಸಮುದಾಯದವರು ಪಟ್ಟಣ ಪ್ರದೇಶದಲ್ಲಿ ವಾಸಿಸಲು ಪ್ರಾರಂಭಿಸಿದರು. ಇದರಿಂದಾಗಿ ಮೇಟಿ ಜನಾಂಗದವರು ಈ ಕಾಯ್ದೆಯ ವಿರುದ್ಧ ಹೋರಾಟವನ್ನು ಆರಂಭಿಸಿದರು.

ಈ ಕಾಯ್ದೆಯ ಲಾಭ ಪಡೆದ ಕುಕ್ಕಿ ಸಮುದಾಯದ ಪ್ರತ್ಯೇಕತವಾದಿ ಉಗ್ರರು ಮಣಿಪುರದ ಗುಡ್ಡಗಾಡಿನ ಇಳಿಜಾರು ಪ್ರದೇಶದಲ್ಲಿ ಅಕ್ರಮವಾಗಿ ಗಾಂಜಾ ಮತ್ತು ಅಫೀಮಿನಂತಹ ಮಾದಕ ಪದಾರ್ಥಗಳನ್ನು ಬೆಳೆದು ಬಾಂಗ್ಲಾ ಮತ್ತು ಮಯನ್ಮಾರ್ ದೇಶಗಳ ಮೂಲಕ ಕಳ್ಳ ಸಾಗಾಣಿಕೆ ಮಾಡಲು ಪ್ರಾರಂಭಿಸಿದರು. ಮತ್ತು ಇದರಿಂದ ಬಂದ ಕೋಟ್ಯಾಂತರ ರೂಪಾಯಿ ಹಣದಿಂದ ಪ್ರತ್ಯೇಕತವಾದಿ ಹೋರಾಟ ಮತ್ತಷ್ಟು ಪ್ರಖರವಾಯಿತು. 1980ರಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಮಣಿಪುರ ರಾಜ್ಯದಲ್ಲಿ ಸಶಸ್ತ್ರ ಪಡೆಗಳಿಗೆ ವಿಶೇಷಾಧಿಕಾರ ಕಾಯ್ದೆ ಜಾರಿಗೆ ತರಲಾಯಿತು. ಇದರಿಂದ ಸೇನೆ ಮತ್ತು ಅರೆಸೇನಾ ಪಡೆಗಳಿಗೆ ವಾರೆಂಟ್ ಇಲ್ಲದೇ ಶೋಧಿಸಲು, ಯಾರನ್ನು ಯಾವಾಗಬೇಕಾದರೂ ಬಂಧಿಸಲು ಮತ್ತು ಉದ್ರಿಕ್ತರ ಮೇಲೆ ಯಾವ ಅನುಮತಿ ಇಲ್ಲದೇ ಗುಂಡು ಹಾರಿಸಲು ಅಧಿಕಾರ ನೀಡಲಾಯಿತು. ಮಹಿಳೆಯೊಬ್ಬರ ಮೇಲೆ ಅರಸೇನಾ ಪಡೆಯ ಯೋಧರು ಸಾಮೂಹಿಕ ಅತ್ಯಾಚಾರ ನಡೆಸಿದರು ಎಂದು ಆರೋಪಿಸಿ ಭಾರಿ ಪ್ರತಿಭಟನೆ ನಡೆಯಿತು. ಕೆಲವು ಮಹಿಳಾ ಸಂಘಟನೆಗಳು ಬೆತ್ತಲೆ ಪ್ರತಿಭಟನೆ ನಡೆಸಿ ಅಂತಾರಾಷ್ಟ್ರೀಯ ಗಮನವನ್ನು ಸೆಳೆದರು. ಕೊನೆಗೆ 2004ರಲ್ಲಿ ಈ ಕಾಯ್ದೆಯಿಂದ ಮಣಿಪುರ ರಾಜ್ಯವನ್ನು ಮುಕ್ತಗೊಳಿಸಲಾಯಿತು.

2014 ರಿಂದ ಕೇಂದ್ರದಲ್ಲಿ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪೂರ್ವೋತ್ತರ ರಾಜ್ಯಗಳ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಲಾಯಿತು, ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಯಿತು, ಅಲ್ಲಿಯ ಜನರಿಗೆ ಉದ್ಯೋಗ ಸಿಗಲು ಪ್ರಾರಂಭವಾಗಿ ಕಳೆದ 5 ವರ್ಷಗಳಿಂದ ಸ್ವಲ್ಪ ಮಟ್ಟಿಗೆ ಅಲ್ಲಿ ಶಾಂತಿ ನೆಲೆಸಿತ್ತು. ಕಳೆದ ವರ್ಷ 2022 ರಲ್ಲಿ ಮಣಿಪುರ ರಾಜ್ಯದ ಸಾರ್ವತ್ರಿಕ ಚುನಾವಣೆ ನಡೆಯಿತು ಇಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಸ್ಥಾಪನೆಯಾಯಿತು. ಚುನಾವಣೆಯಲ್ಲಿ ಬಿಜೆಪಿಯಾದಿಯಾಗಿ ಎಲ್ಲಾ ಪ್ರಮುಖ ಪಕ್ಷಗಳು ಮೇಟಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಾಗ್ದಾನ ಮಾಡಿದ್ದವು. ಅದರಂತೆ ಈ ವರ್ಷ ಆ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಪ್ರಕ್ರಿಯೆಯು ಶೀಘ್ರವಾಗಿ ಆಗುವಂತೆ ಮಣಿಪುರದ ನ್ಯಾಯಾಲಯವು ದಿನಾಂಕವನ್ನು ನಿಗದಿಪಡಿಸಿ ಪರಿಶಿಷ್ಟ ಪಂಗಡಕ್ಕೆ ಮೇಟಿ ಜನಾಂಗವನ್ನು ಸೇರಿಸುವಂತೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕೆಂದು ಆದೇಶಿಸಿತು. ನಂತರದ ಬೆಳವಣಿಗೆಗಳು ಆಘಾತಕಾರಿಯಾದವು, ಪ್ರತಿಭಟನೆಗಳು ಪ್ರಾರಂಭವಾದವು ಬುಡಕಟ್ಟು ವಿದ್ಯಾರ್ಥಿಗಳ ಸಂಘಟನೆಯ ವತಿಯಿಂದ ಐಕ್ಯತಾ ಪ್ರತಿಭಟನಾ ಮೆರವಣಿಗೆ ಪ್ರಾರಂಭವಾಯಿತು. ಇದು ಪ್ರಾರಂಭದಲ್ಲಿ ಶಾಂತಿಯುತವಾಗಿ ನಡೆಯಿತು, ನಂತರ ಈ ಪ್ರತಿಭಟನೆಯಲ್ಲಿ ಕುಕ್ಕಿ ಜನಾಂಗದ ಪ್ರತ್ಯೇಕತವಾದಿ ಉಗ್ರರ ಸಶಸ್ತ್ರ ಗುಂಪೊಂದು ಸೇರಿಕೊಂಡು ಮೇಟಿ ಜನಾಂಗದ ಮನೆಗಳ ಮೇಲೆ ಮತ್ತು ಅವರ ಆಸ್ತಿಪಾಸ್ತಿಗಳ ಮೇಲೆ ದಾಳಿ ನಡೆಸಿ ಹಾನಿ ಮಾಡಿತು. ಇದು ಮೇಟಿ ಜನಾಂಗದವರನ್ನು ಕೆರಳಿಸಿ ಪ್ರತಿದಾಳಿ ಪ್ರಾರಂಭವಾಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಿದ್ದಾಗ ಕೇಂದ್ರ ಸರ್ಕಾರವು ಸಂವಿಧಾನದ ಅನುಚ್ಛೇಧ 355ರಂತೆ ರಾಜ್ಯದ ಪೂರ್ಣ ಕಾನೂನು ಸುವ್ಯವಸ್ಥೆಯ ಅಧಿಕಾರವನ್ನು ತಾನು ಪಡೆದು ಆ ರಾಜ್ಯಕ್ಕೆ ಸೇನೆ ಮತ್ತು ಅರೆಸೇನಾ ಪಡೆಗಳನ್ನು ರವಾನಿಸಿ ಇಷ್ಟಾದರೂ ಗಲಭೆ ನಿಲ್ಲದೆ ಕೇಂದ್ರ ಸಚಿವರೊಬ್ಬರ ಮತ್ತು ರಾಜ್ಯದ ಇಬ್ಬರು ಸಚಿವರ ಮನೆಗಳ ಮೇಲೆ ದಾಳಿ ನಡೆಸಲಾಯಿತು. ಸೇನೆಯ ಹಿರಿಯ ಅಧಿಕಾರಿಗಳು ಮತ್ತು ಗೃಹ ಸಚಿವರು ಮಣಿಪುರಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ನಿಭಾಯಿಸಿದರು ಹಿಂಸಾಚಾರದಲ್ಲಿ ತೊಡಗಿದ್ದ 40ಕ್ಕೂ ಹೆಚ್ಚು ಪ್ರತ್ಯೇಕತವಾದಿ ಉಗ್ರರನ್ನು ಹತ್ಯೆಗಯ್ಯಲಾಯಿತು. ಇದರಲ್ಲಿ ಕೆಲವು ನಾಗರೀಕರು ಮತ್ತು ಸೇನೆಯವರು ಮೃತರಾದರು. ಸದ್ಯಕ್ಕೆ ಪರಿಸ್ಥಿತಿ ಹತೋಟಿಯಲ್ಲಿದ್ದು ಬೂದಿ ಮುಚ್ಚಿದ ಕೆಂಡದಂತಿದೆ.

ಇದಕ್ಕೆಲ್ಲಾ ಮುಖ್ಯ ಕಾರಣ ಕಳೆದ ಏಪ್ರಿಲ್ 20 ರಂದು ಮಣಿಪುರದ ನ್ಯಾಯಾಲಯ ನೀಡಿದ ಆದೇಶ, ಮೇಟಿ ಜನಾಂಗಕ್ಕೆ ಪರಿಶಿಷ್ಟ ಪಂಗಡದ ಸ್ಥಾನ ನೀಡಿದರೆ ಅವರಿಗೆ ಗುಡ್ಡಗಾಡು ಪ್ರದೇಶದಲ್ಲಿ ಶಾಶ್ವತ ವಾಸದ ಮತ್ತು ಆಸ್ತಿಯ ಹಕ್ಕು ದೊರೆಯುತ್ತದೆ. ಇದರಿಂದ ಗುಡ್ಡಗಾಡು ಪ್ರದೇಶಗಳಲ್ಲಿ ಕುಕ್ಕಿ ಪ್ರತ್ಯೇಕತವಾದಿಗಳ ನೇತೃತ್ವದಲ್ಲಿ ಅಕ್ರಮವಾಗಿ ಮಾದಕ ಪದಾರ್ಥಗಳನ್ನು ಬೆಳೆದು ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಬಹಿರಂಗವಾಗುತ್ತದೆ. ಕೋಟ್ಯಾಂತರ ರೂಪಾಯಿಗಳ ಈ ಅಕ್ರಮ ದಂಧೆ ನಿಂತು ಹೋಗುವ ಭಯದಿಂದ ಈ ಕುಕ್ಕಿ ಉಗ್ರವಾದಿಗಳು ಹಿಂಸೆಗೆ ಇಳಿದರು. ಮತ್ತೊಂದು ಕಾರಣವೆಂದರೆ ಕೆಲವು ತಿಂಗಳುಗಳಿಂದ ಅಲ್ಲಿಯ ರಾಜ್ಯ ಸರ್ಕಾರವು ನಗರ ಪ್ರದೇಶಗಳಲ್ಲಿ ಅಕ್ರಮವಾಗಿ ಕಟ್ಟಿದ್ದ ಚರ್ಚ್‌ಗಳನ್ನು ಕೆಡವಲು ಪ್ರಾರಂಭಿಸಿದ್ದು ಮಿಷನರಿಗಳ ಸಿಟ್ಟಿಗೆ ಕಾರಣವಾಗಿ ಈ ದಂಗೆಗಳಿಗೆ ನೇರ ಪ್ರಚೋದನೆ ನೀಡಿದರು.

ಈ ಗಲಭೆಗಳನ್ನು ನಿಯಂತ್ರಿಸಿ ಶಾಂತಿ ನೆಲಸುವಂತೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಲ್ಲಿಯ ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವ ಉಗ್ರವಾದಿ ಗುಂಪುಗಳನ್ನು ಸದೆಬಡಿಯಬೇಕಿದೆ ಮತ್ತು ಮಿಷನರಿಗಳ ಆಮಿಷದ ಮತಾಂತರ ಮತ್ತು ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕಿದೆ ಮತ್ತು ಅಲ್ಲಿಯ ಯುವಕರಿಗೆ ಉದ್ಯೋಗವಕಾಶ ನೀಡಬೇಕಿದೆ. ಅಲ್ಲಿ ಶಾಶ್ವತವಾಗಿ ಶಾಂತಿ ನೆಲಸುವಂತಾದರೆ ಕೃಷಿ ಚಟುವಟಿಕೆಗಳು ಪ್ರಾರಂಭವಾಗಿ ಬೃಹತ್ ಪ್ರಮಾಣದಲ್ಲಿ ಪ್ರವಾಸೋದ್ಯಮ ಮತ್ತೆ ಪ್ರಾರಂಭವಾದರೆ ಅಲ್ಲಿಯ ಆರ್ಥಿಕ ಪರಿಸ್ಥಿತಿ ಬಲಗೊಂಡು ಅಲ್ಲಿ ಶಾಂತಿ ನೆಲಸುವಂತಾಗುತ್ತದೆ.




**ನಾಯಕರ ನಡುವಿನ ಇಂತಹದೊಂದು ಮನಃಪೂರ್ವಕವಾಗಿ ಹೊರ ಹೊಮ್ಮಿದ ನಗು ನೂರಾರು ಕಾರ್ಯಕರ್ತರಿಗೆ ಒಂದಿಷ್ಟು ಸ್ಫೂರ್ತಿ ತುಂಬಬಲ್ಲದು...**

# 'ಮಾಸದ ಮಾಧುರ್ಯ' 74ನೇ ಕಾರ್ಯಕ್ರಮದಲ್ಲಿ ಮುಖವೇಣು ವಾದನ




ಶ್ರೀ ಚೆನ್ನಿಗ ಕಲಾಕೇಂದ್ರ, ಸಾಗರ ಇವರಿಂದ ಜಗನ್ನಾಥ ಬಳಗದ 74ನೇ ಕಾರ್ಯಕ್ರಮ ದಿ. 04-06-2023 ರಂದು ಸಾಯಂಕಾಲ 05.35 ರಿಂದ 07.15 ರವರೆಗೆ ಜಗನ್ನಾಥ ಭವನ ಮಂಥನ ಸಭಾಂಗಣದಲ್ಲಿ ಸೇರಿದ ಕಲಾಭಿಮಾನಿಗಳಿಗೆ ಹೊಸ ಅನುಭವ ಮತ್ತು ಆನಂದಕ್ಕೆ ಕಾರಣವಾಯಿತು.

ಶ್ರೀ ಸಿ.ಎನ್. ಮಾಧವ ಭಟ್ ಅವರ 'ಮುಖವೇಣು ವಾದನ' ಎಷ್ಟು ಕಷ್ಟ; ಅದನ್ನು ಸಾಧಿಸಬೇಕಾದರೆ ಅವರ ನಿರಂತರ ಪರಿಶ್ರಮದ ಸಾಕಾರ ಕಲಾಭಿಮಾನಿಗಳನ್ನು ಹೊಸ ಲೋಕಕ್ಕೆ ಕರೆದೊಯ್ಯುವಲ್ಲಿ ಯಶಸ್ವಿಯಾಯಿತು. ಆಡು ಭಾಷೆಯಲ್ಲಿ ನಾವು ಶಿಳ್ಳೆ ಹೊಡೆಯುವುದು ಎನ್ನುತ್ತೇವೆ. ಜನಸಾಮಾನ್ಯರಿಗೆ 5 - 10 ನಿಮಿಷ ಶಿಳ್ಳೆ ಹೊಡೆದರೆ ಉಸಿರು ಕಟ್ಟಿದಂತಾಗುತ್ತದೆ. ಆದರೆ ಶ್ರೀ ಮಾಧವಭಟ್ ಅವರು ಎರಡು ತಾಸಿಗಿಂತ ಹೆಚ್ಚು ಸಮಯ ಶಿಳ್ಳೆ ಮೂಲಕ ಹಾಡನ್ನು, ದೇವರ ನಾಮವನ್ನು ಶೃತಿಶುದ್ಧವಾಗಿ, ಕರ್ನಾಟಕ ಸಂಗೀತ ಪ್ರಕಾರದಲ್ಲಿ ಹಾಡಿದಾಗ ಕಲಾವಿದರ ಕಲೆಗೆ ಬೆಲೆ ಕಟ್ಟಬಾರದು ಎಂಬುದು ಸತ್ಯ ಎನಿಸದೆ ಇರದು. ಉಸಿರನ್ನು ಹೊರಗೆ ಬಿಡುವಾಗ ಮತ್ತು ಉಸಿರನ್ನು ಒಳಗೆ ಎಳೆದುಕೊಳ್ಳುವಾಗಲೂ ಸಪ್ತ ಸ್ವರಗಳನ್ನು ನುಡಿಸುವುದು ಬಹಳ ಮುಖ್ಯ. ಪ್ರತಿಯೊಂದು ಸ್ವರಕ್ಕೂ ನಾಲಿಗೆಯ ವಿನ್ಯಾಸ ಮತ್ತು ಆ ಸ್ವರಕ್ಕೆ ಬೇಕಾದ ಲಾಲಿತ್ಯಕ್ಕೆ ತಕ್ಕಂತೆ ಧ್ವನಿ ಹೊರಡಿಸಬೇಕಾಗುತ್ತದೆ ಎಂಬ ವಿವರಣೆಯನ್ನು ಶ್ರೀ ಮಾಧವಭಟ್ ಅವರು ಕಾರ್ಯಕ್ರಮದ ಅಂತ್ಯದಲ್ಲಿ ತಿಳಿಸಿಕೊಟ್ಟರು. ಇವರ ಮುಖವೇಣು ವಾದನಕ್ಕೆ ಅತ್ಯಂತ ಸಮರ್ಪಕವಾಗಿ ಸಾತ್ ಕೊಟ್ಟ ವಿದ್ವಾನ್ ಕಾರ್ತಿಕೇಯ ಪಿಟಿಲಿನಲ್ಲಿ, ವಿದ್ವಾನ್ ನಾಗೇಂದ್ರ ಪ್ರಸಾದ ಮೃದಂಗದಲ್ಲಿ, ವಿದ್ವಾನ್ ಚಿನಾದಂದ ಮಾರ್ಚಿಂಗ್‌ನಲ್ಲಿ ತಮ್ಮ ಕಲಾ ಪ್ರತಿಭೆಯನ್ನು ತೋರಿದರು.

ಮುಖ್ಯ ಅತಿಥಿಗಳಾಗಿ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ರವಿಕುಮಾರ್, ಶ್ರೀ ಸಿದ್ದರಾಜು ಅವರು ಆಗಮಿಸಿದ್ದರು. ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೆಕಲ್ಲು, ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ ಅವರು ಉಪಸ್ಥಿತರಿದ್ದರು. ನಾಡಿನ ಖ್ಯಾತ ವಾಗ್ಮಿಗಳು, ಕಿರುತೆರೆ, ಹಿರಿ ತೆರೆಯಲ್ಲಿ ಚಿರಪರಿಚಿತರಾದ ಶ್ರೀ ಎಂ.ಎಸ್. ನರಸಿಂಹ ಮೂರ್ತಿಯವರಿಂದ ಕಲಾವಿದರಿಗೆ 'ಅಭಿನಂದನಾ ಪತ್ರ' ವಿತರಿಸಿದ್ದು ಕಾರ್ಯಕ್ರಮದ ಸೊಬಗನ್ನು ಹೆಚ್ಚಿಸಿತು.

20

## ಹಿರಿಯ ಕಾರ್ಯಕರ್ತರ ಪರಿಚಯಮಾಲೆ

# ಹೊಳೆಹೊನ್ನೂರು ಅನಂತರಾಮ ಅಯ್ಯಂಗಾರ್ ನರಸಿಂಹಮೂರ್ತಿ



**1975 – 77 ರಲ್ಲಿ ದೇಶಕ್ಕೆ ದತ್ತೆಂದು ಎರಗಿದ ತುರ್ತು ಪರಿಸ್ಥಿತಿ. ಸಾವಿರಾರು ಜನನಾಯಕರ ಬಂಧನ, ಕ್ರೂರ ಶಿಕ್ಷೆಗಳು, ದಿನನಿತ್ಯದ ಮಾತು ಈ ಸಂದರ್ಭದಲ್ಲಿ ನರಸಿಂಹಮೂರ್ತಿ ಸ್ವಾಭಾವಿಕವಾಗಿಯೇ ಕರಾಳ ಮೀಸಾ ಕಾನೂನಿನಡಿ ಬಂದಿಯಾಗಿ ಬೆಳಗಾಂ ಜೈಲಿನಲ್ಲಿ ಇದ್ದರು. ಆದರೆ ಕಾರ್ಯಕರ್ತರಿಗೆ ಸ್ವಯಂಸೇವಕರಿಗೆ ಸೆರೆಮನೆ ಮರಣ ಶಯ್ಯೇ ಆಗದೆ ಗುರುಮನೆಗಳಾದವು. ಏನನ್ನಾದರೂ ಕಲಿಯೋಣ, ಕಲಿಸೋಣ ಎಂದು ಎಲ್ಲರಿಗೂ ಧೈರ್ಯವನ್ನು ತುಂಬಿದರು ಮೂರ್ತಿ ಅಯ್ಯಂಗಾರ್. ಇದರ ಪರಿಣಾಮವಾಗಿ ಸೆರೆಮನೆಯೊಳಗೆ ದಿನವೂ ಹಲವಾರು ಬೈಠಕ್, ಬೌದ್ಧಿಕ, ಚರ್ಚೆಗಳು ಜೊತೆಗೆ ಯೋಗಾಸನ, ಯುದ್ಧಗಳ ಅಭ್ಯಾಸ, ಆಯುರ್ವೇದ, ಹೋಮಿಯೋಪತಿ ಶಿಕ್ಷಣ ಇತ್ಯಾದಿ ತರಬೇತಿಗಳು ಆರಂಭವಾದವು. ಜೈಲಿನಿಂದ ಹೊರಬರುವಾಗ ಎಲ್ಲರೂ ಮತ್ತಷ್ಟು ಉತ್ಸಾಹ, ಆತ್ಮವಿಶ್ವಾಸಗಳನ್ನು ತುಂಬಿಕೊಂಡು ಹೊರಬಂದರು.**



**ಉಷಾ ಉತ್ತಪ್ಪ**
ಜಿಲ್ಲಾ ಸಂಚಾಲಕರು,
ಪ್ರಕಾಶನ ಪ್ರಕೋಷ್ಠ, ಶಿವಮೊಗ್ಗ

ಅಯ್ಯಂಗಾರ್, 'ಗುರುಗಳು, 'ಅಣ್ಣ' , ಇತ್ಯಾದಿ ಅಭಿಧಾನಗಳಿಂದ ಬಂಧುಗಳು, ಅಭಿಮಾನಿಗಳು ಕಾರ್ಯಕರ್ತರು ಗುರುತಿಸುತ್ತಿದ್ದ ಓರ್ವ ವಿಶಿಷ್ಟ ವ್ಯಕ್ತಿ ಎಂದರೆ ಅದುವೇ ನರಸಿಂಹಮೂರ್ತಿ ಅಯ್ಯಂಗಾರ್ ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಸಂಘ ಕಾರ್ಯವನ್ನು ಸಮಾಜ ಕಾರ್ಯವನ್ನು ದೇವತಾ ಕಾರ್ಯದಂತೆಯೇ ನಿರಂತರವಾಗಿ ತಪಸ್ಸಿನಂತೆ ನಡೆಸಿಕೊಂಡು ಬಂದವರು.

ಶಿವಮೊಗ್ಗದ ಕೋಟೆ ಆಂಜನೇಯ ದೇವಸ್ಥಾನ ಅತ್ಯಂತ ಪ್ರಭಾವಿ ಆಗಲು ಬಹು ಮುಖ್ಯ ಕಾರಣರು ಭಕ್ತಶಿರೋಮಣಿ ಶ್ರೀ ನರಸಿಂಹಮೂರ್ತಿ ಅಯ್ಯಂಗಾರ್. ಅವರು ತಮ್ಮ ಶ್ರದ್ದೆ ಭಕ್ತಿ ಸೇವಗಳಿಂದ ದೇವರನ್ನು ವಲಿಸಿಕೊಂಡಿದ್ದ ಮಹಾ ಅನುಭವ ವ್ಯಕ್ತಿ. ಎಲ್ಲಾ ಅರ್ಚಕರಂತೆ ಇವರಿಗೂ ಬಡತನವೇ ಆಸ್ತಿ, ತಮ್ಮ ಸಾತ್ವಿಕ ಗುಣಗಳಿಂದ ಅನನ್ಯ ನಿಷ್ಠೆಯಿಂದ ದೇವಸ್ಥಾನದ ಭಕ್ತರ ಸಮೀಪದ ಬಂಧುವಾದವರು. ಅವರ ವೈವಾಹಿಕ ಜೀವನ ಪ್ರಾರಂಭ ಆದದ್ದು ತಮ್ಮ 26ನೇ ವಯಸ್ಸಿನಲ್ಲಿ ಅವರ ಧರ್ಮಪತ್ನಿ ಯಾಗುವ ಭಾಗ್ಯ ಪಡೆದವರು ಶ್ರೀಮತಿ ವೇದವಲ್ಲಿ. ಶ್ರೀಮತಿಯವರು ನರಸಿಂಹಮೂರ್ತಿಯವರ ಎಡಬಿಡದ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ಅಡ್ಡಿಯಾಗದೆ ಅವರೆಲ್ಲ ಸೇವೇಗಳಿಗೆ ಬೆಂಬಲ ನೀಡುತ್ತಿದ್ದರು ಸಂಘದ, ಜನಸಂಘದ ದೃಷ್ಟಿಯಿಂದ ಪ್ರಚಾರಕರಂತೆಯೇ ಇದ್ದರೆಂಬುದು ಅವರ ಜೀವನ ಶೈಲಿ ಹಾಗೂ ಧ್ಯೇಯ ನಿಷ್ಠೆಗೆ ಸಾಕ್ಷಿಯಾಗಿತ್ತು.

ನರಸಿಂಹಮೂರ್ತಿಗಳ ದೃಢತೆಯ, ವಿವೇಕ, ಸ್ನೇಹ ಇವುಗಳ ಪರೀಕ್ಷೆ ಆದದ್ದು 1975 – 77 ರಲ್ಲಿ ದೇಶಕ್ಕೆ ದತ್ತೆಂದು ಎರಗಿದ ತುರ್ತು ಪರಿಸ್ಥಿತಿ. 1975 ರ ಜೂನ್ 25ರ ಮಧ್ಯ ರಾತ್ರಿಯಂದು ಶ್ರೀಮತಿ ಇಂದಿರಾಗಾಂಧಿ ಅವರು ಪ್ರಧಾನಿಯಾಗಿ ದೇಶದ ಮೇಲೆ ಹೇರಿದ ಈ ಕಠೋರ ಕ್ರಮ ವಿಶ್ವವನ್ನೇ ಅಲ್ಲಾಡಿಸಿ ದಿಗ್ಭ್ರಾಂತರಾಗುವಂತೆ ಮಾಡಿತ್ತು ಯಾರಿಗೂ ಏನನ್ನು ಹೇಳಲು ತೋಚದಂತಹ ಸ್ಥಿತಿ, ಸಾವಿರಾರು ಜನನಾಯಕರ ಬಂಧನ, ಕ್ರೂರ ಶಿಕ್ಷೆಗಳು, ದಿನನಿತ್ಯದ ಮಾತು ಈ ಸಂದರ್ಭದಲ್ಲಿ ನರಸಿಂಹಮೂರ್ತಿ ಸ್ವಾಭಾವಿಕವಾಗಿಯೇ ಕರಾಳ ಮೀಸಾ ಕಾನೂನಿನಡಿ ಬಂದಿಯಾಗಿ ಬೆಳಗಾಂ ಜೈಲಿನಲ್ಲಿ ಇದ್ದರು. ಆ ದಿನಗಳಲ್ಲಿ ಜೈಲು ಸೇರಿದ ಸರ್ವರಿಗೂ ಒಂದೇ ಚಿಂತೆ 'ಬಿಡುಗಡೆ ಯಾವಾಗ'? ಕಾರ್ಯಕರ್ತರಿಗೆ ಸ್ವಯಂಸೇವಕರಿಗೆ ಸೆರೆಮನೆ ಮರಣ ಶಯ್ಯೇ ಆಗಲಿಲ್ಲ. ಎಲ್ಲಾ ಸೆರೆಮನೆಗಳು ಗುರುಮನೆಗಳಾದವು.  ಬಂಧನದೊಳಗೆ ಎಲ್ಲರೂ ಒಟ್ಟಾಗಿರುವಾಗ ಸುಮ್ಮನೆ ದುಃಖಿಸುತ್ತಾ ಕೂತರೆ ಏನು ಪ್ರಯೋಜನ? ಏನನ್ನಾದರೂ ಕಲಿಯೋಣ, ಕಲಿಸೋಣ ಎಂದು ಎಲ್ಲರಿಗೂ ಧೈರ್ಯವನ್ನು ತುಂಬಿದರು ಮೂರ್ತಿ ಅಯ್ಯಂಗಾರ್. ಇದರ ಪರಿಣಾಮವಾಗಿ ಸೆರೆಮನೆಯೊಳಗೆ ದಿನವೂ ಹಲವಾರು

ಬೈಠಕ್, ಬೌದ್ಧಿಕ, ಚರ್ಚೆಗಳು ಜೊತೆಗೆ ಯೋಗಾಸನ, ಯುದ್ಧಗಳ ಅಭ್ಯಾಸ, ಆಯುರ್ವೇದ, ಹೋಮಿಯೋಪತಿ ಶಿಕ್ಷಣ ಇತ್ಯಾದಿ ತರಬೇತಿಗಳು ಆರಂಭವಾದವು. ಜೈಲಿನಿಂದ ಹೊರಬರುವಾಗ ಎಲ್ಲರೂ ಮತ್ತಷ್ಟು ಉತ್ಸಾಹ, ಆತ್ಮವಿಶ್ವಾಸಗಳನ್ನು ತುಂಬಿಕೊಂಡು ಹೊರಬಂದರು. ಇವರಲ್ಲಿ ಸಾಮಾಜಿಕ, ಧಾರ್ಮಿಕ ರಾಜಕೀಯ, ಕ್ಷೇತ್ರಗಳನ್ನು ಮುನ್ನಡೆಸುವಂತಹ ಚೈತನ್ಯ, ಸ್ಫೂರ್ತಿ, ಭರವಸೆ, ಊಹೆಗೂ ನಿಲುಕಲು ಅಸಾಧ್ಯ ಶ್ರೀ. ಹೊ.ಅ.ನ. ಅಯ್ಯಂಗಾರ್ ಅವರು ಅಸಾಧ್ಯವಾದುದನ್ನು ಸಾಧಿಸಿದವರು.

1948ರ ನಂತರ ಸಂಘದ ಪ್ರೇರಣೆಯಿಂದಾಗಿ ಅನ್ಯ ಸಂಘಟನೆಗಳು ಪ್ರಾರಂಭವಾದವು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಮಜ್ದೂರು ಸಂಘ, ಇವು ವಿದ್ಯಾರ್ಥಿ ಹಾಗೂ ಕಾರ್ಮಿಕರ ಕ್ಷೇತ್ರದಲ್ಲಿ ಸಂಚಲನೆಯನ್ನೇ ಉಂಟು ಮಾಡಿದವು. 1951-52 ರಲ್ಲಿ ರಾಜಕೀಯ ಪಕ್ಷವಾಗಿ ಭಾರತೀಯ ಜನಸಂಘ ಉದಯವಾಯಿತು. ಈ ಎಲ್ಲಾ ಸಂಘಟನೆಗಳ ಕಾರ್ಯವನ್ನು ಶಿವಮೊಗ್ಗ ನಗರ ಹಾಗೂ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದರಲ್ಲಿ ನರಸಿಂಹಮೂರ್ತಿ ಅಯ್ಯಂಗಾರ್ ಅವರದ್ದು ಸಿಂಹಪಾಲು. ಇದು ಸುಲಭ ಸಾಧ್ಯವಾಗಿರಲಿಲ್ಲವಾದ್ದರೂ ಆತ್ಮೀಯ ಭಾವದಿಂದ ತಮ್ಮದೇ ಪರಿವಾರದ ಕಾರ್ಯವೆಂದು ತಿಳಿದು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಿದ್ದರು. ಇವರು ಆಗಮತ್ರಯ ಮಹಾಮಂಡಳದ ಸದಸ್ಯರು ಸಂಘಟನೆಯ ಅಖಿಲ ಭಾರತೀಯ ಉಪಾಧ್ಯಕ್ಷರು ಆಗಿದ್ದರು.

ನರಸಿಂಹಮೂರ್ತಿಯವರು ಜನ್ಮತಹ ಆಂದೋಲನ ಪ್ರವೃತ್ತಿಯವರಾಗಿದ್ದರು. ಗೋ ಹತ್ಯೆ ಪ್ರತಿಬಂಧಕ ಆಂದೋಲನ, ಗೋವಾ ಮುಕ್ತಿ ಆಂದೋಲನ, ಅಯೋಧ್ಯ ಶ್ರೀರಾಮ ಮಂದಿರ ವಿಮೋಚನ ಕಾರ್ಯಕ್ರಮಗಳು, ದತ್ತಪೀಠ ಮುಕ್ತಿ ಆಂದೋಲನ, ಎಲ್ಲದರಲ್ಲೂ ಇವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಯೋಧ್ಯ ಆಂದೋಲನಕ್ಕಾಗಿ ಶಿವಮೊಗ್ಗ ನಗರ ಮತ್ತು ವಿಭಾಗದಿಂದ ಹೊರಡಲ್ಪಟ್ಟ ಅನೇಕ ಕಾರ್ಯಕರ್ತರ ಸಂಖ್ಯೆ ಅಧಿಕವಾಗಿತ್ತು. ಇವರ ಮಾರ್ಗದರ್ಶನದಲ್ಲಿ ಬೆಳೆದ ಮೂವರು ನಾಯಕರು ಕರ್ನಾಟಕದ ಮಂತ್ರಿಗಳಾದರು ಅವರಲ್ಲೊಬ್ಬರು ಉಪಮುಖ್ಯ ಮಂತ್ರಿಗಳೂ ಆದರು. ಆ ದಿನಗಳಲ್ಲಿ ಜನಸಂಘಕ್ಕೆ ರಾಜಕೀಯ ಶಕ್ತಿ ಇರಲಿಲ್ಲ, ಜನಸಂಘದ ಸಿದ್ಧಾಂತದ ಬಗ್ಗೆ ಸಮಾಜದಲ್ಲಿ ಗೌರವ ಇದ್ದರೂ ಪಕ್ಷದ ಕೆಲಸ ಮಾಡಲು ಇದ್ದ ಒತ್ತಾಸೆ ಕಡಿಮೆ ಹಣವಂತರ, ಬಲವಂತರ ಬೆಂಬಲ ಯಾವುದೂ ಇಲ್ಲದ ಕಾಲದಲ್ಲಿ ಜನಸಂಘವನ್ನು ಹಂತ ಹಂತವಾಗಿ ಬೆಳೆಸಿದವರು ನರಸಿಂಹಮೂರ್ತಿ ಅಯ್ಯಂಗಾರ್.

ಅಂದು 1962 ರ ಚುನಾವಣೆ. ಅಯ್ಯಂಗಾರ್ ಅವರು ಬಹಳ ಉಮೇದಿನಿಂದ ಅಭ್ಯರ್ಥಿಯನ್ನು ಹೂಡಿದ್ದರು, ಗೆಲ್ಲುವುದು ನಮ್ಮ ಅಭ್ಯರ್ಥಿಯೇ ಎಂದವರು ತುಂಬಾ ವಿಶ್ವಾಸದಿಂದ ಹೇಳಿಕೊಂಡರು. ನಮ್ಮ ಅಭ್ಯರ್ಥಿಯ ಠೇವಣಿಗೆ ಹೋಯಿತು, ಚುನಾವಣೆ ವೆಚ್ಚಕ್ಕಾಗಿ ಹಲವು ಕಡೆ ಸಾಲ ಮಾಡಿದ್ದರು, ಅಭ್ಯರ್ಥಿ ಸೋತರು, ಸಾಲಉಳಿಯಿತು, ಬಹುಕಾಲ ಸಾಲ ತೀರಿಸಲಿಕ್ಕೆ ಆಗಲಿಲ್ಲ ಅವರ ಮನೆಗೆ ಸಾಲಗಾರರು ದಾಳಿ ಇಟ್ಟು ತಾರಾ ತಿಟ್ಟಿ ಮಾತನಾಡಿದ್ದೂ ಉಂಟು... ತಿರು ಮಾತನಾಡದೆ ನಂತರ ನಿಧಾನವಾಗಿ ಸಾಲವನ್ನು ತೀರಿಸಿದ್ದೂ ಹೌದು. ನಂತರದ ದಿನಗಳಲ್ಲಿ ಜನಸಂಘದ ಚಟುವಟಿಕೆಗಳನ್ನು ಚುರುಕುಗೊಳಿಸಿ ಅದಕ್ಕೊಂದು ಭದ್ರ ಬುನಾದಿ ಕೊಟ್ಟವರಲ್ಲಿ ನರಸಿಂಹಮೂರ್ತಿ ಅಯ್ಯಂಗಾರ್‌ರವರು ಪ್ರಮುಖರು.

ಅಚ್ಚರಿ ಎಂದರೆ ಜನಸಂಘ ಹುಟ್ಟಿಕೊಂಡ ಸಮಯದಿಂದ ನಡೆದ ಕಾರ್ಯಗಳ ಕಾರ್ಯಕ್ಷೇತ್ರವು ಅಯ್ಯಂಗಾರ್ ಅವರ ಮನೆಯೇ ಆಗಿತ್ತು. ಸಂಘಟನೆಗಳನ್ನು ಕೇವಲ ಬೆಳೆಸಿದ್ದಲ್ಲ, ಶಿವಮೊಗ್ಗ ಜಿಲ್ಲೆಯಲ್ಲಿ ಅವುಗಳು ಜನ್ಮ ತಳೆಯಲು ಅವರೇ ಪ್ರಮುಖ ಪ್ರೇರಕರು. ಇಂದು ಜನಸಂಘ ವ್ಯಾಪ್ತಿಗೂಮೀರಿ ಹರಡಿದೆ, ಶಿವಮೊಗ್ಗದಲ್ಲಿ ಆ ಮಹಾನ್ ವೃಕ್ಷದ ತಾಯಿಬೇರಿನಂತೆ ಇದ್ದು ಪಾಲಿಸಿದವರು ನರಸಿಂಹಮೂರ್ತಿ ಅಯ್ಯಂಗಾರ್ ಅವರು. ಕಾರ್ಯಕರ್ತರ ಸಂಪರ್ಕವನ್ನು ಅಂಚೆ ಮೂಲಕ, ದೂರವಾಣಿ ಮೂಲಕ ಮಾಡದೆ ವೈಯುಕ್ತಿಕ ಸಂಪರ್ಕ ಮಾಡಿದಾಗ ಮಾತ್ರ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತವೆ ಎಂದು ಪದೇ ಪದೇ ಹೇಳುತ್ತಿದ್ದರು.

ಇವರು ರಾಷ್ಟ್ರೀಯ ಸ್ವಯಂಸೇವಕ ಸಂಘ, ಜನಸಂಘ, ಮಜ್ದೂರ್ ಸಂಘ ವಿಶ್ವ ಹಿಂದೂ ಪರಿಷತ್ ಸಂಘಟನೆಗಳ ಸೂತ್ರಧಾರಿಯಾಗಿದ್ದರು ಶಿವಮೊಗ್ಗದಲ್ಲಿ ದಸರಾ ಹಬ್ಬದಲ್ಲಿ ಎಲ್ಲಾ ದೇವತೆಗಳ ಉತ್ಸವವನ್ನು 'ಬನ್ನಿ ಮುಡಿಯಲು' ಒಂದೆಡೆ ಸೇರಿಸಿ ಅದ್ಭುತವಾದ ಪರಿವರ್ತನೆ ಮಾಡಿದರು. ಹಿಂದೂ ಸಮಾಜದಲ್ಲಿ ನವ ಜಾಗೃತಿ ತಂದರು, ಆ ಪರಂಪರೆ ಇಂದಿಗೂ ನಗರಸಭೆ ವತಿಯಿಂದ ನಡೆಯುತ್ತಿದೆ. ಇಲ್ಲಿನ ತಹಶೀಲ್ದಾರರು 'ಬನ್ನಿ ಮುಡಿಯುವ' ಸಂಪ್ರದಾಯವನ್ನು ಪ್ರಾರಂಭಿಸಿದುದರ ಹಿರಿಮೆ ಹೆಮ್ಮೆಯು ನರಸಿಂಹಮೂರ್ತಿ ಅಯ್ಯಂಗಾರ್ ಅವರಿಗೆ ಸಲ್ಲುತ್ತದೆ.

ಶಿಕಾರಿಪುರದ ಪುರಸಭಾಧ್ಯಕ್ಷರಾಗಿದ್ದ ಶ್ರೀ ಯಡಿಯೂರಪ್ಪರವರ ಮೇಲೆ ಯಾವುದೋ ಕಾರಣದಿಂದ ಮಾರಣಾಂತಿಕ ಹಲ್ಲೆ ನಡೆದಿತ್ತು, ಉಳಿಯುವ ಸ್ಥಿತಿಯಲ್ಲೇ ಇರಲಿಲ್ಲ, ಅಂತಹ ಸಮಯದಲ್ಲಿ ಅವರ ಆರೈಕೆಗೆ ನಿಂತರು, ವಿಶೇಷ ಪೂಜೆ ಪ್ರಾರ್ಥನೆ ಯೊಂದಿಗೆ ಕಷ್ಟಪಟ್ಟು ಉಳಿಸಿಕೊಂಡು ಧೈರ್ಯಗೆಡದಂತೆ ಬೆಂಬಲಿಸಿದ್ದು ನರಸಿಂಹ ಮೂರ್ತಿ ಅಯ್ಯಂಗಾರ್ ಅವರು ಮತ್ತು ಹಿರಿಯೂರು ಕೃಷ್ಣಮೂರ್ತಿಯವರು. ನಾವು ಕಾಣುತ್ತಿರುವ ಅಭಿವೃದ್ಧಿಗೆ ನರಸಿಂಹಮೂರ್ತಿ ಅಯ್ಯಂಗಾರ್ ಅವರ ದೂರ ದೃಷ್ಟಿಯ ಬಲವೇ ಕಾರಣ. ತಮ್ಮ ಸಮೀಪಕ್ಕೆ ಬಂದ ಕಾರ್ಯಕರ್ತನನ್ನು ಅಯ್ಯಂಗಾರರು ಎಂದೂ ದೂರ ಮಾಡುತ್ತಿರಲಿಲ್ಲ ಲೋಕ ಸಂಗ್ರಹ ಅವರ ಪ್ರವೃತ್ತಿಯಾಗಿತ್ತು, ಸರಳ ಜೀವನ ಉದಾತ್ತ ಧ್ಯೇಯಗಳು ಮತ್ತು ಲೋಕ ಸಂಗ್ರಾಮ ಮುಂತಾದ ಆದರ್ಶಗಳ ಜೀವಂತ ರೂಪದ ನರಸಿಂಹಮೂರ್ತಿ ಅಯ್ಯಂಗಾರ್ ಎಂದಿಗೂ ಮಾಸದ ಸ್ಫೂರ್ತಿಯ ಚಿಲುಮೆ.




# ಕಬೀರ, ಸಾವರ್ಕರ್, ಎನ್‌ಟಿಆರ್ ಸ್ಮರಣೆ

## ಮನ್ ಕಿ ಬಾತ್

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು **'ಮನ್ ಕಿ ಬಾತ್'** ನ 101ನೇ ಸಂಚಿಕೆಯಲ್ಲಿ ಸಂತ ಕಬೀರ, ವೀರ ಸಾರ್ವಕರ್, ಎನ್‌ಟಿಆರ್ ಅವರನ್ನು ಸ್ಮರಿಸಿದರು. ವೀರ ಸಾವರ್ಕರ್ ಅವರ ಜನ್ಮ ವಾರ್ಷಿಕೋತ್ಸವವನ್ನು ಸ್ಮರಿಸಿದ ಪ್ರಧಾನಿ, ಸಾವರ್ಕರ್ ಅವರ ತ್ಯಾಗ ಮತ್ತು ಧೈರ್ಯವನ್ನು ಕೊಂಡಾಡಿದರು.

ಜನಪ್ರಿಯ ಚಿತ್ರನಟ, ತೆಲುಗು ದೇಶಂ ಪಕ್ಷದ ಸ್ಥಾಪಕ, ಅವಿಭಜಿತ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ದಿ. ಎನ್.ಟಿ. ರಾಮರಾವ್ ಅವರ 100ನೇ ಜನ್ಮದಿನವನ್ನು ಸಹ ಸ್ಮರಿಸಿದರು. ದಿ. ರಾಮ ರಾವ್ ಅವರು ಭಾರತೀಯ ಚಿತ್ರರಂಗ ಮತ್ತು ರಾಜಕೀಯದಲ್ಲಿ ಅಳಿಸಲಾಗದ ಛಾಪನ್ನು ಮೂಡಿಸಿ ಹೋದಿದ್ದಾರೆ ಎಂದು ಹೇಳಿದರು.

ಇಂದಿಗೂ ಪ್ರಸ್ತುತವಾಗಿರುವ ಸನ್ಮಾರ್ಗವನ್ನು ನಮಗೆ ತೋರಿದ ಕವಿ ಸಂತ ಕಬೀರ್‌ದಾಸ್ ಅವರ ಜನ್ಮದಿನ ಜೂನ್ 4ರಂದು ಆಚರಿಸಲಾಗುತ್ತದೆ. ಸಮಾಜ ವಿಭಜಿಸುವ ಪ್ರತಿ ಆಚರಣೆಯನ್ನು ಸಂತ ಕಬೀರರು ವಿರೋಧಿಸಿದ್ದರು ಎಂದು ಪ್ರಧಾನಿ ಶ್ರೀಮೋದಿಯವರು ಸ್ಮರಿಸಿದರು.

ವಸ್ತು ಸಂಗ್ರಹಾಲಯಗಳನ್ನು ಉಲ್ಲೇಖಿಸಿ, ಗುರುಗ್ರಾಮ್ ವಿಶಿಷ್ಟವಾದ ವಸ್ತು ಸಂಗ್ರಹಾಲಯ ಹೊಂದಿದೆ. **'ಮ್ಯೂಸಿಯೊ ಕ್ಯಾಮೆರಾ'** 1860ರ ನಂತರದ ಸುಮಾರು 8,000ಕ್ಕೂ ಹೆಚ್ಚು ಕ್ಯಾಮೆರಾಗಳ ಸಂಗ್ರಹ ಹೊಂದಿದೆ. ವಿಶೇಷ ಚೇತನರನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡಿನ ಸಾಧ್ಯತೆಗಳ ವಸ್ತುಸಂಗ್ರಹಾಲಯವನ್ನು ವಿನ್ಯಾಸಗೊಳಿಸಲಾಗಿದೆ ಎಂದು ಗಮನ ಸೆಳೆದರು.

**ವಿದ್ಯಾರ್ಥಿ ಸಂವಾದ:** ಹೊಸ ಸಂಸ್ಕೃತಿ ಪರಿಚಯಿಸುವ ಯುವ ಸಂಗಮದಲ್ಲಿ ಭಾಗವಹಿಸಿದ್ದ ಇಬ್ಬರು ವಿದ್ಯಾರ್ಥಿಗಳ ಜತೆ ಪ್ರಧಾನಿ ಶ್ರೀ ಮೋದಿಯವರು ಸಂವಾದ ನಡೆಸಿದರು. ಅರುಣಾಚಲ ಪ್ರದೇಶದ ಗ್ಯಾಮರ್ ನ್ಯೋಕುಮ್, ಆಂಧ್ರಪ್ರದೇಶದ ಎನ್‌ಐಟಿಯ ಪ್ರಥಮ ವರ್ಷದ ವಿದ್ಯಾರ್ಥಿ. ಕಾಲೇಜಿನಲ್ಲಿ **'ಯುವ ಸಂಗಮ್'** ಬಗ್ಗೆ ತಿಳಿದು, ಇಂಟರ್‌ನೆಟ್‌ನಿಂದ ಹೆಚ್ಚಿನ ಮಾಹಿತಿ ಪಡೆದು **'ಯುವ ಸಂಗಮ್'** ಯೋಜನೆಯಡಿಯಲ್ಲಿ ರಾಜಸ್ಥಾನದ ಪ್ರವಾಸ ಮಾಡಿ ಅಲ್ಲಿನ ಶ್ರೀಮಂತ ಸಂಸ್ಕೃತಿಯ ಅನುಭವ ಪಡೆದವರು. ರಾಜಸ್ಥಾನದ ರೋಚಕ ಸಂಸ್ಕೃತಿಯ ಬಗ್ಗೆ ಪ್ರಧಾನಿಯೊಂದಿಗೆ ತಮ್ಮ ಅನುಭವವನ್ನು ಹಂಚಿಕೊಂಡರು. ಪ್ರತಿಯಾಗಿ ಪ್ರಧಾನಿ ಶ್ರೀ ಮೋದಿ ಅವರು ಅರುಣಾಚಲದ ಗಡಿ ಕಾಯುವ ಸೈನಿಕರು ರಾಜಸ್ಥಾನದವರು ಎಂದು ತಿಳಿಸಿದರು.

ಬಿಹಾರದ ಸಸಾರಾಮ್‌ನ ವಿಶಾಖಾಸಿಂಗ್, ಕಂಪ್ಯೂಟರ್ ಸೈನ್ಸ್ ದ್ವಿತೀಯ ವರ್ಷದ ವಿದ್ಯಾರ್ಥಿನಿ. ಕಾಲೇಜಿನ ವಾಟ್ಸಾಪ್ ಗ್ರೂಪ್‌ನಿಂದ 'ಯುವ ಸಂಗಮ್' ಬಗ್ಗೆ ತಿಳಿದು ತಮಿಳುನಾಡಿಗೆ ಪ್ರವಾಸ ಹೋಗಿದ್ದರು. 'ನೀವು ಹೊಸ ಸಂಸ್ಕೃತಿ ಬಗ್ಗೆ ಏನು ಕಲಿತಿರಿ? ವಿಭಿನ್ನ ಆಹಾರಗಳನ್ನು ಪ್ರಯತ್ನಿಸಿದ್ದಿರಾ?' ಎಂದು ಪ್ರಧಾನಿ ಅವರು ಕೇಳಿದಾಗ, ಅಲ್ಲಿನ ಆಹಾರ ಸಂಸ್ಕೃತಿ ವಿಭಿನ್ನ. ಎಲ್ಲವೂ ಅದ್ಭುತ ಎಂದು ವಿಶಾಖಾ ಅವರು ಉತ್ತರಿಸಿದರು.

# ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ





























*ಕಾಲೇ ವರ್ಷಂತು ಪರ್ಜನ್ಯಃ*

# ವಯಂ ಪಂಚಾಧಿಕಂ ಶತಃ | ಸಮಷ್ಟಿ ಧರ್ಮದ ಆಧಾರ ಮಾತು

ಧರ್ಮರಾಜ - ದುರ್ಯೋಧನಾಧಿಗಳಿಗೆ ಇರುವ ದ್ವೇಷ ಮನೋಭಾವ ಜಗತ್ತಿಗೇ ತಿಳಿದಿದೆ. ಆದರೆ, ಸತ್ಯವೇನೆಂದರೆ ''ದುರ್ಯೋಧನ'' ''ಪಾಂಡವರನ್ನು'' ಅಪಾದ ಮಸ್ತಕ ದ್ವೇಷ ಮಾಡುತ್ತಿದ್ದ. ಪಾಂಡವರ ನಾಶವೇ ತನ್ನ ಜೀವನದ ಉದ್ದೇಶ ಎಂದು ಭಾವಿಸಿ, ಅದಕ್ಕಾಗಿ ತನ್ನ ಜೀವ ಇರುವವರೆಗೆ ಹೋರಾಡಿದ. ಅಂತಹ ದೃಷ್ಟನ ಬಗ್ಗೆ ಕೂಡ ಧರ್ಮರಾಜ ಹೇಗಿದ್ದ ಎನ್ನಲು ಈ ಘಟನೆ ಸಾಕು. ಯಕ್ಷನೊಬ್ಬ ದುರ್ಯೋಧನ ಮತ್ತು ಅವರ ಪರಿವಾರವನ್ನು ಸೋಲಿಸಿ ಸೆರೆಹಿಡಿದಿದ್ದ. ದುರ್ಯೋಧನನ ಮೋಸದ ಪಗಡೆಯಾಟದ ಕಾರಣ ಸೋತು ಪಾಂಡವರು ಕಾಡಿಗೆ ಸೇರಿದ್ದರು.

ಕಾಡಿನಲ್ಲಿ ವಾಸ ಮಾಡುತ್ತಿದ್ದ ಪಾಂಡವರು ಮತ್ತು ಅವರ ಪತ್ನಿ ದ್ರೌಪದಿ ದೇವಿಯ ಹೊಟ್ಟೆ ಉರಿಸಿ ವಿಜೃಂಭಿಸಲು, ತಮ್ಮ ''ವೈಭವವನ್ನು ಪ್ರದರ್ಶಿಸಿ'' ಪಾಂಡವರಿಗೆ ತಮ್ಮ ಪರಿಸ್ಥಿತಿ ಬಗ್ಗೆ ಲಜ್ಜೆಯಾಗುವಂತೆ ಮಾಡುವುದು ಕೌರವರ ''ಉದ್ದೇಶವಾಗಿತ್ತು''. ಆದರೆ, ಯಕ್ಷನೊಬ್ಬ ಆಗಮಿಸಿ, ಕೌರವರ ''ಅಹಂಕಾರದ ಘಮಂಡನ್ನು'' ಮುರಿದು, ತನ್ನ ಕೈಸೆರೆ ಮಾಡಿಕೊಂಡು ತನ್ನ ಲೋಕಕ್ಕೆ ಪ್ರಯಾಣ ಬೆಳೆಸಿದ. ದುರ್ಯೋಧನನ ಹೆಂಡತಿ ಭಾನುಮತಿ ಅಳುತ್ತಾ ಬಂದು ಧರ್ಮರಾಜನಿಗೆ ನಮಸ್ಕರಿಸಿ ತನ್ನ ಪತಿಯನ್ನು ಸೆರೆಯಿಂದ ಬಿಡಿಸಲು ಸೆರಗೊಡ್ಡಿ ಬೇಡುತ್ತಾಳೆ. ನಾವು ಮಾಡುವ ಕೆಲಸವನ್ನು ಯಕ್ಷನೇ ಮಾಡಿದ್ದಾನೆ, ನಾವು ಸಂತಸ ಪಡಬೇಕು ಎಂದು ಭೀಮಾರ್ಜುನ ನಕುಲ ಸಹದೇವರು ವಾದ ಮಂಡಿಸಿದಾಗ, ''ದೂರದೃಷ್ಟಿ, ಸಮಯಪ್ರಜ್ಞೆ, ಸಮಷ್ಟಿ ಧರ್ಮ'' ಪಾಲಿಸಲು ಧರ್ಮರಾಜ ಹೇಳುವ ಮಾತು ನಾವು - ನಾವು, ಪಾಂಡವರು ಕೌರವರು ಸಂಘರ್ಷ ಮಾಡುವಾಗ ''ನಾವು ಐದು, ಕೌರವರು ನೂರು'', ಹೊರಗಿನ ಶತ್ರು ಬಂದಾಗ ನಾವೆಲ್ಲ ಸೇರಿ 105 ''ವಯಂ ಪಂಚಾದಿಕಂ ಶತಂ'' ಮಾನಸಿಕತೆ ನಮ್ಮದಾಗಬೇಕು ಎಂದು. ಕುಟುಂಬಕ್ಕೆ, ರಾಜ್ಯಕ್ಕೆ, ರಾಷ್ಟ್ರಕ್ಕೆ ಅರ್ಥಪೂರ್ಣವಾಗಿ ಅನ್ವಯವಾಗುವ ದೃಷ್ಟಿಕೋನ. ಹಾಗಾದಾಗ ಮಾತ್ರ ನಾವು ಉಳಿಯುತ್ತೇವೆ.

ನಮ್ಮದು ಪ್ರಜಾಪ್ರಭುತ್ವ ದೇಶ. ಇಲ್ಲಿನ ವ್ಯವಸ್ಥೆ, ಕಾನೂನಿನಂತೆ ಚುನಾವಣೆ ನಡೆಯುವುದು, ಅನೇಕ ಪಕ್ಷಗಳು ಭಾಗವಹಿಸುತ್ತದೆ, ಬಹುಮತ ಪಡೆದ ಚುನಾಯಿತ ಸದಸ್ಯರ ಆಯ್ಕೆಯಾಗುತ್ತದೆ, ಆಡಳಿತ ಪಕ್ಷ, ಪ್ರತಿಪಕ್ಷ ಎಂಬ ವ್ಯವಸ್ಥೆಯಲ್ಲಿ ರಾಜ್ಯದ ಆಡಳಿತ ಸೂತ್ರದ ಹಂಚಿಕೆಯಾಗುತ್ತದೆ. ರಾಜ್ಯದ ಜನರ ಹಿತಾಸಕ್ತಿಯೇ ಆಡಳಿತದ ಮುಖ್ಯ ಗುರಿ. ಚುನಾಯಿತರೆಲ್ಲರೂ ಈ ಸಮಷ್ಟಿ ಹಿತ ಕಾಯುವ ಪ್ರವೃತ್ತಿ ಬೆಳೆಸಿಕೊಂಡು, ಕಾರ್ಯ ಮಾಡಿದಾಗ ಮಾತ್ರ ರಾಜ್ಯದ ಜನತೆ, ಅರ್ಥಾತ್ ಮತದಾರರು ಹಾಗೂ ಅವರ ಆಶ್ರಿತರು ''ಸುಖ, ಗೌರವ, ಶಾಂತಿಯಿಂದ'' ಸಂತೃಪ್ತಿಯಾದ ಬದುಕು ಸಾಗಿಸಲು ಸಾಧ್ಯ. ಪರಸ್ಪರ ಅಭಿಪ್ರಾಯ, ಭೇದ, ಭಿನ್ನ ಭಿನ್ನವಾದ ದೃಷ್ಟಿಕೋನದ ವಿಮರ್ಶೆ ಆದರೂ, ಅಂತಿಮವಾಗಿ ಸಾಮೂಹಿಕವಾದ, ಸರ್ವಾನುಮತದ ತೀರ್ಮಾನ ಆದಾಗ ಮಾತ್ರ ಪ್ರಜಾಪ್ರಭುತ್ವದ ಸಾರ್ಥಕತೆ ಜನರಿಗೂ ''ಅನುಭವಕ್ಕೆ ಬರುತ್ತದೆ. ಸ್ವತಂತ್ರ ಚಿಂತನೆ, ಕಾರ್ಯ ಯೋಜನೆ, ನೀತಿಯನ್ನು ರೂಪಿಸಿಕೊಂಡು, ತಮ್ಮ ಪಕ್ಷದ ಬೆಳವಣಿಗೆಗೆ, ಮತದಾರರನ್ನು ಸೆಳೆಯುವ ತಂತ್ರ ರೂಪಿಸುವುದು ಪ್ರತಿ ಪಕ್ಷಕ್ಕೂ ಅನಿವಾರ್ಯ. ಆದರೆ ರಾಜ್ಯದ ಹಿತಕ್ಕಾಗಿ ವಯಂ ಪಂಚಾದಿಕಂ ಶತಂ, ''ಸಮಷ್ಟಿ ಧರ್ಮ'' ಮನಃಪೂರ್ವಕವಾಗಿ ಪಾಲಿಸಿದಾಗ ಮಾತ್ರ ನಾನು ಉಳಿಯುವೆ, ನಾವು ಉಳಿಯುತ್ತೇವೆ, ಈ ಧರ್ಮ ಉಳಿಸುವ, ತಿಳಿಸುವ, ಪಾಲಿಸುವ ಅಗತ್ಯ ಎಂದಿಗಿಂತಲೂ ಇಂದು ಅತೀ ಪ್ರಾಮುಖ್ಯವಾದ ವಿಷಯವಾಗಿದೆ.

ದಿವಸ್ಪತಿ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 025 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**